ಶಿಕ್ಷಣತಜ್ಞ ಡಾ.ಹೆಚ್.ಎಂ.ಗಂಗಾಧರಯ್ಯ ಅವರ ಜೀವನ ಮತ್ತು ಸಾಧನೆ

(ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕಿ

ವೀಣಾಕುಮಾರಿ ಡಿ.ಎಂ.

ಮಾರ್ಗದರ್ಶಕರು

ಡಾ. ಎಸ್.ಚಿನ್ನಸ್ವಾಮಿ ಸೋಸಲೆ

ಮುಖ್ಯಸ್ಥರು ಹಾಗೂ ಸಹ ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೦

ಶಿಕ್ಷಣತಜ್ಞ
ಡಾ.ಹೆಚ್.ಎಂ.ಗಂಗಾಧರಯ್ಯ ಅವರ
ಜೀವನ ಮತ್ತು ಸಾಧನೆ

(ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕಿ
ವೀಣಾಕುಮಾರಿ ಡಿ.ಎಂ.

ಮಾರ್ಗದರ್ಶಕರು
ಡಾ. ಎನ್.ಚಿನ್ನಸ್ವಾಮಿ ಸೋಸಲೆ
ಮುಖ್ಯಸ್ಥರು ಹಾಗೂ ಸಹ ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೦

861A

ಸಂಶೋಧಕರ ಪ್ರಮಾಣ ಪತ್ರ

ಶಿಕ್ಷಣತಜ್ಞ ಡಾ.ಹೆಚ್.ಎಂ.ಗಂಗಾಧರಯ್ಯ ಅವರ ಜೀವನ ಮತ್ತು ಸಾಧನೆ ಎಂಬ ನಿಬಂಧವನ್ನು ಡಾ.ಎನ್.ಚಿನ್ನಸ್ವಾಮಿ ಸೋಸಲೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Veenakumari D.M.

ವೀಣಾಕುಮಾರಿ ಡಿ.ಎಂ.
ಸಂಶೋಧನಾ ವಿದ್ಯಾರ್ಥಿನಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : 15.09.2010

ಮಾರ್ಗದರ್ಶಕರ ದೃಢೀಕರಣ ಪತ್ರ

ಶಿಕ್ಷಣತಜ್ಞ ಡಾ.ಹೆಚ್.ಎಂ.ಗಂಗಾಧರಯ್ಯ ಅವರ ಜೀವನ ಮತ್ತು ಸಾಧನೆ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ವಿಭಾಗದ ಎಂ.ಫಿಲ್. ಪದವಿಗಾಗಿ ವೀಣಾಕುಮಾರಿ ಡಿ.ಎಂ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಎಸ್.ಚಿನ್ನಸ್ವಾಮಿ ಸೋಸಲೆ
ಸಹ ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : 15/09/10



ಶಿಕ್ಷಣ ತಜ್ಞ ಡಾ.ಹೆಚ್. ಎಂ. ಗಂಗಾಧರಯ್ಯ

ಪರಿವಿಡಿ

ಅಧ್ಯಾಯ ಒಂದು

ಪೀಠಿಕೆ

೧.೧. ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ

೧.೨. ಈವರೆಗಿನ ಅಧ್ಯಯನಗಳ ಸಮೀಕ್ಷೆ

೧.೩. ಅಧ್ಯಯನ ವಿಧಿ-ವಿಧಾನ ಹಾಗೂ ಸ್ವರೂಪ

೧

ಪೀಠಿಕೆ

ಮಾನವನನ್ನು ಹುಟ್ಟಿನಿಂದ ಮೇಲು ಅಥವಾ ಕೀಳು ಎಂದು ಹೇಳುವುದು ಅತ್ಯಂತ ಅಮಾನವೀಯವಾದ ಅಂಶವಾಗಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಹುಟ್ಟಿನ ಆಧಾರದಿಂದ ಇಂತಹ ಒಂದು ವಿಭಜನೆಯಾಗುವುದರಿಂದ ಇದು ಸಮಾಜದ ಪ್ರಗತಿಗೆ ಮಾರಕವಾಗುವುದನ್ನು ಇತಿಹಾಸದಿಂದಲೂ ಅರಿಯಬಹುದಾಗಿದೆ. ಆದಿಕಾಲದ ಮಾನವ ನಾಗರಿಕ ಬದುಕಿಗೆ ಬರುವ ಸಂದರ್ಭದಲ್ಲಿ ಹಲವು ಮಾರ್ಪಾಡುಗಳಾಗಿ, ತಮ್ಮ ಅನುಕೂಲಕ್ಕಾಗಿ ಹಲವು ವ್ಯಾಖ್ಯಾನಗಳನ್ನು ಕಟ್ಟಿಕೊಂಡನು. ಅವು ಜಡವಾಗಿ, ಮೂಢನಂಬಿಕೆಗಳಾಗಿ ಮಾನವ ತನ್ನ ಸ್ವಾರ್ಥಕ್ಕೆ, ನೂರಾರು ಕಟ್ಟುಪಾಡುಗಳನ್ನು ವಿಧಿಸಿಕೊಂಡನು. ಈ ಕಟ್ಟುಪಾಡುಗಳೇ ಮುಂದೆ ಸಮಾಜದಲ್ಲಿ ಜಾತಿವ್ಯವಸ್ಥೆ ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಜಾತಿ ಎಂಬ ಪದವನ್ನು ಇಂಗ್ಲಿಷಿನ ''ಕ್ಯಾಸ್ಟ್'' ಎಂಬ ಪದಕ್ಕೆ ತತ್ಸಮಾನವಾಗಿ 'ವರ್ಣ' ಎಂಬ ಅರ್ಥದಲ್ಲಿ ಬಳಸುವುದುಂಟು. ಜಾತಿ ಎನ್ನುವುದು ಸಮಾಜದೊಳಗೆ ಪ್ರತ್ಯೇಕಗೊಂಡ ವಿಭಿನ್ನವಾದ ವಿಶೇಷ ಘಟಕ. ಅದು ಇನ್ನೊಂದು ಘಟಕದೊಂದಿಗೆ ಯಾವುದೇ ಸಂಬಂಧವನ್ನು ನಿರಾಕರಿಸುತ್ತದೆ. ಒಟ್ಟಿಗೆ ಊಟ ಮಾಡುವಂತಿಲ್ಲ. ವಿವಾಹವಾಗುವಂತಿಲ್ಲ. ಹೀಗೆ ಅಡ್ಡಗೋಡೆಗಳು ನಿರ್ಮಾಣವಾಗಿಬಿಟ್ಟಿವೆ.

ಈ ಹಿನ್ನೆಲೆಯಲ್ಲಿಯೇ ಭಾರತೀಯ ಸಮಾಜ ನಿರ್ಮಾಣವಾಗಿರುವುದನ್ನು ಗುರುತಿಸಬಹುದಾಗಿದೆ. ಧರ್ಮಗ್ರಂಥಗಳಲ್ಲಿ ಉಲ್ಲೇಖಿಸಿರುವಂತೆ ಪ್ರಾಚೀನ ಹಿಂದೂ ಸಮಾಜವು ನಾಲ್ಕು ಸ್ತರಗಳಿಂದ ಕೂಡಿದ್ದು, ಅವುಗಳನ್ನು 'ವರ್ಣ'ಗಳೆಂದು ಕರೆಯಲಾಗಿದೆ. ಅವುಗಳೆಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ. ಇಂದಿನ ಆಧುನಿಕ ಕಾಲದಲ್ಲಿ ಅಸ್ಪೃಶ್ಯರೆಂದು ಪರಿಗಣಿತವಾಗಿರುವ ಪರಿಶಿಷ್ಟ ಜಾತಿಗಳನ್ನು ಐದನೇ ವರ್ಣವೆಂದು ಸಂಕೇತಿಸುವ ಪಂಚಮರೆಂದು ಕರೆಯಲಾಗಿದ್ದರೂ ಧರ್ಮಶಾಸ್ತ್ರಗಳ ಕಾಲದಲ್ಲಿ ಕೇವಲ ನಾಲ್ಕು ವರ್ಣಗಳು ಮಾತ್ರ ಇದ್ದವು ಎಂಬುದು ಗಮನಾರ್ಹ. ವರ್ಣಗಳ ಉಗಮದ ಬಗ್ಗೆ ಸಂಬಂಧಪಟ್ಟಂತೆ ಋಗ್ವೇದದ ಪುರುಷ ಸೂಕ್ತದಲ್ಲಿ ಬರುವ ವಿವರ ಹೀಗಿದೆ. ವಿರಾಟ ಪುರುಷನ ಶಿರದಿಂದ ಬ್ರಾಹ್ಮಣರು, ಬಾಹುಗಳಿಂದ ಕ್ಷತ್ರಿಯರು, ತೊಡೆಗಳಿಂದ ವೈಶ್ಯರು ಮತ್ತು ಪಾದಗಳಿಂದ

ಶೂದ್ರರು ಜನಸಿದರೆಂದು ಹೇಳಿದೆ. ಶಿರದಿಂದ ಜನಿಸಿದ ಬ್ರಾಹ್ಮಣರು ವೇದ ಅಧ್ಯಯನ ಮತ್ತು ಪೌರೋಹಿತ್ಯದಲ್ಲಿಯೂ, ಬಾಹುಗಳಿಂದ ಜನಿಸಿದ ಕ್ಷತ್ರಿಯರು ದೈಹಿಕ ಶಕ್ತಿ, ಸಾಮರ್ಥ್ಯ ಪ್ರತಿನಿಧಿಸುವವರಾಗಿಯೂ, ತೊಡೆಗಳಿಂದ ಜನಿಸಿದ ವೈಶ್ಯರು ಕೃಷಿ ಮತ್ತು ವ್ಯಾಪಾರದಲ್ಲಿಯೂ, ಪಾದಗಳಿಂದ ಜನಿಸಿದ ಶೂದ್ರರು ಮೇಲಿನ ಮೂರು ವರ್ಗಗಳಿಗೆ ಸೇವೆ ಸಲ್ಲಿಸುವ ಕಾರ್ಯದಲ್ಲಿ ನಿರತವಾಗಿದ್ದರೆಂದು ಹೇಳಲಾಗಿದೆ.

ಮನುಸ್ಮೃತಿಯಲ್ಲಿ "ವೇದಾಭ್ಯಾಸೊ ಬ್ರಾಹ್ಮಣಸ್ಯ" ಎಂದು ಹೇಳಲಾಗಿದೆ.[೨] ಅಂದರೆ ಬ್ರಾಹ್ಮಣರಿಗೆ ಮಾತ್ರ ವೇದಾಭ್ಯಾಸ ಅಥವಾ ಶಿಕ್ಷಣದ ಅವಕಾಶವನ್ನು ನೀಡಲಾಗಿದೆ. ಆದರೆ ಶೂದ್ರರಿಗೆ ಉಪನಯನ ಸಂಸ್ಕಾರದ ಅವಕಾಶವಿಲ್ಲದ ಕಾರಣ ಅವರಿಗೆ ವೇದಾಭ್ಯಾಸ ಅಂದರೆ ಅಕ್ಷರ ಕಲಿಕೆಯ ಅವಕಾಶವೇ ಇರಲಿಲ್ಲ. ಒಂದು ವೇಳೆ ಶೂದ್ರರು ವೇದಾಭ್ಯಾಸ ನಿಷೇಧವನ್ನು ಮೀರಿ ವರ್ತಿಸಿದರೆ ಅವರ ನಾಲಿಗೆಯನ್ನು ಕತ್ತರಿಸುವಂಥ, ಕಿವಿಯಲ್ಲಿ ಕಾದ ಸೀಸವನ್ನು ಸುರಿಯುವಂಥ ಘೋರ ಶಿಕ್ಷೆಗೊಳಗಾಗುತ್ತಿದ್ದರು. ಶೂದ್ರರ ಸ್ಥಿತಿ ಇದಾದರೆ ವರ್ಣಕ್ಕೆ ಅಥವಾ ವರ್ಗಕ್ಕೆ ಸೇರದ ಊರಿನ ಹೊರಗೆ ವಾಸಿಸುತ್ತಿದ್ದ ದಲಿತರ ಸ್ಥಿತಿಗತಿಗಳು ಯಾವ ಬಗೆಯಲ್ಲಿದ್ದವು ಎಂಬುದು ಕೂಡ ಚಿಂತಿಸಬೇಕಾದ ವಿಷಯವಾಗಿದೆ. ಹಿಂದೂಧರ್ಮದ ಚತುರ್ವರ್ಣ ಪದ್ಧತಿಯಿಂದ ಉದ್ಭವಿಸಿದ ವರ್ಗ ಸಂಘರ್ಷದಲ್ಲಿ ದಲಿತರು ಬಲಿಪಶುಗಳಾದರು. ಈ ಜಾತಿಪದ್ಧತಿಯಲ್ಲಿ ಸಿಲುಕಿದ ಅಸ್ಪೃಶ್ಯರು ತಮ್ಮ ಸಾಮಾಜಿಕ ಅಸ್ತಿತ್ವವನ್ನು ಹಾಗೂ ವ್ಯಕ್ತಿತ್ವವನ್ನು ಕಳೆದುಕೊಂಡರು. ಮಾನವ ಮಾನವನನ್ನೇ ಮುಟ್ಟದ ಧರ್ಮದ ದಬ್ಬಾಳಿಕೆಯಲ್ಲಿ ದಲಿತರು ಉಸಿರುಕಟ್ಟಿ ಅದೇ ಧರ್ಮದಲ್ಲಿ ವಿಧಿಯಿಲ್ಲದೆ ಉಳಿಯುವುದು ಅನಿವಾರ್ಯವಾಯಿತು.

ಹಿಂದೂ ಧರ್ಮಕ್ಕೆ ಕಳಂಕವೆನಿಸಿದ ಅಸ್ಪೃಶ್ಯತೆಯನ್ನು ತೊಡೆದು ಹಾಕುವ ದಿಸೆಯಲ್ಲಿ ಪ್ರಯತ್ನಗಳಿಗೇನೂ ಕೊರತೆಯಿಲ್ಲ. ಭಾರತದಲ್ಲಿ ಹಲವಾರು ಮಹಾಪುರುಷರು ಕಾಲಕಾಲಕ್ಕೆ ಅಸ್ಪೃಶ್ಯತೆಯ ವಿರುದ್ಧ ಸಮರವನ್ನೇ ಸಾರಿರುವ ಪ್ರಯತ್ನಗಳು ನಡೆದಿವೆ ಮತ್ತು ನಡೆಯುತ್ತಿವೆ. ಕ್ರಿ.ಪೂ.೬ನೇ ಶತಮಾನದಲ್ಲಿಯೆ ಬುದ್ಧ ಈ ಪದ್ಧತಿಯನ್ನು ತೊಡೆದು ಹಾಕಿ ಸಾಮಾಜಿಕ ಸಮಾನತೆಯನ್ನು ಸ್ಥಾಪಿಸಲು ಪ್ರಯತ್ನಿಸಿದವರಲ್ಲಿ ಮೊದಲಿಗ. ಕರ್ನಾಟಕದಲ್ಲಿ ಕ್ರಿ.ಶ.೧೨ನೇ ಶತಮಾನದಲ್ಲಿ ಬಸವಣ್ಣ ಈ ಅಸ್ಪೃಶ್ಯತೆಯನ್ನು ತೊಲಗಿಸಲು ಪ್ರಯತ್ನಿಸಿದರಲ್ಲದೆ ಎಲ್ಲರಿಗೂ ಸಮಾನ ಗೌರವ ಸ್ಥಾನಮಾನಗಳನ್ನು ಧರ್ಮ ಮತ್ತು ಸಮಾಜದಲ್ಲಿ ನೀಡಬೇಕೆಂದು ಪ್ರಚಾರಪಡಿಸಿದರು. ಅಂತರ್‌ಜಾತೀಯ ವಿವಾಹಗಳಿಗೆ ಪ್ರೋತ್ಸಾಹ ನೀಡಿ ಒಂದು ಸಾಮಾಜಿಕ ಕ್ರಾಂತಿಯನ್ನೇ ಮಾಡಿರುವುದು ಚರಿತ್ರೆಯ ಮುಖ್ಯ ವಿಷಯವಾಗಿದೆ.

ಭಾರತಕ್ಕೆ ಆಗಮಿಸಿದ ಬ್ರಿಟಿಷರು ಜಾರಿಗೆ ತಂದ ಉದಾರವಾದಿ ಶಿಕ್ಷಣ ಪದ್ಧತಿಯು ಅಸಹಾಯಕ ಮತ್ತು ನಿರ್ಗತಿಕ ಕತ್ತಲ ಬದುಕುಗಳಿಗೆ ಹೊಸ ಭರವಸೆಯನ್ನು ಮೂಡಿಸಿತು. ಶೂದ್ರರು, ದಲಿತರು ತಮ್ಮ ಹಕ್ಕುಗಳನ್ನು ಪ್ರಶ್ನಿಸಿ ಪಡೆಯುವ ಜಾಗೃತಿಯನ್ನು ಬೆಳೆಸಿಕೊಳ್ಳಲಾರಂಭಿಸಿದರು. ಆದರೆ ಬ್ರಿಟಿಷ್

ಸರ್ಕಾರವು ತನ್ನ ಆಡಳಿತವನ್ನು ಭದ್ರಪಡಿಸುವುದಕ್ಕಾಗಿ ಸವರ್ಣೀಯರ ಪರವಾಗಿಯೇ ಇದ್ದಿತು ಎನ್ನುವುದು ಗಮನಾರ್ಹ. ಈ ನಡುವೆಯೂ ಬರೋಡದ ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ ಅವರು ದಲಿತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದರು. ಕೊಲ್ಲಾಪುರದ ಸಾಹು ಮಹಾರಾಜರು, ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರು ಪ್ರಥಮವಾಗಿ ಮೀಸಲಾತಿಯನ್ನು ನೀಡುವುದರ ಮೂಲಕ ದಲಿತರು ಶಿಕ್ಷಣ ಪಡೆಯಲು, ಬೇರೆ ಬೇರೆ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸಲು ಅವಕಾಶ ಮಾಡಿಕೊಟ್ಟರು. ಈ ನಿಟ್ಟಿನಲ್ಲಿ ಗಾಂಧೀಜಿ ಹಾಗೂ ಅಂಬೇಡ್ಕರ್ ಅವರ ಪ್ರಯತ್ನ ಭಾರತದ ಚರಿತ್ರೆಯಲ್ಲಿ ಮಹತ್ವವಾಗಿದೆ.

ಈ ಹಿನ್ನೆಲೆಯಲ್ಲಿ ಸ್ವತಂತ್ರಪೂರ್ವದಲ್ಲಿಯೇ ಮೈಸೂರು ಸಂಸ್ಥಾನದ ಅಸ್ಪೃಶ್ಯರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನವನ್ನು ಮಾಡಿದವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ಅವರ ಸಂಸ್ಥಾನವನ್ನು ಮಾದರಿ ಸಂಸ್ಥಾನ ಎಂದು ಗುರುತಿಸಲಾಗಿತ್ತು. ಅನಾದಿ ಕಾಲದಿಂದಲೂ ವಿದ್ಯೆಯಿಂದ ವಂಚಿತರಾಗಿ, ಶೋಷಣೆಗೆ ಒಳಗಾಗಿ ಸಮಾಜದಿಂದ ಹೊರಗುಳಿದಂತಹ ಜನರಾದ ಅಸ್ಪೃಶ್ಯರು, ಶೋಷಿತರು ಮತ್ತು ಕೆಳವರ್ಗದವರಿಗೆ ಮೊದಲ ಬಾರಿಗೆ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸಿಕೊಟ್ಟ ಕೀರ್ತಿ ನಾಲ್ವಡಿ ಅವರ ಮೈಸೂರು ಸಂಸ್ಥಾನಕ್ಕೆ ಸಲ್ಲುತ್ತದೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ಕಾಲಘಟ್ಟದಲ್ಲಿಯೇ ಮಾದರಿ ಸಂಸ್ಥಾನವನ್ನಾಗಿ ಮಾಡಿದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಸಲ್ಲುತ್ತದೆ. ಅವರ ಸಂಸ್ಥಾನದಲ್ಲಿ ದಿವಾನರುಗಳಾಗಿ ಸೇವೆ ಸಲ್ಲಿಸಿದ ಎಂ.ವಿಶ್ವೇಶ್ವರಯ್ಯ, ಕಾಂತರಾಜ ಅರಸು, ಎ.ಆರ್.ಬ್ಯಾನರ್ಜಿ, ಮಿರ್ಜಾ ಇಸ್ಮಾಯಿಲ್, ಕೆ.ಶೇಷಾದ್ರಿ ಅಯ್ಯರ್ ಅವರು ನೀಡಿದ ಉತ್ತಮ ಆಡಳಿತ ಮತ್ತು ಪರಿಶ್ರಮ ಇದಕ್ಕೆ ಕಾರಣವೆನ್ನಬಹುದಾಗಿದೆ.

ಪಾಶ್ಚಾತ್ಯ ಶಿಕ್ಷಣದಿಂದ ಪ್ರಭಾವಿತರಾದ ಅನೇಕ ದೇಶೀಯ ವ್ಯಕ್ತಿಗಳು ಅನಾದಿ ಕಾಲದಿಂದಲೂ ಹಿಂದೂ ಸಮಾಜಕ್ಕೆ ಅಂಟಿಕೊಂಡೇ ಬಂದಿದ್ದ ಅಸ್ಪೃಶ್ಯತೆಯ ಬಗ್ಗೆ ಮಾತನಾಡಲು ಆರಂಭಿಸಿದರು. ಅದನ್ನು ನಿರ್ಮೂಲನೆ ಮಾಡಲು ರಾಷ್ಟ್ರೀಯವಾದಿಗಳು ಸಂಘಸಂಸ್ಥೆಗಳನ್ನು ಸ್ಥಾಪಿಸಿಕೊಂಡು ವಿರೋಧಿ ಚಳವಳಿಯನ್ನು ನಡೆಸಿದರು. ಆದರೆ ಈ ಕಾರ್ಯದಲ್ಲಿ ಅವರೆಷ್ಟು ಯಶಸ್ವಿಯಾದರೆಂಬುದು ಮುಖ್ಯ. ಹಾಗೆಯೇ ಮೈಸೂರು ಸಂಸ್ಥಾನದಲ್ಲಿ ಸಮಾಜಮುಖಿಯಾಗಿ ನಿಸ್ವಾರ್ಥ ಸೇವೆಯನ್ನು ಮಾಡಿ ಚರಿತ್ರೆಯ ಪುಟಗಳಲ್ಲಿ ದಾಖಲಾಗದೆ ಎಲೆಮರೆ ಕಾಯಿಯಾಗಿಯೇ ಉಳಿದುಕೊಂಡವರೆಂದರೆ ಶ್ರೀಯುತ ಪಂಚಮರ ಆರ್.ಗೋಪಾಲಸ್ವಾಮಿ ಅಯ್ಯರ್ ಅವರು. ಇವರು ಮೈಸೂರು ಸಂಸ್ಥಾನದಲ್ಲಿ ಪಂಚಮರ ಶೈಕ್ಷಣಿಕ, ಸಾಮಾಜಿಕ ಏಳಿಗೆಗಾಗಿ ತಮ್ಮ ವೈಯಕ್ತಿಕ ಜೀವನವನ್ನು ಮುಡುಪಾಗಿಟ್ಟು, ಪಂಚಮರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರಗತಿ ಹೊಂದಲು ಕಾರಣರಾದರು.

ಗೋಪಾಲಸ್ವಾಮಿ ಅಯ್ಯರ್ ಅವರ ಪರಿಶ್ರಮದ ಫಲದಿಂದ ಸ್ವಾತಂತ್ರ್ಯ ಪೂರ್ವದಲ್ಲಿಯೇ ಅನೇಕ ದಲಿತರು ಶಿಕ್ಷಣ ಪಡೆದು ಸಮಾಜದಲ್ಲಿ ಉನ್ನತ ಸ್ಥಾನಮಾನ ಪಡೆದು ಅಜರಾಮರರಾಗಿದ್ದಾರೆ.

ಅಂತಹ ಪ್ರಮುಖ ವ್ಯಕ್ತಿಗಳಲ್ಲಿ ಅಧ್ಯಯನದ ಮುಖ್ಯ ಕೇಂದ್ರ ಬಿಂದುವಾಗಿರುವ ಶ್ರೀ ಹೆಚ್.ಎಂ.ಗಂಗಾಧರಯ್ಯ ಅವರು ಕೂಡ ಒಬ್ಬರು. ನಿಸ್ವಾರ್ಥತೆಯಿಂದ ಕೆಲಸ ಮಾಡಿದರೆ ಒಬ್ಬ ಮನುಷ್ಯ ಏನನ್ನೆಲ್ಲ ಸಾಧಿಸಬಲ್ಲರು ಎಂಬುದಕ್ಕೆ ಗಂಗಾಧರಯ್ಯ ಅವರು ಪ್ರತ್ಯಕ್ಷ ನಿದರ್ಶನ.

ಕ್ರಿಯಾತ್ಮಕ ಮನುಷ್ಯ ಒಂದು ಗುರುತರವಾದ ಸ್ಥಾನದಲ್ಲಿದ್ದಾಗ ಯಾವುದೇ ಸೃಜನಾತ್ಮಕ ಕಾರ್ಯದಲ್ಲಿ ಗುರಿ ಮುಟ್ಟಬಹುದು. ಉದ್ದೇಶವನ್ನು ಸಾಧಿಸಲು ಆಗದೆಯೂ ಹೋಗಬಹುದು. ಆದರೆ ಅಸ್ಪೃಶ್ಯನಾಗಿ ಹುಟ್ಟಿ ಬಡತನದಲ್ಲಿ ಬೆಳೆದು ಉನ್ನತ ವ್ಯಾಸಂಗ ಮಾಡಲು ಸಾಧ್ಯವಾಗದೆ ಹೋದ ಒಬ್ಬ ವ್ಯಕ್ತಿ ಸೃಜನಾತ್ಮಕ ಕಾರ್ಯದಲ್ಲಿ ತೊಡಗಿ ತನ್ನ ಉದ್ದೇಶವನ್ನು ಮೈಗೂಡಿಸಿಕೊಂಡಿದ್ದಾನೆಂದರೆ ನಿಜವಾಗಿಯೂ ಆತ ಮಹತ್ತರದ ವ್ಯಕ್ತಿಯಾಗುತ್ತಾನೆ. ತನ್ನ ಸುತ್ತಮುತ್ತಲಿನ ಜನರ ಬಡತನ, ಅಜ್ಞಾನ, ಅಂಧಶ್ರದ್ಧೆ, ಸೋಮಾರಿತನ ಇತ್ಯಾದಿಗಳನ್ನು ಮನಗಂಡು, ಇವರು ಉದ್ಧಾರವಾಗಬೇಕಾದರೆ ಹಣದಿಂದ ಸಾಧ್ಯವಾಗುವುದಿಲ್ಲ ಎಂಬುದನ್ನು ಅರಿತುಕೊಂಡು, ಇವರಿಗೆ ಅರಿವು ಮೂಡಿ ಇವರ ಜೀವನ ಮಟ್ಟ ಉತ್ತಮವಾಗಬೇಕಾದರೆ, ಅಜ್ಞಾನ ತೊಲಗಬೇಕಾದರೆ, ಅಂಧಶ್ರದ್ಧೆ ದೂರವಾಗಬೇಕಾದರೆ, ಸಮಾಜದಲ್ಲಿ ಇತರರಿಗೆ ಸರಿಸಮಾನರಾಗಿ ನಿಲ್ಲಬೇಕಾದರೆ ಹಾಗೂ ಕೀಳರಿಮೆ ನಾಶವಾಗಬೇಕಾದರೆ ಇವರನ್ನು ಅಕ್ಷರಸ್ಥರನ್ನಾಗಿ ಮಾಡಿದರೆ ಮಾತ್ರ ಸಾಧ್ಯ ಎಂಬುದನ್ನು ಚಿಂತಿಸಿದರು. ಅದಕ್ಕಾಗಿ ಎಲ್ಲೆಲ್ಲಿ ಶೋಷಣೆಗೊಳಪಟ್ಟ ಜನ ವಾಸ ಮಾಡುತ್ತಿರುತ್ತಾರೋ ಅಂತಹ ಸ್ಥಳಗಳಲ್ಲಿ ಶಾಲೆಗಳನ್ನು ತೆರೆದು ಮಕ್ಕಳಿಗೆ ವಿದ್ಯಾದಾನವನ್ನು ಮಾಡುತ್ತಾ ಬಂದು ತಮ್ಮ ಧ್ಯೇಯ ಸಾಧನೆಯಲ್ಲಿ ಸಫಲತೆಯನ್ನು ಕಂಡುಕೊಂಡರು. ಆದರೆ ಈ ಕೆಲಸ ಒಬ್ಬ ಸಾಮಾನ್ಯ ವ್ಯಕ್ತಿಗೆ ಅಷ್ಟೊಂದು ಸುಲಭವಾದ ಕಾರ್ಯವೇನಲ್ಲ. ಶಿಕ್ಷಣದ ಬಗ್ಗೆ ಹೆಚ್ಚಿನ ಒಲವನ್ನು ಹೊಂದಿದ್ದು ಈ ಎಲ್ಲ ಕಾರ್ಯಗಳನ್ನು ಸಾಧಿಸಿದಂತಹ ಗಂಗಾಧರಯ್ಯ ಅವರಿಗೆ 'ಶಿಕ್ಷಣತಜ್ಞ' ಎಂದು ಕರೆದರೆ ಹೆಚ್ಚಿನ ಮಹತ್ವವಿರುತ್ತದೆ.

ಅವರು ಶಿಕ್ಷಣವನ್ನು ಪಡೆದದ್ದು ಕಡಿಮೆ. ಆದರೂ ಅವರ ಅನುಭವ, ಸೇವಾಬುದ್ಧಿ, ದೇಶಪ್ರೇಮ ಗಂಗಾಧರಯ್ಯ ಅವರಿಗೆ ಅಪಾರ ಜ್ಞಾನವನ್ನು, ಲೋಕಾನುಭವವನ್ನೂ ಕೊಟ್ಟಿದ್ದವು. ಅವರು ಗಾಂಧೀಜಿ ಹಾಗೂ ವಿವೇಕಾನಂದರಿಂದ ಪ್ರಭಾವಿತರಾದರು. ವಿದ್ಯಾಭ್ಯಾಸದಿಂದ ಮಾತ್ರವೇ ಜನರ ಅಭಿವೃದ್ಧಿ ಸಾಧ್ಯ ಎಂದು ತಿಳಿದ ಅವರು ತುಮಕೂರು ತಾಲ್ಲೂಕಿನ ಗೊಲ್ಲಹಳ್ಳಿಯಲ್ಲಿ ಶಾಲೆಯನ್ನು ಸ್ಥಾಪಿಸಿದರು. ಜೊತೆಗೆ ದಲಿತ ವಿದ್ಯಾರ್ಥಿ ನಿಲಯವನ್ನು ತೆರೆದರು.

ಗಂಗಾಧರಯ್ಯ ಅವರು ಸ್ವಾತಂತ್ರ್ಯ ಪೂರ್ವದಲ್ಲಿಯೇ ರಾಜಕೀಯಕ್ಕೆ ಪ್ರವೇಶಿಸಿದರು. ಅವರು ೧೯೪೫ರಲ್ಲಿಯೇ ಹಳೆಯ ಮೈಸೂರಿನ ನ್ಯಾಯ ವಿಧಾಯಕ ಸಭೆಗೆ ಸ್ಪರ್ಧಿಸಿ ಜಯಶೀಲರಾದರು. ಮೈಸೂರು ವಿಶ್ವವಿದ್ಯಾನಿಲಯದ ಕೌನ್ಸಿಲ್ ಸದಸ್ಯರೂ ಆಗಿದ್ದರು. ಅವರು ಅನೇಕ ವರ್ಷ ರಚನಾತ್ಮಕ ಕಾರ್ಯಕರ್ತರಾಗಿ ತಮ್ಮ ಜನರ ಅಗತ್ಯ ಅವಶ್ಯಕತೆಗಳನ್ನು ಅರಿತು ಅವುಗಳನ್ನು ಒದಗಿಸಿದರು. ತಮ್ಮ

ಎಲ್ಲ ಶಕ್ತಿಗಳನ್ನೂ ಶಿಕ್ಷಣ ಪ್ರಚಾರ, ಮೌಲ್ಯ ಆಧಾರಿತ ಜೀವನ, ಪ್ರಾಮಾಣಿಕ ದುಡಿಮೆಯ ಪ್ರೇರಣೆ ಇವುಗಳಿಗೆ ವಿನಿಯೋಗಿಸಿದರು. ಒಬ್ಬ ಸಾಮಾನ್ಯ ದಲಿತ ತಾನು ಉನ್ನತ ಶಿಕ್ಷಣ ಪಡೆಯದಿದ್ದರೂ ಸಮಾಜಕ್ಕೆ ವಿವಿಧ ರೀತಿಯ ಶಿಕ್ಷಣ ಸಂಸ್ಥೆಗಳನ್ನು ಒದಗಿಸಿದುದು ಅಪೂರ್ವ ಸಾಧನೆ. ಯಾವ ಸಮಾಜದಲ್ಲಿ ಇವರಿಗೆ ಸೌಲಭ್ಯ ದೊರಕಿರಲಿಲ್ಲವೋ ಅಂತಹ ಸಮಾಜಕ್ಕೆ ಸಂಸ್ಕೃತ ಶಾಲೆಗಳು, ಪಾಳಿ ಪಾಠ ಶಾಲೆ, ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಮಹಾವಿದ್ಯಾಲಯಗಳನ್ನು ಸ್ಥಾಪನೆ ಮಾಡಲು ಮುಂದಾದರು. ಇಂದು ಇವರ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯಡಿಯಲ್ಲಿ ೮೨ ಶಿಕ್ಷಣ ಶಾಲೆಗಳು ಹಾಗೂ ಮಹಾವಿದ್ಯಾಲಯಗಳಿವೆ. ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಶೈಕ್ಷಣಿಕ ಪ್ರಗತಿಯನ್ನು ಗಮನಿಸಿದ ಯು.ಜಿ.ಸಿ. ಸಂಸ್ಥೆಯು ಡೀಮ್ಡ್ ವಿಶ್ವವಿದ್ಯಾಲಯದ ಮಾನ್ಯತೆಯನ್ನು ನೀಡಿದೆ. ಎಂತಹ ಸಮಸ್ಯೆಗಳೇ ಎದುರಾದರೂ ತಮ್ಮ ಅಚಲವಾದ ಪ್ರಯತ್ನವನ್ನು ಬಿಡದೆ ಸಾಧಿಸಿದ 'ಶಿಕ್ಷಣತಜ್ಞ', 'ಶಿಕ್ಷಣ ಭೀಷ್ಮ' ಎಂದೇ ಖ್ಯಾತಿ ಗಳಿಸಿದ ಗಂಗಾಧರಯ್ಯ ಅವರ ಜೀವನ ಮತ್ತು ಸಾಧನೆಗಳನ್ನು ಕುರಿತು ವಿಶ್ಲೇಷಿಸುವುದು ಪ್ರಸ್ತುತ ಅಧ್ಯಯನದ ಆಶಯವಾಗಿದೆ.

೧.೧. ಅಧ್ಯಯನದ ಉದ್ದೇಶ

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಅಂತಃಕರಣಪೂರ್ವಕವಾಗಿ ಬದುಕನ್ನು ರೂಪಿಸಿದ, ಪ್ರೀತಿಸಿದ ಚೇತನಗಳು ಆರೋಗ್ಯಕರ ಸಮಾಜದ ಬೆಳವಣಿಗೆಗೆ ಕಾರಣವಾಗಿವೆ. ತಮ್ಮ ಸ್ವಾರ್ಥಕ್ಕಾಗಿ ವ್ಯಕ್ತಿ ಅಥವಾ ಸಮಾಜವನ್ನು ಬಳಸಿಕೊಳ್ಳದೆ ಸಮಾಜಕ್ಕೆ ಹೊಸ ಬೆಳಕನ್ನು ಹುಡುಕಿಕೊಡುವ ಪ್ರಯತ್ನಗಳು ನಡೆದಿವೆ ಎಂದು ಹೇಳಬಹುದು. ಸ್ವಾತಂತ್ರ್ಯ ಪೂರ್ವದಲ್ಲಿದ್ದ ದಲಿತರ ಸೇವೆ, ಸಮಾಜ ಸುಧಾರಣೆಯಂತಹ ಕಾರ್ಯಗಳು ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ ಕಂಡುಬರುತ್ತಿಲ್ಲ. ಪ್ರಸ್ತುತವಾಗಿ ಏನಿದ್ದರೂ ಸಮಾಜ ಸುಧಾರಣೆಯ ಹೆಸರಿನಲ್ಲಿ ಶೋಷಣೆಗಳು ನಡೆಯುತ್ತಿವೆ ಎಂದು ಹೇಳಿದರೆ ತಪ್ಪಾಗಲಾರದು. ಈ ಜನಾಂಗದ ಅಭಿವೃದ್ಧಿಗಾಗಿ ಸರ್ಕಾರ ಕೊಡಮಾಡುವ ಹಣವನ್ನು ಸಮರ್ಪಕವಾಗಿ ಖರ್ಚು ಮಾಡುವ ಸೇವಾ ಮನೋಭಾವನೆ ಇಂದು ಇಲ್ಲವಾಗಿದೆ. ಇಂತಹ ಸಂದರ್ಭದಲ್ಲಿ ಹೆಚ್.ಎಂ.ಗಂಗಾಧರಯ್ಯ ಅವರು ಮಾಡಿದ ನಿಸ್ವಾರ್ಥ ಸೇವೆ ಪ್ರಮುಖವಾದುದು. ಸರ್ವಾಂಗೀಣ ಅಭಿವೃದ್ಧಿಗಾಗಿ ಅವರು ಕೈಗೊಂಡ ಶೈಕ್ಷಣಿಕ ಸುಧಾರಣೆಗಳು ಇಂದಿಗೂ ನಮ್ಮನ್ನು ಚಿಂತನೆಗೆ ತೊಡಗಿಸುತ್ತವೆ. ಅವರ ಸ್ಫೂರ್ತಿದಾಯಕ ಮಾತುಗಳು, ಅವರ ಸರಳ ಜೀವನ, ಸೇವೆಯಿಂದ ಪ್ರಗತಿ ಎಂಬ ನಿಸ್ವಾರ್ಥ ಮನೋಭಾವ, ಅವರ ಆದರ್ಶ ಜೀವನ ಇಂದಿನ ಯುವಜನತೆಯಲ್ಲಿ ಮೂಡಿಬಂದಾಗ ಸಮಕಾಲೀನ ಸಮಾಜದಲ್ಲಿ ಹೊಸ ಬೆಳಕು ಕಾಣಬಹುದಾಗಿದೆ.

ಶಿಕ್ಷಣತಜ್ಞ, ಶಿಕ್ಷಣ ಭೀಷ್ಮ, ಸಾಧನೆಯ ಶಿಲ್ಪಿ ಎಂದೇ ಹೆಸರಾದ ಗಂಗಾಧರಯ್ಯ ಅವರ ಜೀವನ ಮತ್ತು ಸಾಧನೆಗಳನ್ನು ಸಬಾಲ್ಟನ್ ಚರಿತ್ರೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದಾಗಿದೆ. ಹಾಗೆ ಸಮಕಾಲೀನ ಜನರ ಗಮನ ಸೆಳೆದು ಚಿಂತನೆಗೆ ಒಳಪಡಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

೧.೨. ಅಧ್ಯಯನದ ಮಹತ್ವ

ಶಿಕ್ಷಣತಜ್ಞ ಡಾ.ಹೆಚ್.ಎಂ.ಗಂಗಾಧರಯ್ಯ ಅವರ ಅಧ್ಯಯನ ಸಮಾಜದ ಪುನಾ ರಚನೆಯ ದೃಷ್ಟಿಯಿಂದ ಮಹತ್ವದ್ದಾಗಿದೆ. ಇತಿಹಾಸವನ್ನು ಮರೆತವರು ಇತಿಹಾಸ ಸೃಷ್ಟಿಸಲಾರರು ಎಂಬ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಾತಿನಂತೆ ಇಂದು ಇತಿಹಾಸ ಮರೆತು ಬದುಕುತ್ತಿರುವ ಸಮಾಜಕ್ಕೆ ಐತಿಹಾಸಿಕ ಪ್ರಜ್ಞೆಯನ್ನು ಮೂಡಿಸಲು ಅಧ್ಯಯನ ಸಹಾಯಕವಾಗಲಿದೆ. ಈ ದೃಷ್ಟಿಯಿಂದ ಗಂಗಾಧರಯ್ಯ ಅವರ ತ್ಯಾಗ, ನಿಸ್ವಾರ್ಥ ಸೇವಾ ಮನೋಭಾವ, ಅವರ ಆದರ್ಶ ಜೀವನದ ಬಗ್ಗೆ ತಿಳಿಯಲು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿರುತ್ತದೆ. ಬದುಕಿನಲ್ಲಿ ಅವರ ವಿಚಾರಧಾರೆಗಳನ್ನು ಅಳವಡಿಸಿಕೊಳ್ಳುವ ದೃಷ್ಟಿಯಿಂದ ಅವರ ಬೌದ್ಧಿಕ ಉನ್ನತಿಯು ಅಸ್ಪೃಶ್ಯರಲ್ಲಿ ಕೀಳರಿಮೆ, ಮುಜುಗರ, ಹಿಂಜರಿಕೆ, ಭಯ ಮೊದಲಾದವನ್ನು ಹೋಗಲಾಡಿಸಲು ಪೂರಕವಾಗಬಹುದೆಂದು ನಂಬಲಾಗಿದೆ. ಈ ಸಮುದಾಯದವರಿಗೆ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕವಾದ ಇನ್ನಿತರ ಮಹತ್ವದ ಅಂಶಗಳ ಅರಿವನ್ನು ಉಂಟು ಮಾಡುವ ದೃಷ್ಟಿಯಿಂದ ಈ ಅಧ್ಯಯನವು ಪ್ರೇರಣೆಯಾಗಬಹುದೆಂದು ನಂಬಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ ಮತ್ತು ಮಿತಿಗಳು

ಗಂಗಾಧರಯ್ಯ ಅವರ ಜೀವನ ಮತ್ತು ಸಾಧನೆಯನ್ನು ಕುರಿತ ಪ್ರಧಾನ ಭಿತ್ತಿಯನ್ನು ಹೊಂದಿರುವ ಪ್ರಸ್ತುತ ಅಧ್ಯಯನವು ತನ್ನದೇ ಆದ ವ್ಯಾಪ್ತಿ ಹಾಗೂ ಮಿತಿಗಳಿಗೆ ಒಳಪಟ್ಟಿದೆ. ಗಂಗಾಧರಯ್ಯ ಅವರ ಜೀವನ ಮತ್ತು ಸಾಧನೆಗೆ ಸಂಬಂಧಿಸಿದಂತಹ ವಿಷಯಗಳನ್ನು ಮಾತ್ರ ಇಲ್ಲಿ ಕೇಂದ್ರ ಬಿಂದುವನ್ನಾಗಿಸಿ ಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ೧೯೧೫ರಿಂದ ೧೯೬೫ರವರೆಗಿನ ಅವಧಿಯಲ್ಲಿ ಅವರ ಜೀವನ ಮತ್ತು ಸಾಧನೆಯನ್ನು ಸಮಾಜಕ್ಕೆ ಪರಿಚಯಿಸುವುದೇ ಆಗಿದೆ.

೧.೨. ಅಧ್ಯಯನದ ವಿಧಿ-ವಿಧಾನ ಹಾಗೂ ಸ್ವರೂಪ

ಗಂಗಾಧರಯ್ಯ ಅವರ ಜೀವನ ಮತ್ತು ಸಾಧನೆಗೆ ಸಂಬಂಧಿಸಿದ ವಿಷಯಗಳನ್ನು ಚಾರಿತ್ರಿಕವಾಗಿ ದಾಖಲಿಸಿ, ವಿಮರ್ಶಾತ್ಮಕವಾಗಿ ವಿಶ್ಲೇಷಿಸಿರುವ ಕ್ರಮವೊಂದನ್ನು ಪ್ರಸ್ತುತ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಅವರನ್ನು ಕುರಿತ ಎಲ್ಲ ಬಗೆಯ ನೇರವಾದ ಹಾಗೂ ಪೂರಕವಾದ ಮಾಹಿತಿ, ಕಾಗದಪತ್ರ, ಸಂದರ್ಶನ ವರದಿಗಳು ಮೊದಲಾದವುಗಳನ್ನೂ ಬಳಸಿಕೊಳ್ಳಲಾಗಿದೆ. ಹೀಗೆ ಸಂಗ್ರಹಿಸಿಕೊಂಡ

ವಿವರಗಳನ್ನು ಸಮಾಜಶಾಸ್ತ್ರೀಯ ಅಧ್ಯಯನದ ನೆಲೆಗಳಿಂದ ಹಾಗೂ ಚರಿತ್ರೆ ಶಿಸ್ತಿನ ಸಂಶೋಧನಾ ವಿಧಿ-ವಿಧಾನಗಳ ಮೂಲಕ ಪರಿಶೀಲಿಸಿ, ವಿಶ್ಲೇಷಿಸುವ ವೈಧಾನಿಕತೆಯನ್ನು ಅಳವಡಿಸಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ಡಾ.ಹೆಚ್.ಎಂ.ಗಂಗಾಧರಯ್ಯ ಅವರ ಜೀವನ ಮತ್ತು ಸಾಧನೆಯ ನೆಲೆಗಳನ್ನು ಕುರಿತು ವಿಶ್ಲೇಷಿಸುವುದಾಗಿರುತ್ತದೆ. ಮೊದಲನೇ ಅಧ್ಯಾಯವು ಹಿನ್ನೆಲೆ-ಪ್ರವೇಶ-ಮಹತ್ವ, ವ್ಯಾಪ್ತಿ ಹಾಗೂ ಮಿತಿಗಳು, ವಿಧಿ-ವಿಧಾನ, ಸ್ವರೂಪಗಳನ್ನು ಕುರಿತ ವಿವರಗಳನ್ನು ಒಳಗೊಂಡಿದೆ. ಎರಡನೇ ಅಧ್ಯಾಯದಲ್ಲಿ ಗಂಗಾಧರಯ್ಯ ಅವರ ಜೀವನ-ಪರಿಚಯ-ಪರಿಸರ-ಪ್ರಭಾವವನ್ನು ಹಾಗೂ ಕೌಟುಂಬಿಕ ಜೀವನ, ಅವರ ಶಿಕ್ಷಣವನ್ನು ಕುರಿತ ಮಾಹಿತಿಯನ್ನು ಹಾಗೂ ಅಂತಿಮ ದಿನಗಳಿಗೆ ಸಂಬಂಧಿಸಿದ ವಿಚಾರವನ್ನು ನಮೂದಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಗಂಗಾಧರಯ್ಯ ಅವರ ಸಮಕಾಲೀನ ಸಮಾಜದಲ್ಲಿ ದಲಿತರ ಸ್ಥಿತಿಗತಿ ಮತ್ತು ರಾಜಪ್ರಭುತ್ವ, ದಲಿತರ ಅಭಿವೃದ್ಧಿಗಾಗಿ ಕೈಗೊಂಡ ಸುಧಾರಣ ಕ್ರಮಗಳನ್ನು ಕುರಿತು ಚರ್ಚಿಸಲಾಗಿದೆ. ಪಂಚಮರ ಆರ್.ಗೋಪಾಲಸ್ವಾಮಿ ಅಯ್ಯರ್ ಅವರು ದಲಿತರಿಗೆ ಶಿಕ್ಷಣವನ್ನು ನೀಡುವುದಕ್ಕಾಗಿ ಶ್ರಮಿಸಿದ ಬಗೆಯನ್ನು ಪರಿಶೀಲಿಸಲಾಗಿದೆ. ಅಧ್ಯಾಯ ನಾಲ್ಕರಲ್ಲಿ ಗಂಗಾಧರಯ್ಯ ಅವರು ಕಲಾಶಿಕ್ಷಕರಾಗಿದ್ದ ಸಂದರ್ಭದಲ್ಲಿನ ಸ್ಥಿತಿಗತಿಗಳನ್ನು, ಶಾಸಕರಾಗಿದ್ದಂತಹ ಸಂದರ್ಭದಲ್ಲಿನ ಅನುಭವ ಹಾಗೂ ಸಮಾಜ ಸುಧಾರಣೆಗೆ ಸಂಬಂಧಿಸಿದ ವಿಚಾರಗಳನ್ನು ಕುರಿತು ಚರ್ಚೆಗೆ ಒಳಪಡಿಸಲಾಗಿದೆ. ಬೌದ್ಧ ಧರ್ಮದೊಂದಿಗೆ ಅವರು ಹೊಂದಿದ್ದ ಸಂಬಂಧವನ್ನು ಮತ್ತು ಅವರು ಶಿಕ್ಷಣವನ್ನು ನೀಡುವುದರ ಮೂಲಕ ಸಮಾಜ ಸೇವೆ ಮಾಡಿದ ಬಗೆಯನ್ನು ವಿಶ್ಲೇಷಿಸಲಾಗಿದೆ. ಕೊನೆಯ ಅಧ್ಯಾಯ ಸಮಾರೋಪ. ಇದರಲ್ಲಿ ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಅಭಿವ್ಯಕ್ತಿಸಲಾಗಿದೆ.

೧.೩. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಡಾ.ಹೆಚ್.ಎಂ.ಗಂಗಾಧರಯ್ಯ ಅವರಿಗೆ ಸಂಬಂಧಿಸಿದಂತೆ ಕವಿತಾಕೃಷ್ಣ ಅವರು ಬರೆದಿರುವ 'ಸಾಧನೆಯ ಶಿಲ್ಪಿ' ಎಂಬ ಗ್ರಂಥವು ಗಂಗಾಧರಯ್ಯ ಅವರ ಬಾಲ್ಯ, ವಿದ್ಯಾಭ್ಯಾಸ, ಕಲಾಶಿಕ್ಷಣ, ಸಮಾಜ ಸೇವೆ, ರಾಜಕೀಯ, ಸಿದ್ಧಾರ್ಥ ಶಿಕ್ಷಣ ಸಂಸ್ಥೆಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುತ್ತದೆ. ಮಾದೇವ್ ಭರಣಿ ಅವರು ಬರೆದಿರುವ 'ಶಿಕ್ಷಣ ಭೀಷ್ಮ' ಎಂಬ ಗ್ರಂಥವು ಗಂಗಾಧರಯ್ಯ ಅವರಲ್ಲಿದ್ದ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಆಸಕ್ತಿ, ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಬೆಳ್ಳಿ ಹಬ್ಬದ ಮಹೋತ್ಸವ, ಗಂಗಾಧರಯ್ಯ ಅವರ ಬದುಕಿನ ಮುಖ್ಯ ಘಟನೆಗಳು, ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ವಿವಿಧ ವಿದ್ಯಾಕೇಂದ್ರಗಳು, ಅವರು ಪಡೆದಿರುವ ಪ್ರಶಸ್ತಿ, ಅವರ ಕೈಬರಹದ ನಮೂನೆಯನ್ನು ಒಳಗೊಂಡಿದೆ.

ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಬಿಡುಗಡೆಯಾದ 'ಸಿಲ್ವರ್ ಜೂಬಿಲಿ' ಸ್ಮರಣ ಸಂಚಿಕೆಯಲ್ಲಿ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗೆ ಸಂಬಂಧಿಸಿದಂತೆ ವಿವಿಧ ವ್ಯಕ್ತಿಗಳ ಅನಿಸಿಕೆಗಳು, ಶ್ರೀ ಸಿದ್ಧಾರ್ಥ ಗ್ರಾಮಾಂತರ ಪ್ರೌಢಶಾಲೆ, ಸಿದ್ಧಾರ್ಥ ನಗರದ ಸಂಕ್ಷಿಪ್ತ ಪರಿಚಯ, ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆ, ತರಬೇತಿ ಸಂಸ್ಥೆ, ಮಹಾವಿದ್ಯಾಲಯ ಮತ್ತು ಸಂಸ್ಕೃತ ಶಾಲೆಗಳ ಪಟ್ಟಿಯನ್ನು ಒಳಗೊಂಡಿದೆ. ಶ್ರೀ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದಿಂದ ೨೦೦೯ರಲ್ಲಿ ಬಿಡುಗಡೆಯಾದ 'ಓಡಿಸ್ಸಿ' ಸಾಹಿತ್ಯ ಪುರವಣಿಯಲ್ಲಿ ವೈ.ಎಂ.ರೆಡ್ಡಿ ಅವರು ಬರೆದಿರುವ 'ಸಂಸ್ಥಾಪಕ ಕಾರ್ಯದರ್ಶಿ ಶ್ರೀ ಹೆಚ್.ಎಂ.ಗಂಗಾಧರಯ್ಯ ಅವರು ನಾ ಕಂಡಂತೆ' ಎಂಬ ಲೇಖನವು ಗಂಗಾಧರಯ್ಯ ಅವರ ಸರಳ ಜೀವನ, ಕಲೆಯ ಬಗೆಗೆ ಇದ್ದ ಆಸಕ್ತಿ ಮತ್ತು ಪರಿಸರ ಪ್ರೇಮವನ್ನು ಒಳಗೊಂಡಿದೆ. ಇವುಗಳನ್ನು ಹೊರತುಪಡಿಸಿದರೆ ಗಂಗಾಧರಯ್ಯ ಅವರನ್ನು ಕುರಿತು ಪ್ರತ್ಯೇಕ ಅಧ್ಯಯನ ನಡೆದಿಲ್ಲವೆಂದೇ ಹೇಳಬಹುದು.

ಕೊನೆ ಟಿಪ್ಪಣಿಗಳು

೧. ಚಿನ್ನಸ್ವಾಮಿ ಸೋಸಲೆ ಎನ್., ಭಾರತೀಯ ಸಮಾಜ ಮತ್ತು ದಲಿತರು, ೨೦೦೭, ಪು.೨೮

೨. ಸ್ವಾಮಿ ಕೆ.ಎಸ್., ಪಂಚಮರ ಆರ್.ಗೋಪಾಲಸ್ವಾಮಿ ಅಯ್ಯರ್ : ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್ ನಿಬಂಧ, ಚರಿತ್ರೆ ವಿಭಾಗ, ಕ.ವಿ.ವಿ.ಹಂಪಿ, ೨೦೦೮, ಪು.೪

ಅಧ್ಯಾಯ ಎರಡು

ಗಂಗಾಧರಯ್ಯ ಅವರ ಬದುಕು-ಮೆಲುಕು

೨.೧. ಗಂಗಾಧರಯ್ಯ ಅವರ ಕೌಟುಂಬಿಕ ಪರಿಸರ

೨.೨. ಕಲಾ ಶಿಕ್ಷಕನಾಗಿ

೨.೩. ಗಂಗಾಧರಯ್ಯ ಅವರ ಮೇಲೆ ಸೈದ್ಧಾಂತಿಕ ಪ್ರಭಾವ

೨.೪. ಗಂಗಾಧರಯ್ಯ ಅವರ ಅಂತಿಮ ದಿನಗಳು

೨

ಗಂಗಾಧರಯ್ಯ ಅವರ ಬದುಕು-ಮೆಲುಕು

೨.೧. ಗಂಗಾಧರಯ್ಯ ಅವರ ಕೌಟುಂಬಿಕ ಪರಿಸರ

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಅಮೃತೂರು ಎಂಬ ಗ್ರಾಮದ ಮರಿಯಪ್ಪ ಮತ್ತು ಹುಚ್ಚಮ್ಮ ಎಂಬುವರಿಗೆ ಗಂಗಾಧರಯ್ಯ ಅವರು ೧೯೧೫ರಂದು ಹುಟ್ಟಿದರು.[೧] ಅವರು ಬಾಲ್ಯದಲ್ಲಿಯೇ ತಮ್ಮ ತಾಯಿಯನ್ನು ಕಳೆದುಕೊಂಡಿದ್ದರಿಂದ ಅಜ್ಜಿ ತಿರುಮಲಮ್ಮ ಅವರ ಆಶ್ರಯದಲ್ಲಿ ಬೆಳೆದರು. ಅವರಿಗೆ ಹುಚ್ಚಮ್ಮ ಎಂಬ ಅಕ್ಕ ಇದ್ದರು. ಮರಿಯಪ್ಪ ಅವರು ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಅಮೃತೂರಿನ ದಲಿತರಿಗೆಂದೇ ಮೀಸಲಾದ ಪ್ರಾಥಮಿಕ ಶಾಲೆಯಲ್ಲಿ ಉಪಾಧ್ಯಾಯರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಗಂಗಾಧರಯ್ಯ ಅವರ ಪ್ರಾರಂಭದ ಓದು ಅವರ ತಂದೆ ಕೆಲಸ ಮಾಡುತ್ತಿದ್ದ ಅಮೃತೂರಿನ ದಲಿತರಿಗೆಂದೇ ಮೀಸಲಾದ ಶಾಲೆಯಲ್ಲಿ ನಡೆಯಿತು.[೨] ಜಾತಿಪದ್ಧತಿ ಬಲಿಷ್ಠವಾಗಿದ್ದುದೇ ಇದಕ್ಕೆ ಪ್ರಮುಖ ಕಾರಣವೆನ್ನಬಹುದಾಗಿದೆ.

ಗಂಗಾಧರಯ್ಯ ಅವರ ತಂದೆ ಮರಿಯಪ್ಪ ಅವರಿಗೆ ಅಮೃತೂರಿನಿಂದ ಎಡೆಯೂರಿಗೆ ವರ್ಗವಾಯಿತು. ಹೀಗಾಗಿ ಅನಿವಾರ್ಯವಾಗಿ ಅವರ ಕುಟುಂಬ ಅಮೃತೂರನ್ನು ಬಿಡಬೇಕಾಯಿತು. ಅಮೃತೂರು ಮರಿಯಪ್ಪ ಅವರಿಗಾಗಲಿ ಅಥವಾ ಗಂಗಾಧರಯ್ಯ ಅವರಿಗಾಗಲಿ ಸ್ವಂತ ಸ್ಥಳವೇನೂ ಆಗಿರಲಿಲ್ಲ. ಮಾಗಡಿ ತಾಲ್ಲೂಕಿನ ಹೆಬ್ಬಳ್ಳು ಅವರ ಹಿರಿಯರ ಸ್ವಂತ ಸ್ಥಳ.[೩] ಮರಿಯಪ್ಪ ಅವರು ಉಪಾಧ್ಯಾಯರಾಗಿ ನೌಕರಿಗೆ ಸೇರಿದ ದಿನದಿಂದಲೇ ಅವರದು ಅಲೆಮಾರಿ ಬದುಕಾಗಿ ಪರಿವರ್ತನೆಗೊಂಡಿತ್ತು. ಮರಿಯಪ್ಪ ಅವರು ಎಡೆಯೂರಿನಲ್ಲಿ ಕೆಲಸ ಮಾಡಬೇಕಿದ್ದರೂ ಅವರು ಪಕ್ಕದ ಕೊಡವತ್ತಿ ಎಂಬ ಗ್ರಾಮದಲ್ಲಿ ವಾಸವಾಗಿದ್ದರು. ಗಂಗಾಧರಯ್ಯ ಎಡೆಯೂರಿನಲ್ಲಿ ಓದನ್ನು ಮುಂದುವರೆಸಿದರು. ಅವರು ಬಾಲ್ಯದಲ್ಲಿಯೇ ಅಧ್ಯಯನದಲ್ಲಿ ಬಹಳ ಆಸಕ್ತಿಯನ್ನು ಹೊಂದಿದವರಾಗಿದ್ದರು.

ಗಂಗಾಧರಯ್ಯ ಅವರು ತಮ್ಮ ಮಾಧ್ಯಮಿಕ ವಿದ್ಯಾಭ್ಯಾಸವನ್ನು ತುಮಕೂರಿನ ಬೋರ್ಡಿಂಗ್ ಹೋಂನಲ್ಲಿ ಮುಂದುವರೆಸಿದರು. ಬೋರ್ಡಿಂಗ್ ಹೋಂಗೆ ಸೇರುವ ವಿಷಯದಲ್ಲಿ ಅಲ್ಲಿನ

ಉಪಾಧ್ಯಾಯರಾಗಿದ್ದಂತಹ ರಾಯಪ್ಪ ಅವರು ಬಹಳ ಸಹಾಯವನ್ನು ಮಾಡಿದರು. ರಾಯಪ್ಪ ಅವರು ಗಂಗಾಧರಯ್ಯ ಅವರನ್ನು ದಾಖಲು ಮಾಡಿಕೊಳ್ಳದೆ ಹೋಗಿದ್ದರೆ ಗಂಗಾಧರಯ್ಯ ಅವರ ಜೀವನದ ದಾರಿಯೇ ಬದಲಾಗುತ್ತಿತ್ತು. ಗಂಗಾಧರಯ್ಯ ಅವರು ಬೋರ್ಡಿಂಗ್ ಹೋಂಗೆ ಸೇರುವುದಕ್ಕೆ ಮೊದಲು ಆ ವಿದ್ಯಾರ್ಥಿ ನಿಲಯದಲ್ಲೇ ದಲಿತರಿಗೆ ಪ್ರತ್ಯೇಕವಾದ ಶಾಲೆಯಿತ್ತು. ಈ ಶಾಲೆಯನ್ನು ೧೯೨೯ರಲ್ಲಿ ಜನರಲ್ ಶಾಲೆಗೆ ಸೇರ್ಪಡೆ ಮಾಡಲಾಯಿತು.[೪]

ಗಂಗಾಧರಯ್ಯ ಅವರು ತುಮಕೂರಿಗೆ ಬಂದ ನಂತರ ಅವರಲ್ಲಿ ಸುಪ್ತವಾಗಿಯೇ ಹರಿಯುತ್ತಿದ್ದ ಚಿತ್ರಕಲೆ ಮತ್ತಷ್ಟು ವಿಸ್ತಾರವಾಗಿ ಬೆಳೆಯಲು ಸಾಧ್ಯವಾಯಿತು. ಅವರು ತಮ್ಮ ಬಿಡುವಿನ ವೇಳೆಯಲ್ಲಿ ನೋಟ್ ಪುಸ್ತಕಗಳಲ್ಲೇ ಕೆಲವು ಚಿತ್ರಗಳನ್ನು ಬರೆಯತೊಡಗಿದರು. ಒಂದು ಬಾರಿ ಗಂಗಾಧರಯ್ಯ ಅವರ ಚಿತ್ರಕಲೆಯ ಗುರುಗಳಾದ ಸಿದ್ಧಲಿಂಗಯ್ಯ ಅವರ ಕಣ್ಣಿಗೆ ಆ ಚಿತ್ರಗಳು ಬಿದ್ದವು.[೫] ಆ ಚಿತ್ರಗಳನ್ನು ನೋಡಿದ ಸಿದ್ಧಲಿಂಗಯ್ಯ ಅವರು ಗಂಗಾಧರಯ್ಯ ಅವರಲ್ಲಿ ಅಡಗಿರುವ ಚಿತ್ರಕಲಾವಿದನನ್ನು ಗುರುತಿಸಿದರು. ಕಲೆಯ ಕ್ಷೇತ್ರದಲ್ಲಿ ಗಂಗಾಧರಯ್ಯ ಅವರು ಇನ್ನಷ್ಟು ಮುಂದೆ ಬರಲು ತನ್ನಿಂದಾಗಬಹುದಾದ ಸಹಾಯ ಮಾಡಲು ನಿರ್ಧರಿಸಿದರು. ಸಿದ್ಧಲಿಂಗಯ್ಯ ಅವರು ಸವರ್ಣೀಯರಾದರೂ ಸಹ ಜಾತಿಪದ್ಧತಿಯಂತಹ ಸಣ್ಣತನಗಳಿಂದ ಹೊರಬಂದವರಾಗಿದ್ದರು. ಹಾಗಾಗಿಯೇ ಸಿದ್ಧಲಿಂಗಯ್ಯ ಅವರು ಗಂಗಾಧರಯ್ಯ ಅವರನ್ನು ಕಲಾಜಗತ್ತಿಗೆ ಪರಿಚಯಿಸಲು ಪ್ರಯತ್ನಿಸಿದ್ದು.

ಸಿದ್ಧಲಿಂಗಯ್ಯ ಅವರು ಪರಿಚಯವಾಗುವುದಕ್ಕೆ ಮೊದಲು ಗಂಗಾಧರಯ್ಯ ಅವರಿಗೆ ಕುಂಚ, ಕ್ಯಾನವಾಸ್ ಮತ್ತು ಬಣ್ಣಗಳು ಎಟುಕದ ಐಷಾರಾಮಿ ವಸ್ತುಗಳಾಗಿದ್ದವು. ಒಟ್ಟಿನಲ್ಲಿ ಅವರು ತಮ್ಮ ಜೀವನದಲ್ಲಿ ಮೊದಲ ಬಾರಿಗೆ ಕುಂಚ ಹಿಡಿದು ಜಲವರ್ಣ, ತೈಲವರ್ಣಗಳ ಕೆಲವಾದರೂ ಚಿತ್ರಗಳನ್ನು ರಚಿಸುವುದರಲ್ಲಿ ಶಾಸ್ತ್ರೀಯವಾದ ಪರಿಣತಿಯನ್ನು ಅಲ್ಪ ಪ್ರಮಾಣದಲ್ಲಿ ಪಡೆದುಕೊಂಡಿದ್ದರು. ಮುಂದೆ ಅವರು ಬೆಂಗಳೂರಿನ ಪರೀಕ್ಷಾ ಕೇಂದ್ರದಲ್ಲಿ ನಡೆದಂತಹ ಚಿತ್ರಕಲಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.[೬]

ಗಂಗಾಧರಯ್ಯ ಅವರು ತುಮಕೂರಿನ ಬೋರ್ಡಿಂಗ್ ಹೋಂಗೆ ಬರುವುದಕ್ಕೆ ಹಿಂದೆ ದಲಿತರಿಗೆ ಪ್ರತ್ಯೇಕವಾದ ಶಾಲೆಗಳಿದ್ದವು. ದುರಂತವೆಂದರೆ ಇಂತಹ ಶಾಲೆಗಳಲ್ಲಿ ಉಪಾಧ್ಯಾಯರಾಗಿ ಕೆಲಸ ಮಾಡಲು ಬೇಕಾದಷ್ಟು ಸಂಖ್ಯೆಯಲ್ಲಿ ದಲಿತ ಅಭ್ಯರ್ಥಿಗಳೇ ಸಿಗುತ್ತಿರಲಿಲ್ಲ. ಹಾಗಾಗಿ ಸವರ್ಣೀಯ ಉಪಾಧ್ಯಾಯರುಗಳನ್ನೇ ಇಂತಹ ಶಾಲೆಗಳಿಗೆ ವರ್ಗಾಯಿಸಲಾಗುತ್ತಿತ್ತು. ಆದರೆ ಅನೇಕ ಸವರ್ಣೀಯ ಉಪಾಧ್ಯಾಯರು ಅಸ್ಪೃಶ್ಯರ ಶಾಲೆಗಳಿಗೆ ಹೋಗದೆ ಅಥವಾ ಹೋಗಲು ನಿರಾಕರಿಸಿದ್ದರಿಂದಾಗಿ ಶಾಲೆಗಳನ್ನೇ ಮುಚ್ಚಬೇಕಾದ ಪರಿಸ್ಥಿತಿ ಒದಗಿರುವುದು ಕಂಡುಬರುತ್ತದೆ.[೭]

ಅಂದರೆ ಸವರ್ಣೀಯರು ಉಪಾಧ್ಯಾಯರೊಂದಿಗೆ ಸ್ಪೃಶ್ಯ ಸಂಬಂಧ ಹೊಂದಿರುವಾಗ ಬೆತ್ತ ಅಸ್ಪೃಶ್ಯ ಬಾಲಕನನ್ನು ತಾಕುವಂತಿರಬಾರದು. ಹಾಗೆಯೇ ಅಸ್ಪೃಶ್ಯ ಬಾಲಕನನ್ನು ಬೆತ್ತ ಥಳಿಸುತ್ತಿರುವಾಗ ಅದು ಉಪಾಧ್ಯಾಯರ ಸ್ಪೃಶ್ಯ ಸಂಬಂಧದಿಂದ ಬಿಡುಗಡೆ ಹೊಂದಿರಬೇಕು. ಅದಕ್ಕೆ ಆಗಿನ ಜಾತ್ಯಂಧ ಉಪಾಧ್ಯಾಯರು ಸುಲಭದಲ್ಲಿ ಕಂಡುಕೊಂಡ ಉಪಾಯವೆಂದರೆ ದೂರದಿಂದಲೇ ಬೆತ್ತವನ್ನು ಅಸ್ಪೃಶ್ಯ ವಿದ್ಯಾರ್ಥಿಯತ್ತ ಬೀಸುವುದು. ಹಾಗೆ ಬೀಸುವಾಗ ಬೆತ್ತ ಹುಡುಗನ ದೇಹದ ಯಾವ ಅಂಗದ ಮೇಲಾದರೂ ಬೀಳಬಹುದಾಗಿತ್ತು. ಯಾವುದೇ ಅಪಾಯಕ್ಕೂ ದಾರಿ ಮಾಡಿಕೊಡುವಂತಿತ್ತು. ಅಸ್ಪೃಶ್ಯರಿಗೆ ಮೀಸಲಾಗಿದ್ದ ಶಾಲೆಗಳನ್ನು ಜನರಲ್ ಶಾಲೆಗಳೊಂದಿಗೆ ಸೇರಿಸಿ ಬಿಟ್ಟಾಗಲೂ ಸವರ್ಣೀಯ ಉಪಾಧ್ಯಾಯರನೇಕರು ದಲಿತ ವಿದ್ಯಾರ್ಥಿಗಳೊಂದಿಗೆ ಇದೇ ಸಮರ ಕಲೆಯ ಭಾಷೆಯಲ್ಲೇ ಮಾತನಾಡಿಸುತ್ತಿದ್ದರು. ಏಟು ತಿಂದ ವಿದ್ಯಾರ್ಥಿಯೇ ನಂತರ ಬೆತ್ತವನ್ನು ಉಪಾಧ್ಯಾಯರಿಗೆ ಹತ್ತಿರದಲ್ಲಿ ಇಟ್ಟು ಬರಬೇಕು. ಈ ಶಾಲೆಯಲ್ಲಿಯೇ ಸಿದ್ಧಲಿಂಗಯ್ಯ ಎಂಬ ಮಾನವೀಯ ಉಪಾಧ್ಯಾಯರಿದ್ದರು. ಸಿದ್ಧಲಿಂಗಯ್ಯರಂತಹ ಮಾನವೀಯ ಗುರುಗಳ ನಡುವೆಯೇ ಇಂತಹ ಮಡಿವಂತಿಕೆಯ ಜನರೂ ಇದ್ದರೆಂಬುದು ವಿಷಾದನೀಯ ಸಂಗತಿಯಾಗಿದೆ. ಗಂಗಾಧರಯ್ಯ ಅವರೂ ಸಹ ಇಂತಹ ಸವರ್ಣೀಯ ಉಪಾಧ್ಯಾಯರು ಬೀಸುವ ದೊಣ್ಣೆಯ ವಕ್ರದೃಷ್ಟಿಯಿಂದ ಪಾರಾಗುವುದು ಸಾಧ್ಯವಿರಲಿಲ್ಲ.[೭]

೧೯೨೭ರಲ್ಲಿ ರಾಷ್ಟ್ರೀಯ ಆಂದೋಲನ ಮಹಾತ್ಮಗಾಂಧಿ ಅವರ ನೇತೃತ್ವದಲ್ಲಿ ಬಿರುಸಾಗಿ ನಡೆಯುತ್ತಿತ್ತು. ದೇಶ ಜಾಗೃತಾವಸ್ಥೆಯಲ್ಲಿತ್ತು. ಜನರ ಮನಸ್ಸಿನ ಸ್ಥಿತಿಗತಿಯನ್ನರಿಯಲು ಆಗ ಗಾಂಧಿ ಇಡೀ ದೇಶವನ್ನು ಸುತ್ತಲು ಬಯಸಿ, ಅದರಂತೆ ಪ್ರತಿರಾಜ್ಯವನ್ನು ಸುತ್ತುತ್ತ ಕರ್ನಾಟಕದ ತುಮಕೂರಿಗೂ ಬಂದರು. ಗಾಂಧಿ ಬರುವರೆಂಬ ಸುದ್ದಿ ಕೇಳಿಯೇ ಅವರನ್ನು ನೋಡುವ ಉದ್ದೇಶದಿಂದ ತುಮಕೂರಿನ ಸುತ್ತಮುತ್ತಲ ಹಳ್ಳಿಗಳಿಂದ ಜನ ಎತ್ತಿನ ಗಾಡಿಗಳನ್ನು ಕಟ್ಟಿಕೊಂಡು ಬಂದಿದ್ದರು. ಅಸಂಖ್ಯಾತ ಜನಸಮೂಹದ ನಡುವೆ ಶಾಲಾ ಹುಡುಗರಿಗಂತೂ ಗಾಂಧಿ ಅವರನ್ನು ಹತ್ತಿರದಿಂದ ನೋಡುವುದು ಸಾಧ್ಯವಾಗಲೆ ಇಲ್ಲ. ತುಮಕೂರಿನಲ್ಲಿನ ತಮ್ಮ ಕಾರ್ಯಕ್ರಮ ಮುಗಿದ ನಂತರ ತಾವು ದಲಿತರ ವಿದ್ಯಾರ್ಥಿನಿಲಯಕ್ಕೆ ಭೇಟಿ ಕೊಡಬೇಕೆಂಬ ಇಚ್ಛೆಯನ್ನು ಗಾಂಧಿ ಹಿಂದಿನ ದಿನವೇ ಪ್ರಕಟಿಸಿದ್ದರು. ಇದರಿಂದ ಗಾಂಧಿ ಅವರು ದಲಿತ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಮತ್ತು ಪ್ರೀತಿಯನ್ನು ಹೊಂದಿದ್ದರು ಎಂಬುದನ್ನು ಗಮನಿಸಬಹುದಾಗಿದೆ. ಅಂದು ಗಾಂಧೀಜಿ ತುಮಕೂರಿನಲ್ಲಿಯೇ ಉಳಿದರು. ಮಾರನೆಯ ದಿನ ಗಾಂಧಿ ಬೋರ್ಡಿಂಗ್ ಹೋಂಗೆ ಭೇಟಿ ನೀಡಿದ್ದರು.[೮]

ಬೋರ್ಡಿಂಗ್ ಹೋಂನಲ್ಲಿ ಬೆಳಗಿನ ಉಪಾಹಾರಕ್ಕೆಂದು ಗಾಂಧೀಜಿ ಅವರಿಗೆ ವಿಶೇಷವಾಗಿ ರಾಗಿರೊಟ್ಟಿ ಮತ್ತು ಹುಚ್ಚೆಳ್ಳು ಚಟ್ನಿಯನ್ನು ತಯಾರಿಸಲಾಗಿತ್ತು. ಉಪಾಹಾರವನ್ನು ಅಸ್ಪೃಶ್ಯ ಬಾಲಕನೊಬ್ಬನಿಂದಲೇ ಗಾಂಧೀಜಿ ಅವರಿಗೆ ಬಡಿಸಬೇಕೆಂದು ಸ್ಥಳೀಯ ವ್ಯವಸ್ಥಾಪಕರು ನಿರ್ಧರಿಸಿದ್ದರು.

ಗಂಗಾಧರಯ್ಯ ಅವರು ಗಾಂಧೀಜಿ ಅವರಿಗೆ ಉಪಾಹಾರವನ್ನು ಬಡಿಸಿದರು.[೯] ಗಂಗಾಧರಯ್ಯ ಅವರಿಗೆ ಗಾಳಿಯಲ್ಲೇ ತೇಲುತ್ತಿರುವಂತಹ ಭಾವೋದ್ವೇಗದ ಸ್ಥಿತಿ. ಕಾರಣ ತಾನು ಬಡಿಸಿದಂತಹ ಉಪಾಹಾರವನ್ನು ಗಾಂಧಿ ತಿಂದರಲ್ಲಾ ಎಂಬ ಆನಂದ. ತನ್ನನ್ನು ಮುಟ್ಟಿಸಿಕೊಳ್ಳಲು ಹಿಂಜರಿವ ಉಳಿದವರೊಂದಿಗೆ ಗಾಂಧೀಜಿ ಅವರನ್ನು ಹೋಲಿಸಿಕೊಳ್ಳುವುದು ಕೂಡ ಅವರಿಗೆ ಸಾಧ್ಯವಾಗಲಿಲ್ಲ. ದಲಿತರನ್ನು ಸವರ್ಣೀಯರು ಅಷ್ಟೊಂದು ಕ್ರೂರವಾಗಿ ಕಾಣುತ್ತಿದ್ದರು.

ಈ ಸಮಯದಿಂದಲೇ ಗಂಗಾಧರಯ್ಯ ಅವರು ಗಾಂಧೀಜಿ ಅವರ ನೇರ ಪ್ರಭಾವಕ್ಕೆ ಒಳಗಾದರು. ಗಾಂಧಿ ಬೋರ್ಡಿಂಗ್ ಹೋಂಗೆ ಬಂದು ಹೋದದ್ದರ ನಂತರ ದಲಿತರಿಗೆಂದೇ ಪ್ರತ್ಯೇಕವಾಗಿ ಮೀಸಲಾಗಿದ್ದ ಶಾಲೆಯನ್ನು ರದ್ದುಪಡಿಸಿ ಎಲ್ಲ ಜಾತಿಯವರೂ ಒಂದೇ ಕಡೆ ವ್ಯಾಸಂಗ ಮಾಡುವಂತಹ ವ್ಯವಸ್ಥೆಯಾಯಿತು. ಈ ಸಂಬಂಧ ಒಂದು ಸರ್ಕಾರಿ ಆಜ್ಞೆ ಕೂಡ ಹೊರಟಿತು. ಪ್ರಾರಂಭದಲ್ಲಿ ಈ ಸಾರ್ವಜನಿಕ ಶಾಲೆಗಳಲ್ಲಿ ಕೇವಲ ದಲಿತ ವಿದ್ಯಾರ್ಥಿಗಳು ಮಾತ್ರ ಇದ್ದರಾದರೂ ಕ್ರಮೇಣ ಇತರರೂ ಬಂದು ಸೇರಿಕೊಂಡರು. ಗಾಂಧಿ ಅವರ ಭೇಟಿ ಗಂಗಾಧರಯ್ಯ ಅವರ ಬದುಕಿನಲ್ಲಿನ ಬಹುಮುಖ್ಯ ಅಂಶಗಳಲ್ಲೊಂದು ಎಂಬುದಾಗಿ ಪರಿಗಣಿಸಬಹುದಾಗಿದೆ. ೧೯೩೦ರಲ್ಲಿ ಗಂಗಾಧರಯ್ಯ ಅವರು ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದರು.[೧೦]

ಗಂಗಾಧರಯ್ಯ ಅವರ ಮಾಧ್ಯಮಿಕ ಶಾಲಾ ವಿದ್ಯಾಭ್ಯಾಸ ಮುಗಿದ ನಂತರ ಪಂಚಮರ ಆರ್.ಗೋಪಾಲಸ್ವಾಮಿ ಅಯ್ಯರ್ ಅವರಿಂದ ಗಂಗಾಧರಯ್ಯ ಅವರಿಗೆ ಪತ್ರವೊಂದು ಬಂತು. ಪತ್ರದಲ್ಲಿ, ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪಾಸಾಗಿರುವ ಗಂಗಾಧರಯ್ಯ ಅವರು ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಮಾಡಲು ಇಚ್ಛಿಸಿದಲ್ಲಿ ಬೆಂಗಳೂರಿನಲ್ಲಿರುವ ಶ್ರೀ ನರಸಿಂಹರಾಜ ಒಡೆಯರ ವಿದ್ಯಾರ್ಥಿನಿಲಯದಲ್ಲಿ ಸ್ಥಳಾವಕಾಶ ಮಾಡಿಕೊಡಲಾಗಿದೆಯಾದ್ದರಿಂದ ಈ ಪತ್ರವನ್ನು ಅತ್ಯಂತ ತುರ್ತಿನದೆಂದೇ ಭಾವಿಸಿ ತಕ್ಷಣವೇ ಹೊರಟು ಬಂದು ವಿದ್ಯಾರ್ಥಿನಿಲಯಕ್ಕೆ ಸೇರತಕ್ಕದ್ದೆಂದು ತಿಳಿಸಲಾಗಿತ್ತು.[೧೧] ಈ ಮೇಲಿನ ಅಂಶದಿಂದ ತಿಳಿದುಬರುವುದೇನೆಂದರೆ ದಲಿತ ವಿದ್ಯಾರ್ಥಿಗಳನ್ನು ವಿದ್ಯಾವಂತರನ್ನಾಗಿ ಮಾಡುವಲ್ಲಿ ಅಯ್ಯರ್ ಹೊಂದಿದ್ದ ಕಾಳಜಿಯನ್ನು ಗುರುತಿಸಬಹುದಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಗೊಪಾಲಸ್ವಾಮಿ ಅಯ್ಯರ್ ಅವರು ದಲಿತ ವಿದ್ಯಾರ್ಥಿಗಳ ಏಳಿಗೆಗಾಗಿ ಶ್ರಮಿಸಿದ್ದು ನಿಜಕ್ಕೂ ಪ್ರಶಂಸನೀಯವಾದುದು. ನರಸಿಂಹರಾಜ ಒಡೆಯರ್ ವಿದ್ಯಾರ್ಥಿನಿಲಯ ಆ ಸಂದರ್ಭದಲ್ಲಿ ಬಹಳ ಪ್ರಸಿದ್ಧಿಯನ್ನು ಹೊಂದಿದ್ದಂತಹ ವಿದ್ಯಾರ್ಥಿನಿಲಯವಾಗಿತ್ತು. ನರಸಿಂಹರಾಜ ಒಡೆಯರ್ ವಿದ್ಯಾರ್ಥಿನಿಲಯವು ಆಗ ಇದ್ದದ್ದು ಆನಂದರಾವ್ ಸರ್ಕಲ್ ಸಮೀಪದಲ್ಲಿ.[೧೨] ಗಂಗಾಧರಯ್ಯ ಸೇರಿದ 'ಕೋಟೆ' ಪ್ರೌಢಶಾಲೆ ಆ ಕಾಲಕ್ಕೆ ಬಹಳ ಪ್ರಸಿದ್ಧಿಯನ್ನು ಹೊಂದಿತ್ತು. ಅವರು ಪ್ರೌಢಶಾಲೆ ವ್ಯಾಸಂಗ ಮಾಡಲು ಅಲ್ಲಿಗೆ ಹೋದ ಸಂದರ್ಭದಲ್ಲಿ ಮೈಸೂರಿನ ಕೊನೆಯ ಮಹಾರಾಜರಾಗಿದ್ದ ಜಯಚಾಮರಾಜೇಂದ್ರ ಒಡೆಯರ್ ಅಲ್ಲಿಯೇ ವ್ಯಾಸಂಗ

ಮಾಡುತ್ತಿದ್ದರು.[೧೩] ಈ ಪ್ರೌಢಶಾಲೆಯಲ್ಲಿ ಆಯಾ ವಿಷಯಗಳಲ್ಲಿನ ಅತ್ಯಂತ ನುರಿತ ಶಿಕ್ಷಕರೆಲ್ಲ ಬೋಧನಾವರ್ಗದಲ್ಲಿದ್ದರು. ಇಷ್ಟೆಲ್ಲ ಘನತೆ, ಉತ್ತಮವಾದ ಚರಿತ್ರೆಯನ್ನು ಹೊಂದಿ ವಿಶೇಷವಾದ ಸ್ಥಾನಮಾನಗಳನ್ನೇ ಹೊಂದಿದ್ದರೂ ಇಲ್ಲಿನ ಶಿಕ್ಷಕರಲ್ಲಿ ಉದಾರ ಮನೋಭಾವವಿರಲಿಲ್ಲವೆನ್ನಬಹುದಾಗಿದೆ. ಆದರೆ ಇಲ್ಲಿಯೂ ಸಹ ಸಿದ್ಧಲಿಂಗಯ್ಯ ಅವರಂತಹ ಮಾನವೀಯತೆಯನ್ನು ಹೊಂದಿದ್ದ ವ್ಯಕ್ತಿಯೊಬ್ಬರಿದ್ದರು. ಆಗಿನ ಡಿ.ಪಿ.ಐ. ಆಗಿದ್ದ ಸಿ.ಆರ್.ರೆಡ್ಡಿ ಅವರು ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಆದ ಹಿಂಸೆ ಮತ್ತು ತೊಂದರೆಯನ್ನು ಅರ್ಥ ಮಾಡಿಕೊಳ್ಳಬಲ್ಲವರಾಗಿದ್ದರು. ಉಳಿದ ಶಿಕ್ಷಕರ ಭಾವನೆ ಹೇಗೆ ಇದ್ದರೂ ಸಿ.ಆರ್.ರೆಡ್ಡಿ ಅವರು ಅಸ್ಪೃಶ್ಯ ವಿದ್ಯಾರ್ಥಿಗಳನ್ನು ಶಿಕ್ಷಣ ಕೊಡದೆ ಶಾಲೆಯಲ್ಲಿರಿಸಿಕೊಳ್ಳುವುದರ ಅಪ್ರಯೋಜಕತೆ ಮತ್ತು ಮೂರ್ಖತೆಯನ್ನು ಮನಗಂಡವರಾಗಿದ್ದರೆನ್ನಬಹುದು. ಹೀಗಾಗಿ ಅವರು ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡಲು ತಿರುವಾಂಕೂರಿನಿಂದ ದಲಿತ ಶಿಕ್ಷಕರನ್ನು ಕರೆಸಿಕೊಂಡರು.[೧೪] ಕನ್ನಡ ನಾಡಿನ ಅಪ್ಪಟ ಕನ್ನಡ ಮಕ್ಕಳಿಗೆ ಪಾಠ ಹೇಳಿಕೊಡಲು ಕೇರಳದಿಂದ ಶಿಕ್ಷಕರು ಬರುವಂತೆ ಮಾಡಿದ ಹೆಗ್ಗಳಿಕೆ ಚಿರಸ್ಥಾಯಿಯಾಗಿ ಚರಿತ್ರೆಯಲ್ಲಿ ಉಳಿಯುವಂತೆ ಮಾಡಿದ 'ಕೀರ್ತಿ' ಕೋಟೆ ಪ್ರೌಢಶಾಲೆಯ ಆ ಕಾಲದ ಶಿಕ್ಷಕ ವರ್ಗಕ್ಕೆ ಸಲ್ಲಲೇಬೇಕು.

ಆದರೆ ಗಂಗಾಧರಯ್ಯ ಅವರ ನೋಟವೇ ಬೇರೆಯಾಗಿತ್ತು. ಅವರು ತಮ್ಮ ಪರಿಸರದಲ್ಲಿ ಹಾಗೂ ತಮ್ಮ ಸುತ್ತಲ ಮನುಷ್ಯರಲ್ಲಿ ಸಾಧರಣವಾಗಿ ಒಳ್ಳೆಯದನ್ನೇ ಹುಡುಕುವುದಕ್ಕೆ ಒಗ್ಗಿ ಹೋಗಿದ್ದರು. ಅನೇಕ ಬಾರಿ ಅಂತಹ ಸಂಯಮಿಯ ಹೃದಯವನ್ನು ಘಾಸಿಗೊಳಿಸಿರುವ ಘಟನೆಗಳು ನಡೆದಿರುವುದುಂಟು. ಆಗೆಲ್ಲ ಅವರು ಅಷ್ಟೇ ಸೌಮ್ಯವಾಗಿಯೇ ಪ್ರತಿಕ್ರಿಯಿಸಿರುವುದೂ ಉಂಟು. ಆದರೆ ಗಂಗಾಧರಯ್ಯ ಅವರ ಜೀವನ ಚರಿತ್ರೆಯನ್ನು ಬಲ್ಲವರಿಗಾಗಲಿ ಅಥವಾ ಅವರ ಸ್ವಭಾವವನ್ನು ಅರಿತವರಿಗಾಗಲಿ ಅವರದು ಪ್ರಧಾನವಾಗಿ ಶಾಂತಮಾರ್ಗವೆಂಬುದು ಅರ್ಥವಾಗಬಲ್ಲದ್ದಾಗಿತ್ತು.

ಶ್ರೀ ನರಸಿಂಹರಾಜ ಒಡೆಯರ್ ಹಾಸ್ಟೆಲಿನಿಂದ ಕೋಟೆ ಪ್ರೌಢಶಾಲೆ ಸಾಕಷ್ಟು ದೂರದಲ್ಲಿದ್ದರೂ ಗಂಗಾಧರಯ್ಯ ಅವರ ಆಸಕ್ತಿಯೆದುರು ಅದು ದೂರವೆನಿಸಲಿಲ್ಲ. ಅವರಿಗೆ ಬೆಂಗಳೂರು ನಗರ ಬಹಳ ಇಷ್ಟವಾಯಿತು. ವೈವಿಧ್ಯಮಯ ವ್ಯಕ್ತಿತ್ವಗಳ ವಿದ್ವಾಂಸರ ಸಂಪರ್ಕದಿಂದ ಅವರಿಗೆ ವಿಶೇಷ ಲಾಭಗಳೇ ಆದವು. ಇವರಿಗಿದ್ದ ಆಸಕ್ತಿಗೆ ತಕ್ಕಂತೆ ಲೈಬ್ರರಿಗಳ ಅನುಕೂಲವೂ ಅಲ್ಲಿತ್ತು. ಜೊತಗೆ ಅವರ ಚಿತ್ರಕಲೆಯ ಅಭಿರುಚಿಗೆ ಕೂಡ ಈ ವಿಶಾಲ ಬೆಂಗಳೂರು ತಕ್ಕ ಆಸರೆಯನ್ನೇ ಒದಗಿಸಿಕೊಟ್ಟಿತು.

ಈ ಹಿಂದೆಯೆ ಹೇಳಿದಂತೆ ಗಂಗಾಧರಯ್ಯ ಅವರೊಂದಿಗೆ ಕೋಟೆ ಪ್ರೌಢಶಾಲೆಯಲ್ಲಿ ಮೈಸೂರಿನ ಕೊನೆಯ ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್ ಅವರೂ ವ್ಯಾಸಂಗ ಮಾಡುತ್ತಿದ್ದರು. ಈ ಯುವರಾಜರಿಗೆ ಸರ್ಕಾರ ಪ್ರತ್ಯೇಕವಾಗಿ ಮತ್ತು ವಿಶೇಷ ರೀತಿಯಲ್ಲಿ ಪಾಠ ಮಾಡುವ ವ್ಯವಸ್ಥೆಯನ್ನು ರೂಪಿಸಿತ್ತು. ರಾಜಮನೆತನದ ಹಿನ್ನೆಲೆ ಇದ್ದರೂ ಜಯಚಾಮರಾಜೇಂದ್ರ ಒಡೆಯರ್ ಅವರು

ನಿಗರ್ವಿಯಾಗಿದ್ದವರು. ದಲಿತ ಜನಾಂಗದ ಬಗ್ಗೆ ಅನುಕಂಪದ ಮನೋಧರ್ಮವನ್ನು ಹೊಂದಿದವರಾಗಿದ್ದರು.[೧೪] ತನ್ನ ಸಹಪಾಠಿಗಳಾದ ಸಾಮಾನ್ಯ ವರ್ಗದವರೊಂದಿಗೆ ಮಾತನಾಡುವಷ್ಟು, ಬೆರೆಯುವಷ್ಟು ಉದಾರಿಗಳಾಗಿದ್ದರು. ತನಗಿದ್ದ ವಿಶೇಷ ಪಾಠದ ನಂತರ ಇನ್ನಿತರ ತರಗತಿಗಳಿಗೂ ಹೋಗಿ ವಿದ್ಯಾರ್ಥಿ ಮಿತ್ರರೊಂದಿಗೆ ಬೆರೆತು ಮಾತನಾಡುತ್ತಿದ್ದರು. ರಾಜಕಾರಣಿಗಳಾದ ಹುಚ್ಚಮಾಸ್ತಿಗೌಡರು ಕೂಡ ಗಂಗಾಧರಯ್ಯ ಅವರ ಸಹಪಾಠಿಗಳಾಗಿದ್ದರು.[೧೫]

ಕೋಟೆ ಪ್ರೌಢಶಾಲೆಯಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳಲ್ಲಿ ಶೇಕಡ ಹತ್ತು ಭಾಗದ ವಿದ್ಯಾರ್ಥಿಗಳು ದಲಿತ ವಿದ್ಯಾರ್ಥಿಗಳಾಗಿದ್ದರು.[೧೬] ಅಂದರೆ ಒಂದೂವರೆ ಸಾವಿರ ವಿದ್ಯಾರ್ಥಿಗಳ ಪೈಕಿ ನೂರಾ ಐವತ್ತು ಮಂದಿ ವಿದ್ಯಾರ್ಥಿಗಳು ದಲಿತ ವಿದ್ಯಾರ್ಥಿಗಳಾಗಿದ್ದರು. ಇದು ಆ ಕಾಲಕ್ಕೆ ಅಚ್ಚರಿಗೊಳಿಸುವ ಮತ್ತು ಸಂತೋಷಪಡಬಹುದಾದಂತಹ ಅಂಶವಾಗಿದೆ. ಇಷ್ಟು ಜನರ ಊಟ-ವಸತಿ ಶ್ರೀ ನರಸಿಂಹರಾಜ ಒಡೆಯರ್ ಹಾಸ್ಟೆಲಿನಲ್ಲೇ ನಡೆಯುತ್ತಿತ್ತು. ಪ್ರೌಢಶಾಲೆಯಲ್ಲಿ ಈ ವಿದ್ಯಾರ್ಥಿಗಳ ಒಳಿತು-ಕೆಡುಕುಗಳನ್ನು ಆಸ್ಥೆಯಿಂದ ವಿಚಾರಿಸಿಕೊಳ್ಳುತ್ತಿದ್ದ ಮುಖ್ಯೋಪಾಧ್ಯಾಯರಾದ ಶ್ರೀಧರಮೂರ್ತಿ ಅವರು ಗಂಗಾಧರಯ್ಯ ಅವರಿಗೂ ಆದರ್ಶವಾಗಿದ್ದರು.[೧೭]

ತುಮಕೂರಿನಲ್ಲಿದ್ದಾಗಲೇ ಗಂಗಾಧರಯ್ಯ ಅವರು ಬೆಂಗಳೂರಿಗೆ ಬಂದು ಕಲಾ ಪರೀಕ್ಷೆಯಲ್ಲಿ ಭಾಗವಹಿಸಿ ತೇರ್ಗಡೆಯಾಗಿದ್ದರು. ಈ ಸಂದರ್ಭದಲ್ಲಿ ಬೆಂಗಳೂರಿನಲ್ಲೇ ಇದ್ದದ್ದರಿಂದ ಅವರ ಚಿತ್ರಕಲೆಯ ಅಭ್ಯಾಸಕ್ಕೆ ಸಾಕಷ್ಟು ಉತ್ತಮ ಅವಕಾಶಗಳೇ ಸಿಕ್ಕಿದವು. ಖ್ಯಾತಿವೆತ್ತ ಚಿತ್ರಕಲಾವಿದರ ಚಿತ್ರಕಲಾ ಪ್ರದರ್ಶನಗಳಿಗೆ ಹೋಗಿ ಕುತೂಹಲದಿಂದ ಅವರ ಚಿತ್ರ ರಚನೆಯನ್ನು ಅಭ್ಯಸಿಸಲು ಪ್ರಯತ್ನಿಸುತ್ತಿದ್ದರು. ಈ ಬಗೆಯ ಬೆಳವಣಿಗೆಗಳು ಅವರಲ್ಲಿನ ಕಲೋಪಾಸಕ ಗುಣವನ್ನು ಇನ್ನಷ್ಟು ಸೂಕ್ಷ್ಮವಾಗಿಸಿದವೆಂದು ಹೇಳಬಹುದು. ಇದಷ್ಟೇ ಅಲ್ಲದೆ ಆಗ ಗಾಂಧೀನಗರದಲ್ಲಿ 'ಅ.ನ.ಸು.' ಎಂದೇ ಜನಪ್ರಿಯವಾಗಿರುವ ಅ.ನ.ಸುಬ್ಬರಾಯರ ಕಲಾಮಂದಿರವೊಂದಿತ್ತು(ಈಗ ಅದು ಹನುಮಂತನಗರದಲ್ಲಿ ಮುನ್ನಡೆಯುತ್ತಿದೆ). ಆ ಕಾಲಕ್ಕೆ ಅದು ಚಿತ್ರಕಲೆಯನ್ನು ಕಲಿಯುವವರ ಕೇಂದ್ರಬಿಂದುವಾಗಿತ್ತು.[೧೮] ಅವರಲ್ಲಿದ್ದ ಸಹಜ ಪ್ರತಿಭೆ ಅ.ನ.ಸುಬ್ಬರಾಯರ ಗಮನ ಸೆಳೆಯಿತು. ಸುಬ್ಬರಾಯರು ಗಂಗಾಧರಯ್ಯ ಅವರ ಕೃತಿ ರಚನೆಗಳ ಬಗ್ಗೆ ವಿಶೇಷವಾದ ಆಸಕ್ತಿ ವಹಿಸತೊಡಗಿದ್ದರಲ್ಲದೆ ಅಗತ್ಯ ಕಂಡಲ್ಲಿ ಸಲಹೆಗಳನ್ನು ನೀಡುವುದರ ಮೂಲಕ ಮಾರ್ಗದರ್ಶನ ನೀಡಿದರು. ವಿದ್ಯಾಭ್ಯಾಸ ಮತ್ತು ಕಲಾಶಿಕ್ಷಣಗಳ ನಡುವೆ ಹೇಗೋ ಸಮತೋಲನ ಏರ್ಪಡಿಸಿಕೊಂಡು ಅವರು ತಾವಂದುಕೊಂಡದ್ದನ್ನು ಸಾಧಿಸುತ್ತ ನಡೆದರು.

ಈ ಅವಧಿಯಲ್ಲಿ ಅವರು ನಿಸರ್ಗ, ಪ್ರಾಣಿಪಕ್ಷಿಗಳು ಮತ್ತು ದೇವತೆಗಳ ಚಿತ್ರಗಳೊಂದಿಗೆ ಗಾಂಧೀಜಿ ಅವರ ಚಿತ್ರವನ್ನು ರಚಿಸಿದರು. ತಾನು ಬಡಿಸಿದ ರಾಗಿರೊಟ್ಟಿಯನ್ನು ಪ್ರೀತಿಯಿಂದ ತಿಂದಿದ್ದ

ಗಾಂಧೀಜಿ ಗಂಗಾಧರಯ್ಯ ಅವರ ಪ್ರತಿಕ್ಷಣದ ನೆನಪಿನಲ್ಲೂ ಉಳಿದಿದ್ದರು. ೧೯೨೭ರಲ್ಲಿ ಅಂತೆಯೇ ೧೯೩೨ರಲ್ಲಿ ಮತ್ತೊಮ್ಮೆ ಮಹಾತ್ಮಾ ಗಾಂಧಿ ಅವರು ಸ್ವಾತಂತ್ರ್ಯ ಸಮರದ ಸಂದೇಶ ಸಾರುತ್ತ ಬೆಂಗಳೂರಿಗೆ ಬಂದು ತಂಗಿದ್ದರು. ಆ ಸಂದರ್ಭದಲ್ಲಿ ಗಂಗಾಧರಯ್ಯ ಅವರು ತಾವು ರಚಿಸಿದ ಗಾಂಧೀಜಿ ಅವರ ತೈಲವರ್ಣಚಿತ್ರವನ್ನು ತಾವೇ ಗಾಂಧೀಜಿ ಅವರಿಗೆ ಸಮರ್ಪಿಸಿದರು.[೨೦] ಗಂಗಾಧರಯ್ಯ ಅವರು ರಚಿಸಿದ ತೈಲ ಚಿತ್ರವನ್ನು ನೋಡಿದ ಗಾಂಧೀಜಿ ಪ್ರಶಂಸೆಯ ಮಾತುಗಳನ್ನಾಡಿದರು. ಇದರಿಂದಾಗಿ ಗಂಗಾಧರಯ್ಯ ಅವರ ಬಹುದೊಡ್ಡ ಆಸೆಯೊಂದು ನೆರವೇರಿದಂತಾಯಿತು. ಗಂಗಾಧರಯ್ಯ ಅವರ ಪಾಲಿಗದು ಮರೆಯಲಾಗದ ಮತ್ತೊಂದು ದಿನವಾಗಿ ಉಳಿಯಿತೆಂದು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಅವರ ಆತ್ಮೀಯರೆನ್ನಿಸಿಕೊಂಡಿರುವ ಶ್ರೀ ನಂಜುಂಡಪ್ಪ ಅವರು ತಿಳಿಸಿದ್ದಾರೆ. ಈ ಪ್ರಸಂಗದ ನಂತರವೂ ಗಾಂಧೀಜಿ ಸುಮಾರು ಹದಿನಾರು ವರ್ಷಗಳ ಕಾಲ ಬದುಕಿದರೂ ಮತ್ತೆ ಗಂಗಾಧರಯ್ಯ ಅವರಿಗೆಂದೂ ಭೇಟಿಯಾಗುವ ಅವಕಾಶ ಒದಗಲೇ ಇಲ್ಲ.

ಮೂರು ವರ್ಷಗಳ ಗಂಗಾಧರಯ್ಯ ಅವರ ಪ್ರೌಢಶಾಲಾ ಶಿಕ್ಷಣದ ಅವಧಿಯು ಮುಗಿದ ನಂತರ ಮುಂದೆ ಶ್ರೀಧರಮೂರ್ತಿ ಅವರಂತಹ ಮುಖ್ಯೋಪಾಧ್ಯಾಯರು ವಿದ್ಯಾಭ್ಯಾಸಕ್ಕೆ ಚೇತನವಾಗಿ ನಿಂತರೆ, ಎ.ಎನ್.ಸುಬ್ಬರಾಯರು ಚಿತ್ರಕಲೆಯಲ್ಲಿ ನೈಪುಣ್ಯತೆಯನ್ನು ಸಾಧಿಸಲು ನೆರವಾದರು. ಗೋಪಾಲಸ್ವಾಮಿ ಅಯ್ಯರ್ ಅವರಂತಹವರು ಗಾಂಧಿಯ ಆದರ್ಶಗಳನ್ನೇ ತಮ್ಮ ಬದುಕಿನ ಮೌಲ್ಯಗಳನ್ನಾಗಿಸಿಕೊಂಡು ಸಮಾಜ ಸೇವೆ ನಡೆಸುತ್ತಿದ್ದದ್ದು ಗಂಗಾಧರಯ್ಯ ಅವರ ಮುಂದಿನ ಜೀವನದ ಆದರ್ಶಗಳಾದವು. ಒಟ್ಟಿನಲ್ಲಿ ಬೆಂಗಳೂರಿನ ಮೂರು ವರ್ಷಗಳು ಬದುಕಿನ ಬೇರೆಯದೆ ಆದ ಮಜಲೊಂದನ್ನು ಗಂಗಾಧರಯ್ಯ ಅವರಿಗೆ ತೆರೆದು ತೋರಿಸಿತೆಂಬುದು ಗಮನಾರ್ಹ.

೧೯೩೩ನೇ ಇಸವಿಯಲ್ಲಿ ಗಂಗಾಧರಯ್ಯ ಅವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು.[೨೧] ಅವರು ಮುಂದಿನ ಶೈಕ್ಷಣಿಕ ದಾರಿಯನ್ನು ಹುಡುಕಿಕೊಳ್ಳಬೇಕಿತ್ತು. ಪಂಚಮರ ಆರ್.ಗೋಪಾಲಸ್ವಾಮಿ ಅಯ್ಯರ್ ಮತ್ತು ಅ.ನ.ಸುಬ್ಬರಾಯರನ್ನು ಕಂಡು ಸಲಹೆಗಳನ್ನು ಪಡೆದರು. ಅವರಿಗೆ ಮುಂದಿನ ವಿದ್ಯಾಭ್ಯಾಸಕ್ಕಿಂತಲೂ ಚಿತ್ರಕಲೆಯ ಅಭ್ಯಾಸವೇ ಹೆಚ್ಚಿನ ಆಸಕ್ತಿಯ ವಿಷಯವಾಗಿ ಕಂಡಿತು. ಹಾಗಾಗಿ ಬೆಂಗಳೂರನ್ನು ಬಿಟ್ಟು ಮೈಸೂರಿಗೆ ಬಂದರು.

ಇಲ್ಲಿ ಶ್ರೀ ಜಯಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಐದು ವರ್ಷಗಳ ಅವಧಿಯ ಚಿತ್ರಕಲಾ ಶಿಕ್ಷಣವನ್ನು ಪಡೆಯಲು ಸುಲಭವಾಗಿಯೇ ಅವಕಾಶ ಸಿಕ್ಕಿತು. ಅವರು ಈ ಹಿಂದೆ ಬೆಂಗಳೂರಿನ ಕಲಾಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರಿಂದ, ಬೆಂಗಳೂರಿನ ಅ.ನ.ಸು. ಕಲಾಶಾಲೆಯಲ್ಲಿ ವಿದ್ಯಾರ್ಥಿ ಯಾಗಿದ್ದಾಗ ಅವರ ಅದುವರೆಗಿನ ತೈಲವರ್ಣ ಚಿತ್ರಕಲಾ ನೈಪುಣ್ಯತೆಯನ್ನು ಗಮನಿಸಿದ

ಕಲಾಶಾಲೆ ಅವರು ಪ್ರಾರಂಭದಲ್ಲೇ ಶಿಕ್ಷಣಾವಧಿಯ ಮೂರನೆಯ ವರ್ಷದ ತರಗತಿಗೆ ಸೇರಿಸಿಕೊಂಡರು.[೨೨] ಹೀಗಾಗಿ ಶಿಕ್ಷಣದಲ್ಲಿ ಎರಡು ವರ್ಷಗಳ ಮುಂಬಡ್ತಿಯನ್ನು ಪಡೆದರು.

ಮೈಸೂರಿನಲ್ಲಿ ಅವರ ಚಿತ್ರಕಲಾ ಪ್ರೌಢಿಮೆ ಉನ್ನತಿಗೇರಿತು. ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ವಿದ್ಯಾಲಯದಲ್ಲಿ ಅತ್ಯಂತ ಪ್ರತಿಭಾನ್ವಿತರಾದ ಚಿತ್ರಕಲಾ ಅಧ್ಯಾಪಕರಿದ್ದರು. ಇವರಲ್ಲಿ ಕೆಲವರು ವಿದೇಶಗಳಲ್ಲಿ ಚಿತ್ರಕಲೆ ಮತ್ತು ಶಿಲ್ಪಕಲೆಗೆ ಸಂಬಂಧಿಸಿದ ವಿಷಯಗಳಲ್ಲಿ ಅಧ್ಯಯನ ನಡೆಸಿ ಪರಿಣತರಾಗಿದ್ದವರಿದ್ದರು. ಅಂತಹವರ ಪೈಕಿ ಡಾ.ಪಾವಂಜೆ ಮುಖ್ಯರಾದವರು. ಡಾ.ಪಾವಂಜೆ ಅವರ ಕೃತಿಗಳು ಮೇಲ್ಮಟ್ಟದ ಚರ್ಚೆಗೊಳಪಟ್ಟು ಪ್ರಶಂಸೆಗೊಳಪಟ್ಟಿದ್ದವು. ಇಲ್ಲಿ ಗಂಗಾಧರಯ್ಯ ಅವರು ಪಾವಂಜೆ ಅವರ ಆಪ್ತ ಶಿಷ್ಯರಾದರು.

ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ವಿದ್ಯಾಲಯದಲ್ಲಿ ಗಂಗಾಧರಯ್ಯ ಅವರು ಪಾವಂಜೆ, ಕೇಶವಯ್ಯ ಮತ್ತು ಟಂಕಸಾಲೆ ಅವರುಗಳ ಪ್ರಭಾವಕ್ಕೆ ಒಳಗಾಗಿದ್ದರು. ಗಂಗಾಧರಯ್ಯ ಅವರು ಹೇಳಿರುವಂತೆ ಅವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ರಚಿಸಿದ ಹಲವಾರು ಕೃತಿಗಳಿಗೆ ರವಿವರ್ಮ ಅವರೇ ನಿಜವಾದ ಸ್ಫೂರ್ತಿ. ಅವರೊಂದಿಗೆ ತಮ್ಮ ಅಧ್ಯಾಪಕ ವರ್ಗದಲ್ಲಿದ್ದ ಪಾವಂಜೆ, ಕೇಶವಯ್ಯ ಮತ್ತು ಟಂಕಸಾಲೆ ಕೂಡ ಹೆಚ್ಚು ಪ್ರಿಯರಾದವರು.[೨೩]

ಡಿಸೈನ್, ಮಾಡೆಲ್ ಡ್ರಾಯಿಂಗ್ ಮತ್ತು ಹೈಯರ್ ಪರೀಕ್ಷೆಗಳನ್ನು ಮುಗಿಸಿ ೧೯೩೭ರಲ್ಲಿ ಅವರು ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ವಿದ್ಯಾಲಯದಲ್ಲಿ ಕಲಾಶಿಕ್ಷಣದ ಡಿಪ್ಲೊಮೊ ಪದವಿ ಪಡೆದರು. ಆ ನಂತರದಲ್ಲಿ ಅವರಿಗೆ ಮುಂಬೈನ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್ ಕಾಲೇಜಿನಲ್ಲಿ ಎಂಟು ವರ್ಷಗಳ ಅವಧಿಯ ಶಿಕ್ಷಣಕ್ಕೆ ಸೀಟು ದೊರೆತರೂ ಹದಗೆಟ್ಟ ಆರ್ಥಿಕ ಪರಿಸ್ಥಿತಿಯಿಂದಾಗಿ ಅವರು ಅಲ್ಲಿಗೆ ಹೋಗಲಾಗಲಿಲ್ಲ.[೨೪]

ಗಂಗಾಧರಯ್ಯ ಅವರ ಈ ನಿರ್ಧಾರವೇ ಅವರ ಬದುಕಿನ ಬಹುಮುಖ್ಯ ನಿರ್ಣಾಯಕ ಘಟ್ಟವಾಯಿತೆನಿಸುತ್ತದೆ. ಯಾಕೆಂದರೆ ಅವರೇನಾದರೂ ಮುಂಬೈನ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ವ್ಯಾಸಂಗ ಮಾಡಲು ಹೊರಟಿದ್ದಿದ್ದರೆ ಮತ್ತೆಂದೂ ಹಿಂದಿರುಗಿ ನೋಡದಂತೆ ಚಿತ್ರಕಲೆಯಲ್ಲಿಯೇ ಸಾಧನೆ ಮಾಡುತ್ತ ಮುಂದೆ ಸಾಗಿ ಹೋಗುತ್ತಿದ್ದರು. ಅಲ್ಲಿ ಅವರಿಗೆ ಚಿತ್ರಕಲೆಗೆ ಸಂಬಂಧಿಸಿದಂತೆ ಆಗುತ್ತಿದ್ದ ಅನುಭವಗಳು, ಸಿಗುತ್ತಿದ್ದ ಸಂಪರ್ಕಗಳು, ಸ್ವತಃ ನಡೆಸುತ್ತಿದ್ದ ಪ್ರಯೋಗಗಳು ಮತ್ತು ಜಾಗತಿಕ ಚಿತ್ರಕಲೆಯ ಮಹಾಪರಂಪರೆಯ ಅರಿವು ಸಿಕ್ಕಿ ಈ ವೇಳೆಗಾಗಲೆ ಗಂಗಾಧರಯ್ಯ ಒಬ್ಬ ಪ್ರಸಿದ್ಧ ಕಲಾವಿದರಾಗಿರುತ್ತಿದ್ದರು. ಆದರೆ ಅವರ ಅಗತ್ಯ ಈ ಸಮಾಜಕ್ಕೆ ಬೇರೆ ರೀತಿಯಲ್ಲಿ ಬೇಕಿತ್ತೆಂದು ಹೇಳಬಹುದು. ಅವರ ಬದುಕಿನ ದಾರಿ ಇಲ್ಲಿ ಕವಲೊಡೆಯಿತು. ಈಗಲೂ ಅವರ ಕೆಲವು ಕೃತಿಗಳು

ಗಮನ ಸೆಳೆಯುವಂತಿದ್ದರೂ ಅದು ಒಂದು ಹಂತದವರೆಗಿನ ನಿರೀಕ್ಷೆಗಳನ್ನು ಮಾತ್ರ ಪೂರೈಸುವಂತಿವೆ. ಇನ್ನಷ್ಟು ಅದ್ಭುತ ಕೃತಿಗಳು ಬರಬೇಕಿತ್ತು ಎಂಬ ಕೊರತೆಯಂತೂ ಖಂಡಿತ ಉಳಿಯುತ್ತದೆ.

೨.೨. ಕಲಾಶಿಕ್ಷಕನಾಗಿ

ಗಂಗಾಧರಯ್ಯ ಅವರು ರೈಲ್ವೆ ಇಲಾಖೆಯಲ್ಲಿದ್ದಾಗಲೇ ವಿದ್ಯಾ ಇಲಾಖೆಯಿಂದ ಪತ್ರವೊಂದು ಬಂತು. ಆ ಪತ್ರ ತೀರ್ಥಹಳ್ಳಿಯ ಪ್ರೌಢಶಾಲೆಗೆ ಹೆಚ್.ಎಂ.ಗಂಗಾಧರಯ್ಯ ಅವರನ್ನು ಕಲಾಶಿಕ್ಷಕರಾಗಿ ನೇಮಿಸಿರುವುದಾಗಿಯೂ ಮತ್ತು ಆ ಕೆಲಸಕ್ಕೆ ಹಾಜರಾಗುವಂತೆಯೂ ಸೂಚಿಸಿತ್ತು.[೨೫] ಗಂಗಾಧರಯ್ಯ ಅವರಿಗೆ ಇಷ್ಟದ ಕೆಲಸವೇ ಆಯಿತು. ಯಾಕೆಂದರೆ ತಾನು ಕಲಿತದ್ದು ಮತ್ತು ಕಲಿಸಬೇಕಿರುವುದೆರಡೂ ಒಂದೇ ವಿಷಯವಾಗಿತ್ತು. ಒಂದಿಷ್ಟು ತಪ್ಪಿಹೋದಂತಿದ್ದ ಕಲಾ ಸಂಬಂಧ ಮತ್ತೆ ಹೊಸದಾಗಿ ಚಿಗುರಲು ಕೂಡ ಇದರಿಂದ ಸಾಧ್ಯವಿತ್ತು. ತಕ್ಷಣವೇ ಅವರು ರೈಲ್ವೇ ಇಲಾಖೆಯನ್ನು ತ್ಯಜಿಸಿ, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಗೆ ಬಂದರು.

ಗಂಗಾಧರಯ್ಯ ಅವರು ತೀರ್ಥಹಳ್ಳಿಗೆ ಬಂದೊಡನೆಯೆ ಅವರ ಆಗಮನದ ಎಲ್ಲ ಕಾರಣ ಸಂಬಂಧಗಳೊಂದಿಗೆ ಅವರ ಕುಲಗೋತ್ರಗಳ ಜಾತಕವನ್ನು ಆ ಊರಿನ ಜಾತ್ಯಂಧ ಮನಸ್ಸು ಕಲೆ ಹಾಕಿ ಬಿಟ್ಟಿತು. ತಮ್ಮ ಊರಿಗೆ ಅಸ್ಪೃಶ್ಯ ಜಾತಿಯವರೊಬ್ಬರು ಕಲಾ ಶಿಕ್ಷಕರಾಗಿ ಬಂದುಬಿಟ್ಟರಲ್ಲ ಎಂದು ಅನೇಕರು ಕಸಿವಿಸಿಗೊಂಡರು. ಈ ಭಾವನೆಯು ಗಂಗಾಧರಯ್ಯ ಅವರನ್ನು ಜಾತಿಗೆ ಸಹಜವಾದ ಮೇಲರಿಮೆಯ ತಾತ್ಸಾರ ಭಾವದಿಂದ ನೋಡತೊಡಗಿದರು. ಹಾಗೆ ತಾತ್ಸಾರದಿಂದ ಕಾಣುವ ಕಣ್ಣುಗಳಿಗೆ ಗಂಗಾಧರಯ್ಯ ಅವರಲ್ಲಿದ್ದ ಕಲಾ ಪ್ರತಿಭೆಯಾಗಲಿ ಅಥವಾ ಸರಳತೆ ಪ್ರಾಮಾಣಿಕತೆಗಳಾಗಲಿ ಕಾಣಲೇ ಇಲ್ಲ.

ಗಂಗಾಧರಯ್ಯ ಅವರ ಜಾತಕ ವಿವರ ಊರಿನಲ್ಲೆಲ್ಲ ಹಬ್ಬಿತು. ಯಾರೊಬ್ಬರೂ ಮನೆಯನ್ನು ಕೊಡಲು ಮುಂದಾಗಲೇ ಇಲ್ಲ. ಪ್ರೌಢಶಾಲೆಯ ತಮ್ಮೂರಿನ ತಮ್ಮ ಮಕ್ಕಳಿಗೆ ಕಲೆಯ ವಿದ್ಯೆ ಧಾರೆಯೆರೆಯಲು ಬಂದ ವ್ಯಕ್ತಿಯೊಬ್ಬರನ್ನು ಊರಿಂದಾಚೆ ಇರಿಸಿದ ಜನರು ಆತನೊಳಗಿನ ಕಲೆಯನ್ನು ಮಾತ್ರ ಹೇಗೆ ಸ್ವಾಗತಿಸಬಲ್ಲರು? ಅವರ ವಿದ್ಯೆಯೊಂದನ್ನು ತಮ್ಮ ಮಕ್ಕಳ ಹೃದಯದೊಳಕ್ಕೆ ಹೇಗೆ ಬಿಟ್ಟುಕೊಳ್ಳಲು ಸಿದ್ಧರಿದ್ದರು.

ಆದರೆ ಕೆಲವರಾದರೂ ಮನುಷ್ಯರ ಇಂತಹ ಸಣ್ಣತನಗಳನ್ನು ಮೀರಿ ಬದುಕುವ ಧೈರ್ಯ ತೋರಿಸುತ್ತಾರೆ. ಅಂತಹ ಬೆರಳೆಣಿಕೆಯಷ್ಟು ಜನ ಮಾತ್ರ ಇತಿಹಾಸದಲ್ಲಿ ನೆನಪಾಗಿ ಉಳಿಯಬಲ್ಲರು. ಅಂತಹವರಷ್ಟೇ ನೆನಪಲ್ಲಿ ಇರಲು ಯೋಗ್ಯರು ಕೂಡ. ಗಂಗಾಧರಯ್ಯ ಅವರು ಹೋದ ಕಡೆಯಲ್ಲೆಲ್ಲ ಯಾವುದಾದರೊಂದು ಮಾನವ ಹೃದಯ ಅವರ ವಿಷಯದಲ್ಲಿ ಮಿಡಿಯುತ್ತದೆ. ಅದು ಶಾಲಾ

ತನಿಖಾಧಿಕಾರಿಯಾಗಿರಬಹುದು ಅಥವಾ ಮುಖ್ಯೋಪಾಧ್ಯಾಯ ರಾಯಪ್ಪ ಅವರಿರಬಹುದು; ಕಲಾಶಿಕ್ಷಕ ಸಿದ್ಧಲಿಂಗಯ್ಯ ಅವರಿರಬಹುದು; ಶ್ರೀಧರಮೂರ್ತಿ ಅವರಿರಬಹುದು ಅಥವಾ ಗೋಪಾಲಸ್ವಾಮಿ ಅಯ್ಯರ್, ಸುಬ್ರಹ್ಮಣ್ಯ ಅಯ್ಯರ್, ಟಂಕಸಾಲೆಗಳಾಗಿರಬಹುದು. ಒಟ್ಟಿನಲ್ಲಿ ಹೋದಡೆಯಲ್ಲೆಲ್ಲ ಒಂದಾದರೂ ಮನುಷ್ಯ ಚೇತನ ಕಾಣಿಸಿ ಗಂಗಾಧರಯ್ಯ ಅವರ ಆತ್ಮವಿಶ್ವಾಸದ ಪುಟ್ಟಹಣತೆ ಅಪಮಾನದ ಬಿರುಗಾಳಿಗೆ ಸಿಕ್ಕಿ ನಂದಿಹೋಗದಂತೆ ಕಾಪಾಡಿವೆ. ಹಾಗೆಯೇ ತೀರ್ಥಹಳ್ಳಿಯಲ್ಲೂ ಕೆಲವು ಚೇತನಗಳು ಗಂಗಾಧರಯ್ಯ ಅವರ ಆತ್ಮವಿಶ್ವಾಸ ಕುಸಿಯದಂತೆ ಧಾವಿಸಿ ಬಂದು ಸಹಾಯವೆಸಗಿದ್ದಾರೆ. ಅವರ ಪೈಕಿ ಮೊದಲನೆಯ ವ್ಯಕ್ತಿ ಜವಳಿ ಆನಂದರಾವ್ ಎಂಬ ಗಾಂಧೀವಾದಿ ಪ್ರಮುಖರಾಗಿ ಕಂಡುಬರುತ್ತಾರೆ.

ಜವಳಿ ಆನಂದರಾವ್ ಅವರಿಗೆ ಗಂಗಾಧರಯ್ಯ ಅವರ ಸ್ಥಿತಿ ಅರ್ಥವಾಯಿತು. ತಕ್ಷಣವೇ ಅವರು ತಮ್ಮ ಇನ್ನೊಂದು ಮನೆಯಲ್ಲಿ ಕೊಠಡಿ ಖಾಲಿ ಇರುವುದರಿಂದ ಅಲ್ಲೇ ಬಂದು ಇರಬಹುದೆಂಬುದಾಗಿ ತಿಳಿಸಿ ಅವರನ್ನು ತಮ್ಮ ಮನೆಗೆ ಕೊಂಡೊಯ್ದರು. ಊಟವನ್ನು ಮಾತ್ರ ಅವರೇ ಸ್ವಯಂ ಮಾಡಿಕೊಳ್ಳುತ್ತಿದ್ದರು. ಕೆಲವು ದಿನಗಳ ನಂತರ ಅದೇ ಕೊಠಡಿಯಲ್ಲಿ ವಾಸ ಮಾಡಲು ಕ್ರೈಸ್ತಮತದ ಲೋಬೊ ಎನ್ನುವವರೊಬ್ಬರು ಬಂದರು.[೨೬] ಅವರು ವೃತ್ತಿಯಲ್ಲಿ ರೆವಿನ್ಯೂ ಅಧಿಕಾರಿಗಳಾಗಿದ್ದರು. ಬಂದ ಸ್ವಲ್ಪ ಸಮಯದೊಳಗೆ ಲೋಬೊ ಮತ್ತು ಗಂಗಾಧರಯ್ಯ ಅವರು ಆಪ್ತಮಿತ್ರರಾಗಿಬಿಟ್ಟರು.

ಆ ಕಾಲದಲ್ಲಿ ದಲಿತರಿಗೆ ಕ್ಷೌರಿಕರ್‍ಯಾರು ಕ್ಷೌರ ಮಾಡುತ್ತಿರಲಿಲ್ಲ. ಹಾಗೆ ಉಳಿದ ಸವರ್ಣೀಯ ಜಾತಿಗಳ್ಯಾವುವೂ ದಲಿತರಿಗೆ ತಮ್ಮ ಸೇವೆಯನ್ನು ಒದಗಿಸುತ್ತಿರಲಿಲ್ಲ. ಹಾಗೇನಾದರೂ ಕ್ಷೌರ ಮಾಡಿದ್ರೋ, ಬಟ್ಟೆ ಒಗೆದದ್ರೋ ಗೊತ್ತಾದರೆ ಅಂತಹವರಿಗೆ ಸಾಮಾಜಿಕ ಬಹಿಷ್ಕಾರದ ಶಿಕ್ಷೆ ಕಾದಿರುತ್ತಿತ್ತು. ಹೀಗಾಗಿ ಸಾಧಾರಣವಾಗಿ ಯಾರೂ ಈ ಸಾಹಸಕ್ಕೆ ಮುಂದಾಗುತ್ತಿರಲಿಲ್ಲ. ತೀರ್ಥಹಳ್ಳಿ ಈ ದೇಶದಲ್ಲೇ ಇರುವುದರಿಂದ ಅಲ್ಲೂ ಈ ಪದ್ಧತಿಯೇ ಜಾರಿಯಲ್ಲಿತ್ತು. ಇದರ ಎಲ್ಲ ಮಗ್ಗುಲ ಸಮಸ್ಯೆಗಳನ್ನೂ ಅಡಿಯಿಂದ ಮುಡಿಯವರೆಗೂ ಬಲ್ಲ ಗಂಗಾಧರಯ್ಯ ಅವರು ಹೊಸದಾಗಿ ಕೊರಗುವುದೇನಿರಲಿಲ್ಲ. ಅದಕ್ಕೆ ಬೇಕಾದ ಮಾನಸಿಕ ತಯಾರಿಯ ಸಿದ್ಧತೆ ಮಾಡಿಕೊಂಡೇ ಇದ್ದರು. ಹಾಗಾಗಿ ಗಂಗಾಧರಯ್ಯ ಅವರು ತಮಗೆ ತಾವೇ ಸ್ವತಃ ಕ್ಷೌರ ಮಾಡಿಕೊಳ್ಳುವ ಪದ್ಧತಿಯನ್ನೇ ರೂಢಿಸಿಕೊಂಡು ಬಿಟ್ಟಿದ್ದರು.[೨೭]

ಈ ಜಾತಿ ಕೆಟ್ಟಹುಳ ಎಲ್ಲಿ ಹೋದರೂ ನೆಮ್ಮದಿಯನ್ನು ಕೊರೆಯುತ್ತಿದ್ದುದನ್ನು ಬಿಟ್ಟರೆ ಉಳಿದಂತೆ ಅವರ ಬದುಕು ಸುಖಕರವಾಗಿಯೇ ಇತ್ತು. ೧೯೩೭ರಲ್ಲಿ ಗಂಗಾಧರಯ್ಯ ಅವರು ಕೆಲಸ ಮಾಡುತ್ತಿದ್ದ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ತಾಂಪಿರಾನ್ ಎಂಬುವವರು ಬಂದರು.[೨೮] ಇವರು ತಿರುವಾಂಕೂರಿನಿಂದ ಬಂದು ಬೆಂಗಳೂರಿನ ಕೋಟೆ ಪ್ರೌಢಶಾಲೆಯಲ್ಲಿ ಗಂಗಾಧರಯ್ಯ ಅವರಿಗೆ ಪಾಠ

ಹೇಳಿಕೊಟ್ಟಿದ್ದ ಗುರುಗಳು. ತೀರ್ಥಹಳ್ಳಿಗೆ ಬಂದ ಈ ಹೊಸ ಮುಖ್ಯೋಪಾಧ್ಯಾಯರಾದ ತಾಂಪಿರಾನ್ ಎಂಬುವವರು ದಲಿತರೆಂಬ ವಿಷಯ ಕಿವಿಯಿಂದ ಕಿವಿಗೆ ಹಬ್ಬಿತು. ತಾಂಪಿರಾನ್ ಅವರಿಗೆ, ಗಂಗಾಧರಯ್ಯ ಅವರಿಗೆ ತೋರಿದ ಅಸಹಕಾರವನ್ನೇ ಊರು ತೋರಿಸಿತು. ಕ್ಷೌರದ ವಿಚಾರದಲ್ಲಿ ಗಂಗಾಧರಯ್ಯ ಅವರಿಗೆ ಒದಗಿದ ತೊಂದರೆಯೇ ತಾಂಪಿರಾನ್ ಅವರಿಗೂ ಒದಗಿತು. ಅನೇಕ ಬಾರಿ ತಾಂಪಿರಾನ್ ಅವರು ತಾವೇ ಕ್ಷೌರ ಮಾಡಿಕೊಳ್ಳಲು ಪ್ರಯತ್ನಿಸಿ, ಕೆಲವು ಸಾರಿ ಮುಖದಲ್ಲೆಲ್ಲ ಗಾಯ ಮಾಡಿಕೊಂಡು ಪ್ಲಾಸ್ಟರ್ ಹಾಕಿಕೊಂಡು ಶಾಲೆಗೆ ಬಂದದ್ದುಂಟು.[೨೯] ಗಂಗಾಧರಯ್ಯ ಅವರಿಗೆ ತಮಗಾದದ್ದಕ್ಕಿಂತಲೂ ತಾಂಪಿರಾನ್ ಅವರಿಗೆ ಆದ ತೊಂದರೆಯಿಂದಲೇ ಹೆಚ್ಚು ಬೇಸರವಾಯಿತು. ಆದರೆ ತಾವೂ ಬೇರೇನೂ ಮಾಡುವಂತಿರಲಿಲ್ಲ. ಇಬ್ಬರೂ ಬೇರೆ ಬೇರೆ ರಾಜ್ಯದವರೇ ಆಗಿದ್ದರೂ ಈಗ ಅವರಿಬ್ಬರೂ ಒಂದೇ ದೋಣಿಯಲ್ಲಿ ಪಯಣಿಸುತ್ತಿದ್ದರು. ಇಬ್ಬರೂ ಎದುರಿಸುತ್ತಿದ್ದದ್ದೂ ಒಂದೇ ಸಮಸ್ಯೆಯನ್ನೆ.

ಗಂಗಾಧರಯ್ಯ ಅವರಿಗೆ ಜಾತಿಯ ಕಾರಣದಿಂದ ಆಗುತ್ತಿರುವ ಮಾನಸಿಕ ಹಿಂಸೆಯ ಎಳೆ ಎಳೆಯನ್ನು ಅರಿತಿದ್ದ ಲೋಬೊ ಅವರು ಗಂಗಾಧರಯ್ಯ ಅವರನ್ನು ಚರ್ಚಿನ ಪಾದ್ರಿ ಅವರ ಬಳಿಗೆ ಕರೆದುಕೊಂಡು ಹೋದರು. ಪಾದ್ರಿಗಳು ಗಂಗಾಧರಯ್ಯ ಅವರೊಂದಿಗೆ ಮಾತನಾಡುತ್ತ ಸಮಾನ ಸಾಮಾಜಿಕ ಸ್ಥಾನಮಾನಗಳನ್ನು ಕೊಡಲಾರದ, ಕಡು ಅವಮಾನಗಳಿಗೆ ಈಡು ಮಾಡುವ ಧರ್ಮಕ್ಕಿಂತಲೂ ಕ್ರೈಸ್ತ ಧರ್ಮವನ್ನು ಸ್ವೀಕರಿಸಿ ತಮ್ಮ ಸಾಮಾಜಿಕ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವಂತೆ ಸಲಹೆ ನೀಡಿದರು. ಮತಾಂತರವಾಗುವುದಾದರೆ ಸಾಕಷ್ಟು ಅನುಕೂಲಗಳನ್ನು ಕೂಡ ಮಾಡಿಕೊಡುವುದಾಗಿಯೂ ಭರವಸೆ ನೀಡಿದರು.[೩೦] ಆದರೆ ಅವರು ಮತಾಂತರವಾಗಲಿಲ್ಲ. ಅಸ್ಪೃಶ್ಯತೆಗೆ ಮತಾಂತರವೇ ಮದ್ದೆಂದು ಆಲೋಚಿಸಿದವರೂ ಅಲ್ಲ.

೧೯೩೦ರಲ್ಲಿ ತೀರ್ಥಹಳ್ಳಿಯಲ್ಲಿರುವಾಗಲೆ ಗಂಗಾಧರಯ್ಯ ಅವರಿಗೆ ತುಮಕೂರು ನಗರದ ಸಮೀಪದ ಗೊಲ್ಲಹಳ್ಳಿಯಲ್ಲಿನ ಗಂಗಮಾಳಮ್ಮ ಎಂಬುವವರೊಡನೆ ವಿವಾಹವಾಯಿತು.[೩೧] ಗಂಗಮಾಳಮ್ಮ ಅವರು ಸ್ವಭಾವತಃ ಮುಗ್ಧತೆಯುಳ್ಳವರು. ಗಂಗಾಧರಯ್ಯ ಅವರ ಆಲೋಚನೆಗಳ ಅಗಾಧತೆ ಮತ್ತು ಗಂಭೀರತೆಯನ್ನು ಅರಿಯಲಾಗದಿದ್ದರೂ ಕ್ರಮೇಣ ಅವರ ವರ್ತನೆ ಮತ್ತು ಬದುಕಿನ ಶೈಲಿಗೆ ಹೊಂದಿಕೊಂಡರು. ಗಂಗಾಧರಯ್ಯ ಅವರ ಸಾಧನೆ ಎಂಬ ಹೆಗಲಿಗೆ ಗಂಗಮಾಳಮ್ಮ ಅವರು ಹೆಗಲುಕೊಟ್ಟು, ನಿಂತರೆಂದು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಗಂಗಾಧರಯ್ಯ ಅವರ ಪುತ್ರರು, ಕರ್ನಾಟಕ ಸರ್ಕಾರದ ಮಾಜಿ ಮಂತ್ರಿಗಳು ಹಾಗೂ ಇಂದು ರಾಜ್ಯ ಕಂಡ ಧೀಮಂತ ರಾಜಕಾರಣಿಯೂ ಆಗಿರುವ ಡಾ.ಜಿ.ಪರಮೇಶ್ವರ ಅವರು ತಿಳಿಸುತ್ತಾರೆ. ಗಂಗಾಧರಯ್ಯ ಅವರಿಗೆ ಒಟ್ಟು ಐದು ಮಕ್ಕಳು. ಮೊದಲನೆಯವರು ಡಾ.ಜಿ.ಶಿವಪ್ರಸಾದ್, ಎರಡನೆಯವರು ಶ್ರೀಮತಿ ನಾಗರತ್ನಮ್ಮ, ಮೂರನೆಯವರು ಡಾ.ಜಿ.ಪರಮೇಶ್ವರ, ನಾಲ್ಕನೆಯವರು ಶ್ರೀಮತಿ ಸೌಭಾಗ್ಯಮ್ಮ, ಐದನೆಯವರು ಶ್ರೀಮತಿ ಕಮಲಮ್ಮ.

೧೯೩೯ರಲ್ಲಿ ಗಂಗಾಧರಯ್ಯ ಅವರು ಚಿಕ್ಕಮಗಳೂರಿಗೆ ಲೀವ್ ವೇಕೆನ್ಸಿಯಲ್ಲಿ ಕೆಲಸ ಮಾಡಲು ಹೊರಟರು. ಚಿಕ್ಕಮಗಳೂರಿನ ಪ್ರೌಢಶಾಲೆಯಲ್ಲಿ ಒಂದು ವರ್ಷ ಕಾಲ ಕೆಲಸ ಮಾಡಿದರು. ತೀರ್ಥಹಳ್ಳಿಯಲ್ಲಿದ್ದಾಗಲೇ ಆಗುಂಬೆಗೆ ಹೋಗಿದ್ದರು. ಆಗುಂಬೆ ಗಂಗಾಧರಯ್ಯ ಅವರ ಕುಂಚದಲ್ಲಿ ಕಪಾಲೇಶ್ವರನ ಹಿನ್ನೆಲೆಯ ನಿಸರ್ಗ ಚಿತ್ರವಾಗಿ ಮೂಡಿ ಬಂತು. ಆ ತೈಲವರ್ಣ ಚಿತ್ರವನ್ನು ಕಂಡ ಕಾಸರವಳ್ಳಿಯ ಶ್ರೀನಿವಾಸ ಶೆಟ್ಟರು 'ಕಪಾಲೇಶ್ವರ' ಚಿತ್ರವನ್ನು ಕೊಳ್ಳಲು ಬಯಸಿ, ಏಳುನೂರ ಇಪ್ಪತ್ತೈದು ರೂಗಳನ್ನು ನೀಡಿ ಅವರನ್ನು ದಿಗ್ಭ್ರಮೆಗೊಳಿಸಿದರು.[೩೨] ಆ ಸಂದರ್ಭದಲ್ಲೇ ಗಂಗಾಧರಯ್ಯ ಅವರು ತಮ್ಮೊಳಗಿನ ಚಿತ್ರಕಲಾ ಪ್ರತಿಭೆಯನ್ನು ಪರೀಕ್ಷಿಸಿಕೊಂಡದ್ದು.

೧೯೪೦ರಲ್ಲಿ ಗಂಗಾಧರಯ್ಯ ಅವರಿಗೆ ಚಿಕ್ಕಬಳ್ಳಾಪುರಕ್ಕೆ ವರ್ಗವಾಯಿತು. ಇಲ್ಲಿನ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ವೀರರಾಘವಾಚಾರ್ ಅವರು ಗಂಗಾಧರಯ್ಯ ಅವರಿಗೆ ಆತ್ಮೀಯ ಮಾರ್ಗದರ್ಶಕರಾಗಿದ್ದರು. ನಂತರ ೧೯೪೧ರಲ್ಲಿ ತುಮಕೂರಿಗೆ ವರ್ಗವಾಯಿತು.[೩೩] ೧೯೩೮ರಿಂದ ೧೯೪೧ರವರೆಗೆ ಮೂರ್ನಾಲ್ಕು ಊರುಗಳನ್ನು ಸುತ್ತಿದ ಅವರಿಗೆ, ತುಮಕೂರಿಗೆ ವಾಪಸ್ಸಾದುದು ಸಮಾಧಾನ ತಂದಿತ್ತು. ಕೆಲವು ದಿನಗಳ ಕಾಲ ನಾಗವಲ್ಲಿಯಲ್ಲೂ ಗಂಗಾಧರಯ್ಯ ಅವರು ಕೆಲಸ ಮಾಡಿದರು. ಅಲ್ಲಿ ಅವರು ಕೇವಲ ಕಲಾ ಶಿಕ್ಷಕರಷ್ಟೇ ಆಗಿರದೆ, ಭಾಷಾ ಬೋಧಕರೂ ಆಗಿದ್ದರು. ಕಲಾಶಿಕ್ಷಕ ಹುದ್ದೆಯಲ್ಲಿದ್ದುಕೊಂಡು ಸಮಾಜ ಸೇವೆಯನ್ನು ಮಾಡಲು ಸಾಧ್ಯವಿಲ್ಲ, ಸಮಾಜ ಸೇವೆಯನ್ನು ಮಾಡಿಕೊಂಡು ತನ್ನ ಹುದ್ದೆಗೆ ನ್ಯಾಯ ಸಲ್ಲಿಸಲು ಸಾಧ್ಯವಿಲ್ಲವೆಂದು ತಿಳಿದ ಅವರು ೧೯೪೨ರಲ್ಲಿಯೇ ತಮ್ಮ ಕಲಾಶಿಕ್ಷಕ ಹುದ್ದೆಗೆ ರಾಜೀನಾಮೆ ನೀಡಿದರು. ಅವರು ರಾಜೀನಾಮೆ ನೀಡಿದ ವರ್ಷದಿಂದಲೇ ಪೂರ್ಣ ಪ್ರಮಾಣದ ಸಮಾಜ ಸೇವಕರಾದರು.

೨.೩. ಗಂಗಾಧರಯ್ಯ ಅವರ ಮೇಲೆ ಸೈದ್ಧಾಂತಿಕ ಪ್ರಭಾವ

ಗಂಗಾಧರಯ್ಯ ಅವರು ಬಾಲ್ಯದಲ್ಲಿ ಅಜ್ಜ, ಅಜ್ಜಿ ಹಾಗೂ ತಂದೆ ಇವರೆಲ್ಲರ ಪ್ರಭಾವಕ್ಕೆ ಒಳಗಾಗಿದ್ದರು. ತಂದೆ ಮರಿಯಪ್ಪ ಅವರು ಬೋಧನೆಯೊಂದಿಗೆ ಸಣ್ಣಪುಟ್ಟ ರೋಗಗಳಿಗೆ ಉಚಿತ ವೈದ್ಯ ನೀಡುತ್ತ ತಮ್ಮ ಸುತ್ತಲ ಜನರ ಪ್ರೀತಿಗೆ ಪಾತ್ರರಾಗಿದ್ದರು. ತಂದೆಯವರ ಸಂಯಮ, ವಿನಯ, ವಿವೇಕ ಹಾಗೂ ಸಮಾಜಸೇವೆಯೂ ಇವರ ಮೇಲೆ ಪ್ರಭಾವ ಬೀರಿತ್ತು. ತಮ್ಮ ವ್ಯಾಸಂಗದ ಅವಧಿಯಲ್ಲಿ ಗಾಂಧಿ, ನರಸಿಂಹರಾಜ ಒಡೆಯರ್, ಅಂಬೇಡ್ಕರ್ ಅವರಂತಹ ಸಮಾಜ ಸುಧಾರಕರ, ಮಾನವತಾವಾದಿಗಳ ಚಿಂತನೆಗಳಿಂದ, ಸಮಾನತೆಯ ಸಿದ್ಧಾಂತಗಳಿಂದ ಪ್ರಭಾವಿತರಾಗಿದ್ದರು. ಗಂಗಾಧರಯ್ಯ ಅವರಿಗೆ ಗಾಂಧೀಜಿ ಅವರಂತಹ ಪ್ರಭಾವದಿಂದಾಗಿಯೇ ಭಗವದ್ಗೀತೆಯನ್ನು ಓದಲೇಬೇಕೆಂಬ ಆಸಕ್ತಿ ಉಂಟಾಯಿತು. ಆದ್ದರಿಂದಾಗಿ ಮೈಸೂರಿನ ಜಗ್ಗುಲಾಲ್ ಛತ್ರದ ಹಿರೋಡೆ ಮಠದಲ್ಲಿ ಗಂಗಾಧರಯ್ಯ ಅವರು ತಾನು

ಸವರ್ಣೀಯ ಜಾತಿಯವನೆಂದು ಹೇಳಿ ಭಗವದ್ಗೀತೆಯನ್ನು ಪಡೆದರು. ಗಾಂಧಿ ಅವರ 'ಹರಿಜನ ಪತ್ರಿಕೆ'ಯಲ್ಲಿನ ಲೇಖನಗಳಿಂದ ಹೆಚ್ಚು ಪ್ರಭಾವಿತರಾದದ್ದೂ ಉಂಟು. ಗೋಪಾಲಸ್ವಾಮಿ ಅಯ್ಯರ್ ಅವರಂತಹವರು ಗಾಂಧಿಯ ಆದರ್ಶಗಳನ್ನೇ ತಮ್ಮ ಬದುಕಿನ ಮೌಲ್ಯಗಳನ್ನಾಗಿಸಿಕೊಂಡು ಸಮಾಜಸೇವೆ ಮಾಡುತ್ತಿದ್ದದ್ದು ಗಂಗಾಧರಯ್ಯ ಅವರನ್ನು ಆಲೋಚಿಸುವಂತೆ ಮಾಡುತ್ತಿತ್ತು. ಗಾಂಧಿ, ಅಂಬೇಡ್ಕರ್, ಗೋಪಾಲಸ್ವಾಮಿ ಅಯ್ಯರ್ ಅವರ ವಿಚಾರಧಾರೆಗಳಿಂದ ಪ್ರಭಾವಿತರಾದ ಗಂಗಾಧರಯ್ಯ ಅವರು ಸಮಾಜಸೇವೆಯನ್ನೇ ತಮ್ಮ ಅಸ್ತ್ರವನ್ನಾಗಿ ಬಳಸಿಕೊಂಡದ್ದು ಒಂದು ಮರೆಯಲಾಗದ ಘಟ್ಟವಾಗಿದೆ.

ಬೆಂಗಳೂರಿನ ದಲಿತ ವಿದ್ಯಾರ್ಥಿನಿಲಯಕ್ಕೆ ಮೈಸೂರು ಯುವರಾಜರಾಗಿದ್ದ ನರಸಿಂಹರಾಜ ಒಡೆಯರ್ ಅವರು ಭೇಟಿ ನೀಡಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ "ಈ ಸೌಲಭ್ಯವನ್ನು ನಾವು ಒದಗಿಸಿಕೊಟ್ಟಿರುವುದು ಕೇವಲ ನಿಮ್ಮ ಅನುಕೂಲಕ್ಕಾಗಿ ಅಲ್ಲ, ನಾಳೆ ನಿಮ್ಮಿಂದ ದೇಶಕ್ಕೆ ಮಹದುಪಕಾರವಾದೀತೆಂಬ ದೂರದೃಷ್ಟಿಯಿಂದ ಈ ಯೋಜನೆಯನ್ನು ಕೈಗೊಳ್ಳಲಾಗಿದೆ. ನೀವೆಲ್ಲರೂ ಶ್ರದ್ಧಾಸಕ್ತಿಗಳಿಂದ ಓದಬೇಕು, ನಾಡಿನ ಮಹತ್ವವನ್ನರಿಯಬೇಕು. ನಾಳೆ ನೀವು ಆದರ್ಶ ಪ್ರಜೆಗಳಾಗಿ ಬಾಳಿ ದೀನ ದಲಿತರ ಸೇವೆಗೆ ಮುಂದಾಗಬೇಕು. ಸಮಾಜ ಸೇವೆಗೆ ಟೊಂಕಕಟ್ಟಿ ನಿಲ್ಲಬೇಕು. ನಮ್ಮ ಧರ್ಮ ಮತ್ತು ಸಂಸ್ಕೃತಿಗಳ ರಕ್ಷಣೆಯಲ್ಲಿ ಮಹತ್ತರ ಪಾತ್ರ ವಹಿಸಬೇಕು. ಕೆಳವರ್ಗದ ಜನರ ಕಲ್ಯಾಣಕ್ಕಾಗಿ ದುಡಿಯಬೇಕು. ಅವರನ್ನು ವಿದ್ಯೆ ಕಲಿಯಲು ಪ್ರಚೋದಿಸಬೇಕು. ಅವರವರ ಕಾರ್ಯಗಳಲ್ಲಿ ಶ್ರದ್ಧೆ ಹೆಚ್ಚುವಂತಹ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ನೀವು ಮಾಡುವ ಸಾಧನೆಯಿಂದ ಸಮಾಜಕ್ಕೆ ಹೆಚ್ಚು ಲಾಭ ದೊರೆಯಬೇಕು"[೩೪] ಎಂದು ಮಾತನಾಡಿದರು. ನರಸಿಂಹರಾಜ ಒಡೆಯರ್ ಅವರ ಮಾತುಗಳು ಗಂಗಾಧರಯ್ಯ ಅವರ ಮನಸ್ಸಿನ ಮೇಲೆ ಮಹತ್ತರವಾದ ಪರಿಣಾಮವನ್ನು ಬೀರಿದವು. ಅಕ್ಷರಗಳಿಂದ ವಂಚಿತರಾಗಿರುವ ಲಕ್ಷಾಂತರ ಜನರಿಗೆ ವಿದ್ಯೆ ನೀಡುವುದರ ಮೂಲಕ ಗಾಂಧಿ, ಅಂಬೇಡ್ಕರ್, ನರಸಿಂಹರಾಜ ಒಡೆಯರ್ ಅವರ ಸರ್ವೋದಯದ ಕನಸು ನನಸಾಗುವುದರಲ್ಲಿ ಯಾವುದೇ ಸಂಶಯವಿಲ್ಲವೆಂಬುದು ಗಂಗಾಧರಯ್ಯ ಅವರ ಆಲೋಚನೆಯಾಗಿತ್ತು.

ಸರ್ವೋದಯದ ನೇತಾರರಾದ ವಿನೋಬಾ ಭಾವೆ ಅವರು ಗಂಗಾಧರಯ್ಯ ಅವರನ್ನು ಕುರಿತು 'May you be a staunch social worker and may this gollahalli be a shanthi nikethan. let your honesty be a beacon for your efforts'[೩೫] ಎಂದು ಅವರನ್ನು ಆಶೀರ್ವದಿಸಿದರು. ಗಂಗಾಧರಯ್ಯ ಅವರು ವಿನೋಬಾ ಭಾವೆ ಅವರಿಂದ ಪ್ರಭಾವಿತರಾಗಿ, ಸರ್ಕಾರಿ ನೌಕರಿಯನ್ನು ಬಿಟ್ಟು, ಶಿಕ್ಷಣ ಸಂಸ್ಥೆ ಸ್ಥಾಪಿಸಲು ನಿಶ್ಚಯಿಸಿದರು. ತುಮಕೂರು ಹತ್ತಿರದಲ್ಲಿರುವ ಗೊಲ್ಲಹಳ್ಳಿಯಲ್ಲಿ ಒಂದು ಪ್ರೌಢಶಾಲೆಯನ್ನು ಪ್ರಾರಂಭಿಸಿ, ಶ್ರೀ ಸಿದ್ಧಾರ್ಥ ವಿದ್ಯಾಸಂಸ್ಥೆ ಬೆಳೆದು ಸಾಧನೆಯ ನಾಗಾಲೋಟದಲ್ಲಿ ಪಯಣಿಸಲು ನಾಂದಿ ಹಾಡಿದರು.

೨.೪. ಗಂಗಾಧರಯ್ಯ ಅವರ ಅಂತಿಮ ದಿನಗಳು

೧೯೯೪ರಲ್ಲಿ ಅಕ್ಷರ ಆಂದೋಲನದ ನಿಜವಾದ ರೂವಾರಿಯಾದ ಗಂಗಾಧರಯ್ಯ ಅವರ ೮೦ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಅವರ ಎಂಬತ್ತನೆಯ ಹುಟ್ಟುಹಬ್ಬವನ್ನು ಅವರೇ ಹುಟ್ಟು ಹಾಕಿದ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ ವೈಭವದಿಂದಲೂ, ಪ್ರೀತಿ, ಕೃತಜ್ಞತೆಗಳಿಂದಲೂ ಆಚರಿಸಿತು. ಆ ವಿಶೇಷ ಸಂದರ್ಭದಲ್ಲೇ ಗಂಗಾಧರಯ್ಯ ಅವರ ಜೀವನ ಚರಿತ್ರೆಯಾದ 'ಶಿಕ್ಷಣ ಭೀಷ್ಮ' ಎಂಬ ಕೃತಿಯೂ ಬಿಡುಗಡೆಯಾಯಿತು. ಸಮಾಜಕ್ಕೆ ತಮ್ಮ ಬದುಕನ್ನೇ ಧಾರೆ ಎರೆದ ಈ ತಜ್ಞರಿಗೆ ಅವರ ಅಭಿಮಾನಿಗಳು, ಹಿತೈಷಿಗಳು ಮತ್ತು ಅವರೇ ಕಟ್ಟಿದ ಸಂಸ್ಥೆ ಅಂದು ಜನಸ್ತೋಮದ ಪ್ರೀತಿಯನ್ನು ಹುಟ್ಟುಹಬ್ಬದ ಕಾರಣದಲ್ಲಿ ವ್ಯಕ್ತಪಡಿಸಿದರೆಂದು ವೈಯಕ್ತಿಕ ದಾಖಲೆಗಳಿಂದ ತಿಳಿದುಬರುತ್ತದೆ.

ಮುಂಜಾನೆಯ ನಾಲ್ಕು ಗಂಟೆಗೆ ಗಂಗಾಧರಯ್ಯ ಅವರ ದಿನಚರಿ ಪ್ರಾರಂಭವಾಗುತ್ತಿತ್ತು. ಆ ನೀರವತೆಯ ಮುಂಜಾನೆಗೆ ಅವರ ಓದು ಪ್ರಾರಂಭ. ಅವರಿಗೆ ಇಷ್ಟವಾವ ಬೌದ್ಧಗ್ರಂಥಗಳಿಂದ ಹಿಡಿದು ಅಂಬೇಡ್ಕರ್, ಗಾಂಧಿ, ವಿನೋಬಾ ಭಾವೆ, ವಿವೇಕಾನಂದರ ಸಾಹಿತ್ಯದವರೆಗೂ ಎಲ್ಲದರ ಅಧ್ಯಯನ ಪ್ರಾರಂಭವಾಗುತ್ತಿತ್ತು. ಓದುವುದು ಅವರಿಗೆ ಪ್ರಿಯವಾದ ಕೆಲಸ. ಬೆಳಗಿನ ಆರು ಗಂಟೆಯ ನಂತರ ಹಸುಕರುಗಳ ಆರೈಕೆಯಲ್ಲಿ ಸಮಯ ಸರಿಯುವುದೇ ತಿಳಿಯುತ್ತಿರಲಿಲ್ಲ. ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯ ಅಧಿನೇತ ಆಗಿ, ನಾಲ್ಕು ಗೋಡೆಯ ನಡುವೆ ಕೆಲಸ ಮಾಡುವುದಕ್ಕಿಂತಲೂ ಹೆಚ್ಚಿನ ಖುಷಿ ಮತ್ತು ಸಂತೋಷ, ಈ ಮೂಕ ಜೀವಿಗಳೊಂದಿಗೆ ಕಳೆಯುವುದರಲ್ಲಿ ಇದೆಯೆಂದು ಸ್ವತಃ ಅವರೇ ಒಪ್ಪಿಕೊಳ್ಳುತ್ತಿದ್ದರು.[೩೬] ಹಸು, ಕರುಗಳಿಗೆ ಮೇವು ನೀಡುವುದರಿಂದ ಹಿಡಿದು ಅವುಗಳ ಮೈ ತೊಳೆಯುವ, ಮದ್ದು ಹಾಕಿಸುವವರೆಗೂ ಖುದ್ದು ತಾವೇ ನಿಂತು ವಿಚಾರಿಸಿಕೊಂಡು ತಕ್ಕ ವ್ಯವಸ್ಥೆ ಮಾಡುತ್ತಿದ್ದರು. ನಂತರ ಭೇಟಿ ಮಾಡಲು ಬಂದವರೊಂದಿಗೆ ಮಾತುಕತೆ. ಬೆಳಗಿನ ೯ ಗಂಟೆಯ ವೇಳೆಗೆ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳು ಕಛೇರಿಯಲ್ಲಿ ಹಾಜರು. ಸಂಸ್ಥೆಯ ಆಡಳಿತಾತ್ಮಕ ಸಮಸ್ಯೆಗಳತ್ತ ಗಮನ ಹರಿಸುತ್ತಿದ್ದರು. ಹತ್ತಾರು ಶಿಕ್ಷಣ ಕೇಂದ್ರಗಳ ನೂರೆಂಟು ತರದ ಬಗೆಹರಿಯಲಾಗದ ಸಮಸ್ಯೆಗಳಲ್ಲಿ ತಲೆ ಹುದುಗಿಸಿಬಿಡುತ್ತಿದ್ದರು. ಈ ನಿರಂತರ ಸಮಸ್ಯೆಗಳ ನಡುವೆಯೂ ನಾಳೆಗಾಗಿ, ನಾಳಿನ ಒಳಿತಿಗಾಗಿ ಸಮಚಿತ್ತದಿಂದ ಕಾಯಬಲ್ಲ ಸ್ಥಿತಪ್ರಜ್ಞ ವ್ಯಕ್ತಿಯಾಗಿದ್ದರು.

ಇಡೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಹಣಕಾಸಿನ ಸಂಪೂರ್ಣ ಜವಾಬ್ದಾರಿ ಮತ್ತು ಅಧಿಕಾರ ಗಂಗಾಧರಯ್ಯ ಅವರದಾಗಿತ್ತು. ಹಣ ಎಲ್ಲೂ ಪೋಲಾಗದಂತೆ ಎಚ್ಚರ ವಹಿಸುತ್ತಿದ್ದರು. ಸ್ವಂತ ಕುಟುಂಬಕ್ಕೆ ಹತ್ತು ರೂಪಾಯಿ ವ್ಯಯಿಸಬೇಕಾಗಿ ಬಂದಾಗಲೂ ಅದು ಸಾರ್ವಜನಿಕ ಹಣವೆಂಬಂತಹ ಭಾವನೆ. ಹಣ ಮಾಡಲೆಂದೇ ಇಂದು ಶಿಕ್ಷಣ ಕೇಂದ್ರಗಳ ಹೆಸರಿನಲ್ಲಿ ಬಹಿರಂಗ ವ್ಯಾಪಾರ ನಡೆಯುತ್ತಿದೆ.

ಆದರೆ ಐದು ದಶಕಗಳ ಹಿಂದೆಯೇ ಗಂಗಾಧರಯ್ಯ ಅವರು ವಿದ್ಯಾರ್ಥಿನಿಲಯ ಮತ್ತು ಪ್ರೌಢಶಾಲೆ ಪ್ರಾರಂಭಿಸಿದಾಗಿನ ಪರಿಸ್ಥಿತಿ ಬೇರೆಯೇ ಆಗಿತ್ತು. ಗಂಗಾಧರಯ್ಯ ಅವರು ತಮ್ಮ ಮೊದಲ ವಿದ್ಯಾರ್ಥಿನಿಲಯವನ್ನು ಗುಡಿಸಲಿನಲ್ಲಿ ಪ್ರಾರಂಭಿಸಿದರು. ವಿದ್ಯಾರ್ಥಿನಿಲಯ ಪ್ರಾರಂಭಿಸಿದಾಗಲೂ ಉಚಿತ ಸೇವೆಯ ಮನೋಧರ್ಮವೊಂದೇ ಅವರಿಗಿದ್ದದ್ದು. ಐಷಾರಾಮಿ ಬದುಕಿಗೂ ಅವರಿಗೂ ಬಹಳ ದೂರ.

ಕಛೇರಿಯ ವ್ಯವಹಾರಗಳ ನಡುವೆಯೂ ಗಂಗಾಧರಯ್ಯ ಅವರು ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಳನ್ನು ಬೆಳಗ್ಗೆ ಒಮ್ಮೆ, ಸಂಜೆ ಒಮ್ಮೆ ಪರೀಕ್ಷಾರ್ಥವಾಗಿ ಸುತ್ತಿಬರುತ್ತಿದ್ದರು. ಅಲ್ಲಿನ ಕುಂದುಕೊರತೆಗಳನ್ನು ಖುದ್ದು ತಾವೇ ವಿಚಾರಿಸಿ ಪರಿಹರಿಸುವ ಪ್ರಯತ್ನ ನಡೆಸುತ್ತಿದ್ದರು. ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜಿನ ಕಟ್ಟಡ ಕಟ್ಟುವಾಗಲೂ ಕೂಡ ಅವರು ಖುದ್ದು ತಾವೇ ನಿಂತು ಕಟ್ಟಡ ನಿರ್ಮಾಣದ ಸಕಲ ಉಸ್ತುವಾರಿಗಳನ್ನು ವಹಿಸಿಕೊಂಡಿದ್ದರು. ಕಾರ್ಯತತ್ಪರರಾದರೆಂದರೆ ಅವರು ತಮ್ಮ ಸುತ್ತಲ ಜಗತ್ತನ್ನೇ ಮರೆತು ಬಿಡುತ್ತಿದ್ದರು. ಅವರ ಪರಿಚಯವಿರುವವರೊಬ್ಬರು ಹೇಳುವಂತೆ ಗಂಗಾಧರಯ್ಯ ಅವರು ಹಮ್ಮಿಂಗ್ ಪಕ್ಷಿ(ಝೇಂಕಾರ ಪಕ್ಷಿ)ಯಷ್ಟು ಸದಾ ಚಟುವಟಿಕೆಯ ಸ್ವಭಾವವುಳ್ಳವರು.[೩೭] ಎಂಬತ್ತರ ವಯೋಮಾನದಲ್ಲೂ ಆರೋಗ್ಯವಂತರಾಗಿ, ಸದೃಢರಾಗಿಯೂ ಇದ್ದ ಗಂಗಾಧರಯ್ಯ ಅವರ ಮನಸ್ಸಿಗೆ ಮುಪ್ಪೆಂಬುದೇ ಇರಲಿಲ್ಲ ಈ ಮಾತು ಇಂದಿನ ಪ್ರಜೆಗಳಿಗೆ ತಿಳಿಯಬೇಕಾಗಿದೆ.

ಸಿದ್ಧಾರ್ಥ ಶಿಕ್ಷಣ ಸಂಸ್ಥಾಪಕ ಕಾರ್ಯದರ್ಶಿಯಾಗಿ ಬೆಳಗಿನಿಂದ ಸಂಜೆಯವರೆಗೂ ಅವಿರತವಾಗಿ ದುಡಿಯುತ್ತಿದ್ದರು. ಅಲ್ಲಿನ ನಾಲ್ಕು ಗೋಡೆಗಳ ನಡುವಿನಿಂದ ಬಯಲಿಗೆ ಬರುತ್ತಲೇ ಕಳೆದುಕೊಂಡ ಸ್ವಾತಂತ್ರ್ಯ ಮರಳಿ ದೊರೆತಷ್ಟು ಅಮಿತ ಆನಂದ. ಗಂಗಾಧರಯ್ಯ ಅವರ ರಕ್ತದಲ್ಲಿನ ಕೃಷಿಕ ನೆನಪುಗಳು ಹೊಸ ಹುರುಪು ನೀಡುತ್ತಿದ್ದವು. ಒಂದು ರೀತಿಯಲ್ಲಿ ಸಂಜೆಯವರೆಗಿನ ಆಯಾಸ ಪರಿಹಾರವಾಗುವಂತಹ ಅನುಭವ. ಉಳುಮೆ, ಬಿತ್ತನೆ, ಕಳೆ ಕೀಳುವುದು, ಕೊಯಿಲು, ಹೀಗೆ ಕೆಲಸ ಏನೇ ಇರಲಿ ಅಚ್ಚುಕಟ್ಟಾಗಿ ಮಾಡಿಸುತ್ತಿದ್ದರು. ಕೃಷಿಕರಿಗೆ ಖುದ್ದು ಅವರೇ ನಿಂತು ನಿರ್ದೇಶಿಸುತ್ತಿದ್ದರು. ಹೀಗೆ ತಮ್ಮ ಕೃಷಿಕಾಸಕ್ತಿಯಿಂದ ಬೆಳೆದ ಫಸಲು ನೇರ ಅವರ ಕಣಜಕ್ಕೆ ಹೋದರೂ ಅದು ನಂತರ ವಿನಿಯೋಗವಾಗುವುದು ತಾವೇ ಪ್ರಾರಂಭಿಸಿರುವ ಅನುದಾನರಹಿತ ಉಚಿತ ವಿದ್ಯಾರ್ಥಿನಿಲಯಗಳಿಗೆ ಮತ್ತು ಇನ್ನಿತರ ವಿದ್ಯಾರ್ಥಿ ನಿಲಯಗಳಿಗೆ. ಒಂದು ಕಡೆ ವಿದ್ಯಾದಾನ. ಮತ್ತೊಂದು ಕಡೆಯಿಂದ ಅನ್ನದಾನ. ದಾನಗಳಲ್ಲೇ ಅತ್ಯಂತ ಶ್ರೇಷ್ಠವಾದ ಈ ಎರಡು ದಾನಗಳಿಂದ ಗಂಗಾಧರಯ್ಯ ಅವರು ಎರಡು ಮೂರು ಪೀಳಿಗೆಗಳ ಜನಾಂಗವನ್ನು ಎಂದೆಂದಿಗೂ ಋಣ ತೀರಿಸಲಾಗದಂತೆ ಶಾಶ್ವತ ಋಣಿಗಳನ್ನಾಗಿಸಿವೆ. ಆದರೆ ಗಂಗಾಧರಯ್ಯ ಅವರು ಎಂದೂ ಆ ಋಣದ ಬಗ್ಗೆ ಚಿಂತಿಸದೆ ಅದನ್ನು ತಮ್ಮ ಕರ್ತವ್ಯವೆಂದು ಬಗೆದು ನಿರ್ವಹಿಸಿದ್ದು

ಗಮನಾರ್ಹ.

ಕತ್ತಲಾದ ನಂತರ ಬಂದ ಪತ್ರಗಳಿಗೆಲ್ಲ ಸಾವಧಾನವಾಗಿ ಸ್ವತಃ ತಾವೇ ಉತ್ತರಿಸುತ್ತಿದ್ದರು. ಊಟದ ನಂತರ ಮತ್ತೆ ಅಧ್ಯಯನ. ಶ್ರಮಜೀವಿಯಾದ ಗಂಗಾಧರಯ್ಯ ಅವರು ಅಗತ್ಯಕ್ಕಿಂತ ಹೆಚ್ಚು ನಿದ್ದೆ ಮಾಡುವ ಪ್ರವೃತ್ತಿಯನ್ನು ಹೊಂದಿದವರಾಗಿರಲಿಲ್ಲ. ಅವರ ಮನಸ್ಸಿನಷ್ಟೇ ಭೌತಿಕ ಕಾಯವೂ ಆರೋಗ್ಯಕರವಾಗಿತ್ತು. ಮುದ್ದೆ ಅವರ ಪ್ರಧಾನ ಆಹಾರವಾಗಿತ್ತು. ಐದು ಕಾಲು ಅಡಿ ಎತ್ತರವಿದ್ದ ಅವರು ಶಾಂತಚಿತ್ತರಾದರೂ ಚೂಪುಗಣ್ಣುಳ್ಳವರಾಗಿದ್ದರು. ಎದುರಿಗಿರುವವರ ಮನಸ್ಸನ್ನೇ ಭೇದಿಸಬಲ್ಲ ಅವರು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡಬಲ್ಲವರಾಗಿದ್ದರು. ಅವರ ಅತ್ಯಂತ ಸರಳ ಉಡುಪು ಅವರ ಅಭಿರುಚಿಯಾಗಿರುವಂತೆಯೇ ಅಪ್ಪಟ ಗಾಂಧಿವಾದಿಯೂ ಆಗಿದ್ದರು. ಕಾಲಚಕ್ರ ಉರುಳಿದಂತೆ ಎಲ್ಲೆಡೆಯೂ ಏರುಪೇರುಗಳಾಗುವುದು ಸಹಜ. ಅದು ಸೃಷ್ಟಿಯ ನಿಯಮ. ಅದರಂತೆ ಅವರ ಆರೋಗ್ಯ ಕ್ಷೀಣಿಸಿತು. ಅವರನ್ನು ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಿ ವಿಶೇಷ ನಿಗಾ ಘಟಕದಲ್ಲಿಟ್ಟು ಚಿಕಿತ್ಸೆ ಕೊಡಿಸಲಾಯಿತು. ಆದರೆ ಚಿಕಿತ್ಸೆ ಯಶಸ್ವಿಯಾಗಲಿಲ್ಲ. ಅವರು ಡಿಸೆಂಬರ್ ೫, ೧೯೯೫ರಂದು ತಮ್ಮ ೮೦ನೇ ವಯಸ್ಸಿನಲ್ಲಿ ಮರಣ ಹೊಂದಿದರು. ಅವರ ಮರಣ ಸಹಸ್ರ ಸಂಖ್ಯೆಯ ಜನರಿಗೆ ಅಪಾರ ನೋವನ್ನು ಉಂಟುಮಾಡಿತು. ಅವರ ಅಂತ್ಯಕ್ರಿಯೆ ಅವರು ಮೊದಲು ಸಿದ್ಧಾರ್ಥ ಪ್ರೌಢಶಾಲೆಯನ್ನು ಪ್ರಾರಂಭಿಸಿದ ತುಮಕೂರು ನಗರದ ಸಮೀಪದ ಗೊಲ್ಲಹಳ್ಳಿಯಲ್ಲಿ ಜರುಗಿತು.

ಸಮಾಜಕ್ಕೆ ಗಂಗಾಧರಯ್ಯ ಅವರು ನೀಡಿದ್ದೇ ಹೆಚ್ಚು. ಪಡೆದದ್ದು ಬಹಳ ಕಡಿಮೆ. ಆದರೆ ಹಿಂದೆಂದಿಗಿಂತಲೂ ಇಂದು ಆ ಚೇತನದಿಂದ ನಾವು ಪಡೆದುಕೊಳ್ಳಬೇಕಾದದ್ದು ಹೆಚ್ಚಿದೆ. ಆ ತಾಳ್ಮೆ, ಛಲ, ಆತ್ಮವಿಶ್ವಾಸ, ವಿವೇಕ ಮತ್ತು ಹಿರಿತನಗಳು ಸಮಾಜಕ್ಕೆ ದೊರೆಯಲಿ.

ಕೊನೆಟಿಪ್ಪಣಿಗಳು

೧. ಕವಿತಾಕೃಷ್ಣ, ಸಾಧನೆಯ ಶಿಲ್ಪಿ, ೧೯೮೬, ಪು.೬

೨. ಮಾದೇವ್ ಭರಣಿ, ಶಿಕ್ಷಣ ಭೀಷ್ಮ, ೧೯೯೪, ಪು.೧೧

೩. ಅದೇ, ಪು.೧೧

೪. ಅದೇ, ಪು.೨೦

೫. ಕವಿತಾಕೃಷ್ಣ, ಸಾಧನೆಯ ಶಿಲ್ಪಿ, ೧೯೮೬, ಪು.೨೫

೬. ಅದೇ, ಪು.೨೮

೭. ಮಾದೇವ್ ಭರಣಿ, ಶಿಕ್ಷಣ ಭೀಷ್ಮ, ೧೯೯೪, ಪು.೨೭

೮. Tumkur-Government of Mysore- visitors notes written by Mahathma Gandhiji on his visit on 1927, Pp.15

೯. ಮಾದೇವ್ ಭರಣಿ, ಶಿಕ್ಷಣ ಭೀಷ್ಮ, ೧೯೯೪, ಪು.೩೧

೧೦. ಅದೇ, ಪು.೩೨

೧೧. ಸ್ವಾಮಿ ಕೆ.ಎಸ್., ಪಂಚಮರ ಆರ್.ಗೋಪಾಲಸ್ವಾಮಿ ಅಯ್ಯರ್ : ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್ ನಿಬಂಧ, ೨೦೦೮, ಪು.೪೮

೧೨. ಮಾದೇವ್ ಭರಣಿ, ಶಿಕ್ಷಣ ಭೀಷ್ಮ, ೧೯೯೪, ಪು.೩೩

೧೩. ಅದೇ, ಪು.೩೩

೧೪. ಅದೇ, ಪು.೩೪

೧೫. ಅದೇ, ಪು.೩೫

೧೬. ಅದೇ, ಪು.೨೦

೧೭. ಕವಿತಾಕೃಷ್ಣ, ಸಾಧನೆಯ ಶಿಲ್ಪಿ, ೧೯೮೬, ಪು.೩೭

೧೮. ಮಾದೇವ್ ಭರಣಿ, ಶಿಕ್ಷಣ ಭೀಷ್ಮ, ೧೯೯೪, ಪು.೩೬

೧೯. ಕವಿತಾಕೃಷ್ಣ, ಸಾಧನೆಯ ಶಿಲ್ಪಿ, ೧೯೮೬, ಪು.೪೩

೨೦. ಅದೇ, ಪು.೪೪

೨೧. ಅದೇ, ಪು.೪೪

೨೨. ಅದೇ, ಪು.೪೫

೨೩. ಅದೇ, ಪು.೪೮

೨೪. ಮಾದೇವ್ ಭರಣಿ, ಶಿಕ್ಷಣಭೀಷ್ಮ, ೧೯೯೪, ಪು.೫೦

೨೫. ಅದೇ, ಪು.೫೨

೨೬. ಕವಿತಾ ಕೃಷ್ಣ, ಸಾಧನೆಯ ಶಿಲ್ಪಿ, ೧೯೮೬, ಪು.೫೨

೨೭. ಅದೇ, ಪು.೫೩

೨೮. ಅದೇ, ಪು.೫೫

೨೯. ಮಾದೇವ್ ಭರಣಿ, ಶಿಕ್ಷಣ ಭೀಷ್ಮ, ೧೯೯೪, ಪು.೫೫

೩೦. ಅದೇ, ಪು.೫೫

೩೧. ಅದೇ, ಪು.೫೭

೩೨. ಅದೇ, ಪು.೫೯

೩೩. ಕವಿತಾ ಕೃಷ್ಣ, ಸಾಧನೆಯ ಶಿಲ್ಪಿ, ೧೯೮೬, ಪು.೬೦

೩೪. ಕವಿತಾಕೃಷ್ಣ, ಸಾಧನೆಯ ಶಿಲ್ಪಿ, ೧೯೮೫, ಪು.೪೦

೩೫. ಮಾದೇವ ಭರಣಿ, ಶಿಕ್ಷಣ ಭೀಷ್ಮ, ೧೯೯೪, ಪು.೭೫

೩೬. ಅದೇ, ಪು.೯೭

೩೭. ಅದೇ, ಪು.೯೮

ಅಧ್ಯಾಯ ಮೂರು

ಗಂಗಾಧರಯ್ಯ ಅವರ ಸಮಕಾಲೀನ ಸಂದರ್ಭ

೩.೧. ಸಮಕಾಲೀನ ಸಮಾಜ ಮತ್ತು ದಲಿತರು

೩.೨. ಸಮಕಾಲೀನ ರಾಜಪ್ರಭುತ್ವ ಮತ್ತು ದಲಿತರು

೩.೩. ಮೈಸೂರು ಅರಸರು ಮತ್ತು ದಲಿತ ಶಿಕ್ಷಣ

೩.೪. ಆರ್.ಗೋಪಾಲಸ್ವಾಮಿ ಅಯ್ಯರ್ ಹಾಗೂ ದಲಿತ ಶಿಕ್ಷಣ

೩

ಗಂಗಾಧರಯ್ಯ ಅವರ ಸಮಕಾಲೀನ ಸಂದರ್ಭ

ಪ್ರಾಚೀನ ಕಾಲದಿಂದಲೂ ದಲಿತರ ಸ್ಥಿತಿ ಶೋಚನೀಯವಾಗಿತ್ತು. ವಿದ್ಯೆ ಎಂಬುದು ಬ್ರಾಹ್ಮಣರಿಗೆ ಮಾತ್ರವೇ ಮೀಸಲಾಗಿತ್ತು. ಆದರೆ ದಲಿತರು ಶಿಕ್ಷಣವನ್ನು ಪಡೆಯುವಂತಿರಲಿಲ್ಲ. ಇಂಥ ಮಾನವ ವಿರೋಧಿ ವಿಧಿ-ನಿಷೇಧಗಳ ಮೂಲಕ, ಘೋರ ಶಿಕ್ಷೆಗಳ ಮೂಲಕ ಬಹುಸಂಖ್ಯಾತ ದಲಿತ ಸಮುದಾಯವನ್ನು ಶಿಕ್ಷಣ ಅಭ್ಯಾಸದಿಂದ ದೂರ ಇಟ್ಟಿದ್ದರ ಸಂಚು ಇಂದು ಯಾರಿಗಾದರೂ ತಿಳಿಯುವಂಥದ್ದೇ ಆಗಿದೆ. ಸ್ತ್ರೀಯರನ್ನು ಧಾರ್ಮಿಕ, ಶೈಕ್ಷಣಿಕ ಸವಲತ್ತುಗಳಿಂದ ದೂರ ಇಟ್ಟಿದ್ದು ಇದೇ ಹಿನ್ನೆಲೆಯಿಂದ ಎಂಬುದು ಗಮನಾರ್ಹ. ವಿಶ್ವಬ್ರಾತೃತ್ವ, ಸಮಾನತೆ, ವ್ಯಕ್ತಿ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಶ್ರಮಗೌರವ ಮೊದಲಾದ ಮೌಲ್ಯಗಳನ್ನು ಪೋಷಣೆ ಮಾಡಿಕೊಂಡು ಬಂದಿರುವ ಭಾರತೀಯ ಸಮಾಜದಲ್ಲಿ ಅಸಮಾನತೆ, ಗುಲಾಮಗಿರಿ, ಶೋಷಣೆ, ಹುಟ್ಟು ಆಧಾರಿತ ತಾರತಮ್ಯ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅಸ್ಪೃಶ್ಯತೆ ಒಂದಲ್ಲ ಒಂದು ರೀತಿಯಲ್ಲಿ ಅಸ್ತಿತ್ವದಲ್ಲಿದೆ. ಪ್ರಪಂಚಕ್ಕೆ ಮಾರ್ಗದರ್ಶಕ ವಾಗಿರುವಂತಹ ಸಾಂಸ್ಕೃತಿಕ ಮೌಲ್ಯಗಳನ್ನು ಹೊಂದಿರುವ ಹಿಂದೂ ಸಮಾಜದಲ್ಲಿಯೇ ಅಸ್ಪೃಶ್ಯತೆಯಂತಹ ಅನಿಷ್ಟ ಪದ್ಧತಿ ಶತಶತಮಾನಗಳಿಂದಲೂ ಅಂಟಿಕೊಂಡು ಬೆಳೆದುಬಂದಿದೆ. ಮನುಷ್ಯ ಜೀವಿಗಳಲ್ಲಿ ಮತ್ತು ನಿರ್ಜೀವ ವಸ್ತುಗಳಲ್ಲಿ ದೇವರನ್ನು ಕಾಣುವ ಹಂಬಲ ಮತ್ತು ತತ್ವಗಳನ್ನೊಳಗೊಂಡ ಹಿಂದೂ ಸಮಾಜ ತನ್ನ ಜೊತೆಯಿರುವ ಮನುಷ್ಯರಲ್ಲೇ ಕೆಲವರನ್ನು ಪ್ರತ್ಯೇಕತಾ ಭಾವನೆಯಿಂದ ನೋಡಿ ನಡೆಸಿಕೊಂಡಿತು ಮತ್ತು ನಡೆಸಿಕೊಳ್ಳುತ್ತಿದೆ ಎಂದರೆ ದುಃಖಕರ ಸಂಗತಿ.

ಗಂಗಾಧರಯ್ಯ ಅವರು ದಲಿತ ಕುಟುಂಬದಲ್ಲಿ ಹುಟ್ಟಿದವರಾಗಿದ್ದರಿಂದ, ಅವರೂ ಸಹ ತಮ್ಮ ಬದುಕಿನಲ್ಲಿ ಅಸ್ಪೃಶ್ಯತೆಯ ಅವಮಾನ, ಹಿಂಸೆ, ಕ್ರೌರ್ಯಗಳಿಗೆ ಒಳಗಾಗಲೇ ಬೇಕಾಯಿತು. ಹಾಗಾಗಿ ಗಂಗಾಧರಯ್ಯ ಅವರ ಸಮಕಾಲೀನ ಸಂದರ್ಭದಲ್ಲಿ ದಲಿತರ ಸ್ಥಿತಿಗತಿಗಳು ಹೇಗಿದ್ದವು? ದಲಿತರನ್ನು ಸ್ವಾವಲಂಬಿಗಳನ್ನಾಗಿ, ವಿದ್ಯಾವಂತರನ್ನಾಗಿ ಮಾಡುವುದರಲ್ಲಿ ಮೈಸೂರಿನ ರಾಜಕೀಯ ಹಾಗೂ ಸಾಮಾಜಿಕ ವಾತವರಣ ಹೇಗೆ ಸಹಕಾರಿಯಾಯಿತು? ಈ ಸಂದರ್ಭದಲ್ಲಿಯೇ ದಲಿತರ ಶೈಕ್ಷಣಿಕ ಅಭಿವೃದ್ಧಿಗಾಗಿ

ತಮ್ಮ ಜೀವನವನ್ನು ಮೀಸಲಾಗಿಟ್ಟಿದ್ದಂತಹ ಆರ್.ಗೋಪಾಲಸ್ವಾಮಿ ಅಯ್ಯರ್ ಅವರು ದಲಿತರನ್ನು ವಿದ್ಯಾವಂತರನ್ನಾಗಿ ಮಾಡಲು ಶ್ರಮಿಸಿದ್ದು ಹೇಗೆ ಎಂಬುದನ್ನು ತಿಳಿಯುವುದು ಈ ಅಧ್ಯಾಯದ ಉದ್ದೇಶವಾಗಿದೆ.

೩.೧. ಸಮಕಾಲೀನ ಸಮಾಜ ಮತ್ತು ದಲಿತರು

ಭಾರತೀಯ ಹಿಂದೂ ಸಮಾಜದಲ್ಲಿ ಬಹಳ ವರ್ಷಗಳಿಂದಲೂ ಕೆಲವು ವರ್ಗದವರು ಹಿಂದುಳಿದಿದ್ದಾರೆ. ಸಮಾಜದ ಅಸಮಾನತೆ, ತಾರತಮ್ಯಗಳು ಪ್ರಾಚೀನ ಕಾಲದಿಂದಲೂ ನಡೆದು ಕೊಂಡುಬಂದಿವೆ. ಪ್ರಬಲರು ದುರ್ಬಲರ ಮೇಲೆ ಹಿಡಿತ ಸಾಧಿಸಿ ಅವರ ಮೇಲೆ ದಬ್ಬಾಳಿಕೆ ನಡೆಸುತ್ತಲೇ ಬಂದಿದ್ದಾರೆ. ಹಾಗಾಗಿ ತುಳಿತಕ್ಕೆ ಶೋಷಣೆಗೆ ಒಳಗಾದ ಜನ ತಾವು ಮೇಲ್ವರ್ಗದವರ ಸೇವೆಗಾಗಿಯೇ ಹುಟ್ಟಿದ್ದೇವೆ ಎನ್ನುವ ಪರಿಸ್ಥಿತಿ ಉಂಟಾಯಿತು. ಪ್ರಬಲರದ್ದೇ ಒಂದು ಜಾತಿಯಾದರೆ, ದಲಿತರು, ದುರ್ಬಲರು, ಅಸ್ಪೃಶ್ಯರು ಮೊದಲಾದವರು ಸಮಾಜ ಜೀವನದಿಂದಲೇ ದೂರ ಉಳಿಯುವಂತಾಯಿತು.

ಕರ್ನಾಟಕದಲ್ಲಿ ದಲಿತ ಎಂಬ ಪದದ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ಯಾವ ಬಗೆಯ ಸಾರ್ವಜನಿಕ ಸೌಲಭ್ಯಗಳಿಲ್ಲದೆ ಹಲವಾರು ಕಟ್ಟುಪಾಡುಗಳಿಗೆ ಒಳಗಾಗಿ, ಊರ ಹೊರಗೆ ದೂಡಲ್ಪಟ್ಟು, ಅಸ್ಪೃಶ್ಯರೆಂಬ ನಿಂದನೆಗೆ ಒಳಗಾದವರನ್ನು ದಲಿತರೆಂದು ಗುರುತಿಸಲಾಗಿದೆ.[೧] ದಲಿತರು ಸವರ್ಣೀಯರು ಹೊಂದಿರುವಂತಹ ಯಾವುದೇ ಸಾಮಾಜಿಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಉದಾಹರಣೆಗೆ ದೇವಾಲಯದ ಪ್ರವೇಶದ ವಿಚಾರದಲ್ಲಾಗಲಿ, ಕುಡಿಯುವ ನೀರಿನ ವಿಷಯದಲ್ಲಾಗಲಿ, ಅವರಿಗೆ ಯಾವುದೇ ರೀತಿಯ ಸ್ವಾತಂತ್ರ್ಯವಿರುವುದಿಲ್ಲ. ಭದ್ರಬೇರುಗಳಿಂದ ತಳ ಊರಿದ ವರ್ಣವ್ಯವಸ್ಥೆ ದಲಿತರಿಗೆ ಸಹಿಸಲಾರದ ಹಿಂಸೆಯಾಗಿದೆ. ಭಾರತಕ್ಕೆ ಬ್ರಿಟಿಷರು ಬಂದಾಗ, ಬ್ರಿಟಿಷರ ದಬ್ಬಾಳಿಕೆ ಇದ್ದರೂ ಅವರ ಬದುಕಿನಲ್ಲಿ ಒಂದು ಹೊಸ ಬೆಳಕು ಮೂಡುವಂತಾಯಿತು. ಬ್ರಿಟಿಷರು ಜಾರಿಗೆ ತಂದ ಹೊಸ ಶಿಕ್ಷಣ ವ್ಯವಸ್ಥೆಯಿಂದಾಗಿ ಮೂಕರಾದವರು ಮಾತನಾಡಿದರು. ಬರಹ ಗೊತ್ತಿಲ್ಲದವರು ಬರವಣಿಗೆ ಮಾಡಿದರು. ಹೀಗಾಗಿ ದಲಿತರು ತಮ್ಮ ಮೇಲಾಗುತ್ತಿರುವ ಶೋಷಣೆಯ ವಿರುದ್ಧ ಹೋರಾಡಲು ಪ್ರಾರಂಭಿಸಿದರು.

ಮಾನವನ ಹುಟ್ಟು ಆಕಸ್ಮಿಕ ಎಂಬ ಮಾತೊಂದಿದೆ. ಹುಟ್ಟಿನಿಂದ ಒಬ್ಬ ಮಾನವ ಮೇಲು, ಮತ್ತೊಬ್ಬ ಕೀಳು ಎಂಬುದು ಅಮಾನವೀಯವಾದ ನಿಯಮ. ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಹುಟ್ಟಿನ ಆಧಾರದಿಂದ ವಿಭಜನೆಯಾಗಿ ಸಮಾಜದ ಪ್ರಗತಿಗೆ ಮಾರಕವಾಗಬಹುದಾದುದನ್ನು ಅರಿಯಬಹುದಾಗಿದೆ.[೨] ಹುಟ್ಟಿನ ಆಧಾರದಿಂದಲೇ ಇವನು ದಲಿತ, ಇವನು ಸವರ್ಣೀಯ ಎಂದು ನಿರ್ಧರಿಸುವುದು ಎಷ್ಟರಮಟ್ಟಿಗೆ ಸರಿ? ಬ್ರಾಹ್ಮಣರಲ್ಲೂ ಅಸ್ಪೃಶ್ಯರಿದ್ದಾರೆ. ಅಸ್ಪೃಶ್ಯರಲ್ಲೂ ಬ್ರಾಹ್ಮಣರಿದ್ದಾರೆಂಬ ಅಂಶ ಗಮನಾರ್ಹ.

ಅಸ್ಪೃಶ್ಯರು ಊರಿಂದ ಹೊರಗೇಕೆ ವಾಸಿಸಬೇಕು? ಅವರು ಸವರ್ಣೀಯರೊಂದಿಗೆ ಬದುಕಲು ಸಾಧ್ಯವಿಲ್ಲವೆ? ಅಸ್ಪೃಶ್ಯತೆ ಅಥವಾ ಮೈಲಿಗೆಯ ವಿಚಾರದಲ್ಲಿ ಹಿಂದೂಗಳಿಗೂ ಇತರ ನಾಗರಿಕ ಅಥವಾ ಹಿಂದಿನ ಜನತೆಗೂ ಯಾವೊಂದು ಅಂತರ ಕಂಡುಬರುವುದಿಲ್ಲ. ಹಿಂದೂಗಳು ಮೈಲಿಗೆಯನ್ನು ಪರಿಗಣಿಸಿದ್ದರೆಂಬುದನ್ನು ಮನುಸ್ಮೃತಿಯಿಂದ ತಿಳಿಯಬಹುದಾಗಿದೆ. ದೈಹಿಕ ಮೈಲಿಗೆಯನ್ನೂ ಮನು ಸಾರಿದ್ದಾನೆ.[೩] ಜನನ, ಮರಣ ಮತ್ತು ಋತುಸ್ರಾವಗಳು ಅಶುಚಿಯ ಸಾಧನಗಳೆಂದು ಮನು ಸಾರಿದ್ದಾನೆ ಎನ್ನಬಹುದಾಗಿದೆ. ಆದರೆ ಸ್ಪೃಶ್ಯ ಮತ್ತು ಅಸ್ಪೃಶ್ಯ ಎಂದು ಹುಟ್ಟಿನ ಆಧಾರದಿಂದಲೇ ನಿರ್ಧರಿಸುವುದು ವಿಷಾದನೀಯ ಸಂಗತಿಯಾಗಿದೆ.

ದಿನನಿತ್ಯ ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶದಲ್ಲಿ ದಲಿತರ ಮೇಲೆ ದೌರ್ಜನ್ಯ ಹಾಗೂ ಅವರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಉಲ್ಲಂಘಿಸುವ ಕೆಲಸ ನಡೆಯುತ್ತಿದೆ. ಉದಾಹರಣೆಗೆ ಇಂದಿಗೂ ಈ ಜನ ದೇವಾಲಯಗಳಿಗೆ ಪ್ರವೇಶ ಮಾಡುವಂತಿಲ್ಲ. ಮಧ್ಯಾಹ್ನ ಬಿಸಿಯೂಟದ ವೇಳೆ ದಲಿತ ಮಹಿಳೆಯರು ಅಡುಗೆ ಮಾಡಿದರೆ ಸವರ್ಣೀಯ ಮಕ್ಕಳು ಊಟ ತಿನ್ನುವುದಿಲ್ಲ. ಗ್ರಾಮೀಣ ಪ್ರದೇಶದ ಮಾಲೀಕತ್ವದ ಹೋಟೆಲ್‌ಗಳಲ್ಲಿ ದಲಿತರಿಗೆ ಪ್ರವೇಶ ನಿಷೇಧ.[೪] ಇಂದಿಗೂ ಈ ಅನಿಷ್ಟ ಆಚರಣೆಗಳು ಅಸ್ತಿತ್ವದಲ್ಲಿವೆ ಎಂದರೆ ಅರವತ್ತು ವರ್ಷಗಳ ಹಿಂದೆ ದಲಿತರ ಸ್ಥಿತಿ ಬಹಳ ಶೋಚನೀಯವಾಗಿತ್ತು. ದೇವಾಲಯಗಳಿಗೆ ಆಗಿರಬಹುದು, ಸವರ್ಣೀಯರ ಮನೆಗಳಿಗೆ ಆಗಿರಬಹುದು ದಲಿತರು ಪ್ರವೇಶಿಸುವಂತಿಲ್ಲ. ಹೊಸಿಲಿನಿಂದ ಹೊರಗೆ ಇರಬೇಕಾದ ಶೋಚನೀಯ ಸ್ಥಿತಿ ಇದೆ. ಇಂದಿಗೂ ಕೆಲವೊಂದು ಸವರ್ಣೀಯರ ಕೇರಿಗಳಿಗೆ ದಲಿತರು ಪ್ರವೇಶಿಸುವಂತಿಲ್ಲ. ದಲಿತರು ಸವರ್ಣೀಯರ ವಸ್ತುಗಳನ್ನು ಮುಟ್ಟುವಂತಿಲ್ಲವೆಂದರೆ ಅವರೊಂದಿಗೆ ದಲಿತರು ಸಹಭೋಜನ ಮಾಡುವುದು ದೂರದ ಮಾತಾಗಿದೆ. ಊರಹಬ್ಬ, ಜಾತ್ರೆ, ಉತ್ಸವಗಳಲ್ಲಾಗಿರಬಹುದು ದಲಿತರಿಗೆ ಬೇರೆ, ಸವರ್ಣೀಯರಿಗೆ ಬೇರೆ ಪೂಜೆ ನಡೆಯುತ್ತದೆ. ದಲಿತರೇನಾದರೂ ತಮ್ಮ ಹಕ್ಕನ್ನು ಚಲಾಯಿಸಿದರೆ ಊರ ಹಬ್ಬವೇ ನಿಂತು ಹೋಗುತ್ತದೆ. ಇಂತಹ ನೂರಾರು ಸಾಕ್ಷಿಗಳು ನಮ್ಮ ಕಣ್ಮುಂದಿವೆ.

ಮಂಡ್ಯ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ದಾಸನಪುರದಲ್ಲಿ ಗಣಪತಿ ವಿಗ್ರಹ ನಿರ್ಮಿಸಿದ ಕಾರಣಕ್ಕಾಗಿ ಅಸ್ಪೃಶ್ಯಕೋಮಿಗೆ ಸೇರಿದ ಶಿಲ್ಪಿಯೊಬ್ಬನ ಮೇಲೆ ಸವರ್ಣೀಯರು ಹಲ್ಲೆ ನಡೆಸಿದ ಪ್ರಕರಣ ವರದಿಯಾಗಿದೆ. ಈ ಕಲಾವಿದನಿಗೆ ಪ್ರಾಣಾಪಾಯದ ಬೆದರಿಕೆ ಹಾಕಿ ಊರು ಬಿಟ್ಟು ಹೋಗಲು ಎಚ್ಚರಿಕೆ ನೀಡಿರುವ ಸವರ್ಣೀಯರು, ಎಚ್ಚರಿಕೆಯನ್ನು ಅವನು ಪಾಲಿಸದಿದ್ದ ಸಂದರ್ಭದಲ್ಲಿ ಕಾಲೇಜು ವಿದ್ಯಾರ್ಥಿನಿಯಾದ ಆತನ ಮಗಳ ಮೇಲೆ ಅತ್ಯಾಚಾರ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ.[೫] ಈ ಘಟನೆಯ ವಸ್ತು ಸ್ವಲ್ಪಭಿನ್ನವಾಗಿದೆಯೆಂದು ಹೇಳಬಹುದು. ಆದರೆ ಅದರ ಮೂಲ ಉದ್ದೇಶ ಮಾತ್ರ ಒಂದೇ ಆಗಿದೆ. ಅದೆಂದರೆ ಸ್ವಸಾಮರ್ಥ್ಯದಿಂದ ಬದುಕಲೆತ್ನಿಸುವ ಅಥವಾ ಸ್ವಾಭಿಮಾನದಿಂದ

ವರ್ತಿಸಲೆತ್ನಿಸುವ ಅಸ್ಪೃಶ್ಯರನ್ನು ಹಿಂದೂಗಳು ಕೊಂದು ಹಾಕುತ್ತಾರೆ. ಇಲ್ಲವೇ ಅತ್ಯಾಚಾರವೆಸಗುತ್ತಾರೆ ಎಂಬುದಕ್ಕೆ ಕೇಂದ್ರ ಸರ್ಕಾರ ನೇಮಿಸಿರುವ ಎಸ್.ಸಿ-ಎಸ್.ಟಿ. ಕಮೀಷನರ್ ಪ್ರಕಟಿಸಿರುವ ಕಳೆದ ಇಪ್ಪತ್ತೇಳು ವರ್ಷಗಳ ವರದಿಗಳಲ್ಲಿ ಉಲ್ಲೇಖಾರ್ಹವಾಗಿವೆ.

ಭಾರತಕ್ಕೆ ಇರುವುದು ಎರಡು ಸಂವಿಧಾನಗಳು. ಒಂದು ಪ್ರಜಾಪ್ರಭುತ್ವದ ಲಿಖಿತ ಸಂವಿಧಾನ. ಮತ್ತೊಂದು ಭಾರತೀಯ ಸಾಮಾಜಿಕ ರಚನೆಯ ಅಲಿಖಿತ ಸಂವಿಧಾನ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಚಾಲ್ತಿಯಲ್ಲಿರುವುದು ಲಿಖಿತ ಸಂವಿಧಾನ.[೧] ಆದರೆ ಅಲಿಖಿತ ಸಂವಿಧಾನವು ಯಾವಾಗ, ಎಲ್ಲಿ ಬೇಕಾದರೂ ತನ್ನ ಕ್ರೂರ ರೂಪವನ್ನು ಪ್ರದರ್ಶಿಸುತ್ತದೆ. ಅಲಿಖಿತ ಸಂವಿಧಾನದ ಮುಂದೆ ಲಿಖಿತ ಸಂವಿಧಾನ ನಿಜವಾಗಿಯೂ ಸಂಪೂರ್ಣವಾಗಿ ಸೋತಿದೆ ಎಂದು ಹೇಳಬಹುದು. ಇದಕ್ಕೆ ಉತ್ತಮ ನಿದರ್ಶನವೆಂದರೆ "ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಸಾಲಹಳ್ಳಿ ಗ್ರಾಮದಲ್ಲಿ ಶ್ರೀಮತಿ ಲಕ್ಷ್ಮವ್ವ ರಾಮಚಂದ್ರ ಬೂದನೂರು ಎಂಬ ಇಪ್ಪತ್ತೆರಡು ವರ್ಷ ವಯಸ್ಸಿನ ಅಸ್ಪೃಶ್ಯ ಕೋಮಿಗೆ ಸೇರಿದ ಮಹಿಳೆಯ ಮೇಲೆ ಸವರ್ಣೀಯ ವ್ಯಕ್ತಿಯೊಬ್ಬ ಅತ್ಯಾಚಾರವೆಸಗಿದ್ದು, ಇದನ್ನು ಪ್ರತಿಭಟಿಸಿದ ಆಕೆಯ ಗಂಡ ರಾಮಚಂದ್ರನನ್ನು ಬಂಧಿಸಿಡಲಾಯಿತು."[೨] ಈ ಘಟನೆ ನಡೆದಾಗ ಸಾಲಹಳ್ಳಿಯಲ್ಲೇ ಇದ್ದ ಪೊಲೀಸರು ವಿಷಯ ತಿಳಿದು ನಿಧಾನವಾಗಿ ಸ್ಥಳಕ್ಕೆ ಆಗಮಿಸಿದರು. ಅಲ್ಲಿನ ಪಿ.ಎಸ್.ಐ. ಆಗಿದ್ದ ತಡಕೋಡ ಎಂಬುವವರು ಅಲ್ಲಿ ಸೇರಿದ್ದ ಸವರ್ಣೀಯ ಗುಂಪನ್ನು ಚದುರಿಸುವುದನ್ನು ಬಿಟ್ಟು ರಾಮಚಂದ್ರನನ್ನು ಬಂಧಿಸಿದರು.

ಅಸ್ಪೃಶ್ಯರು ಸಾರ್ವಜನಿಕ ಬಾವಿಗಳಿಂದ ನೀರನ್ನು ಪಡೆಯುವಂತಿಲ್ಲ. ಮೇಲುಜಾತಿಯ ಹಿಂದೂಗಳ ಮಕ್ಕಳು ಹೋಗುವ ಶಾಲೆಗೆ ಅಸ್ಪೃಶ್ಯರ ಮಕ್ಕಳನ್ನು ಸೇರಿಸುವಂತಿಲ್ಲ, ಹಿಂದೂಗಳ ದೇವತೆಗಳನ್ನೇ ಪೂಜಿಸಿ ಅವರ ಹಬ್ಬ ಹರಿದಿನಗಳನ್ನೇ ಆಚರಿಸಿದರೂ ಅಸ್ಪೃಶ್ಯರಿಗೆ ಗುಡಿ ಪ್ರವೇಶವಿಲ್ಲ. ಹಜಾಮರು, ಅಗಸರು ಕೂಡ ತಮ್ಮ ಸೇವೆಗಳಿಂದ ಅಸ್ಪೃಶ್ಯರನ್ನು ದೂರವಿಡುತ್ತಾರೆ. ಇರುವೆಗಳಿಗೆ ಸಕ್ಕರೆ ಸುರಿಯುವ ಮತ್ತು ನಾಯಿಗಳನ್ನು ಮುದ್ದಾಡುವ ಮೇಲ್ ಜಾತಿಯ ಹಿಂದೂ ಜನಾಂಗ ಅಸ್ಪೃಶ್ಯರಿಗೆ ಕುಡಿಯುವ ನೀರು ಕೊಡುವುದು, ಅವರಿಗೆ ಕನಿಕರ ತೋರುವುದೂ ಪಾಪಕೃತ್ಯವೆಂದು ಬಗೆಯುತ್ತಾರೆ. ಜಾತೀಯ ಹಿಂದೂಗಳು ಅಸ್ಪೃಶ್ಯರನ್ನು ಉಪಮಾನವರನ್ನಾಗಿಯೂ, ಪ್ರಾಣಿಗಳಿಗಿಂತಲೂ ಕನಿಷ್ಟವಾಗಿಯೂ ನಡೆಸಿಕೊಳ್ಳುತ್ತಾರೆ. ಮೊದಲು ದಲಿತರಿಗೆಂದೇ ಪ್ರತ್ಯೇಕ ಶಾಲೆಗಳಿದ್ದವು. ದಲಿತರ ಶಾಲೆಗಳನ್ನು ಜನರಲ್ ಶಾಲೆಗಳಿಗೆ ಸೇರಿಸಿದಾಗ ಅನೇಕ ಪ್ರತಿಭಟನೆಗಳು ಸವರ್ಣೀಯರಿಂದ ಎದುರಾದವು. ಇದನ್ನು ಮೀರಿ ಯಾರಾದರೂ ಅಂತಹ ಸಾಹಸಕ್ಕೆ ಕೈಹಾಕಿದರೆ, ಅವರಿಗೆ ಸಾಮಾಜಿಕ ಬಹಿಷ್ಕಾರ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು.

ದಲಿತರ ಬದುಕು ಗ್ರಾಮೀಣ ಪ್ರದೇಶದಲ್ಲಿ ಕಠಿಣವಾಗಿತ್ತು. ಕೆರೆ, ಬಾವಿ, ಬೋರ್‌ವೆಲ್‌ಗಳಿಂದ ನೀರನ್ನು ಪಡೆಯುವಾಗ ಎದುರಿಸುವ ಸಮಸ್ಯೆಗಳು ಸಾಕಷ್ಟು ಇತ್ತು. ನಗರಪಟ್ಟಣಗಳಲ್ಲಿ ಇಂಥ ಸಮಸ್ಯೆಗಳು ವಿರಳ ಎನ್ನಬಹುದು. ರಾಜಕೀಯದಲ್ಲಿ ದಲಿತರಿಗೆ ಪ್ರತ್ಯೇಕ ಮೀಸಲಾತಿಗಾಗಿ ಹೋರಾಟ ನಡೆಯಿತು. ಇದನ್ನರಿತ ಕಾಂಗ್ರೆಸ್, ಪೂನಾ ಒಪ್ಪಂದದ ಮೂಲಕ ಗಾಂಧಿ ಮತ್ತು ಅಂಬೇಡ್ಕರ್ ಅವರ ತೀರ್ಮಾನದಂತೆ ಸೌಲಭ್ಯ ನೀಡಲು ಮುಂದಾದರು.[೮] ದಲಿತರು ಗ್ರಾಮೀಣ ಪ್ರದೇಶಗಳಲ್ಲಿ ಒಂದು ರೀತಿಯ ಸಮಸ್ಯೆಗಳನ್ನು ಎದುರಿಸಿದರೆ, ನಗರ ಪಟ್ಟಣಗಳಲ್ಲಿ ವಿಭಿನ್ನ ರೀತಿಯಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ದಲಿತ ಎಂದು ಗೊತ್ತಾದರೆ ನಗರಗಳಲ್ಲಿ ಯಾರೂ ಮನೆಯನ್ನು ಬಾಡಿಗೆಗೆ ಕೊಡುವುದೇ ಇಲ್ಲ. ಪ್ರಾಣ ಹೋದರೂ ಸರಿಯೆ, ದಲಿತರಿಗೆ ಮಾತ್ರ ಮನೆಯನ್ನು ಕೊಡುವುದಿಲ್ಲವೆಂಬುದು ಸವರ್ಣೀಯರ ನಿಲುವಾಗಿದೆ. ಕೆಲವು ಸಂದರ್ಭಗಳಲ್ಲಿ ವಿಧಿಯಿಲ್ಲದೆ ದಲಿತರು ಬೇರೊಂದು ಜಾತಿಯ ಹೆಸರನ್ನು ಹೇಳಿಕೊಂಡು ಬದುಕುವ ದುರಂತದ ಸ್ಥಿತಿ ನಿರ್ಮಾಣವಾಗುತ್ತದೆ.

೧೯೭೩ರಲ್ಲಿ ಬಸವಲಿಂಗಪ್ಪ ಅವರ ''ಬೂಸಾ ಪ್ರಕರಣ'' ದಲಿತ ಸಂಘಟನೆಗೆ ಪ್ರೇರಣೆ ನೀಡಿತು. ಸಚಿವರಾಗಿದ್ದ ಬಸವಲಿಂಗಪ್ಪ ಅವರು ಮಲ ಹೊರುವ ಪದ್ಧತಿಯನ್ನು ನಿಷೇಧಿಸಿ ಹೊರಡಿಸಿದ ಕಾನೂನು ಸಂಪ್ರದಾಯಬದ್ಧ ಜನರ ಸಿಟ್ಟನ್ನು ಕೆರಳಿಸಿತು. ಇವೆಲ್ಲವುಗಳ ಪರಿಣಾಮವಾಗಿ ಕರ್ನಾಟಕದಲ್ಲಿ ಬೃಹತ್ ದಲಿತ ಸಂಘಟನೆ ಅಸ್ತಿತ್ವಕ್ಕೆ ಬಂದಿತು. ಇಂತಹ ದಲಿತ ಸಂಘಟನೆಗಳು ಅಸ್ತಿತ್ವಕ್ಕೆ ಬಂದಿರುವುದರಿಂದ ಲಾದರೂ ದಲಿತರ ಸಮಸ್ಯೆಗಳು ಸ್ವಲ್ಪಮಟ್ಟಿಗೆ ಬಗೆಹರಿದರೂ ಸಹ ಮಲ ಹೊರುವ ಪದ್ಧತಿಯನ್ನು ಕರ್ನಾಟಕದಲ್ಲಿ ಇಂದಿಗೂ ಕಾಣಬಹುದಾಗಿದೆ. ಉದಾಹರಣೆಗೆ ಹಾವೇರಿ ಜಿಲ್ಲೆಯಲ್ಲಿ ಮಲ ಹೊರುವ ಪದ್ಧತಿ ಇಂದಿಗೂ ಇದೆಯೆಂದು ೨೦೧೧ರ ಪ್ರಜಾವಾಣಿಯ ಮೊದಲನೆಯ ಪುಟದಲ್ಲಿ ಗೋಚರವಾದದ್ದು ಬಹಳ ವಿಷಾದನೀಯ ಸಂಗತಿಯಾಗಿದೆ.

ಜಗತ್ತಿನಲ್ಲಿಯೇ ಶ್ರೇಷ್ಠವೆಂದು ಹೇಳಿಕೊಳ್ಳುವ ನಮ್ಮ ಸಂಸ್ಕೃತಿಯು ಪ್ರತಿಯೊಂದು ಗ್ರಾಮದಲ್ಲೂ ಜಾತಿಗಳ ಆಧಾರದಲ್ಲಿ ಪ್ರತ್ಯೇಕಿಸಿದೆ. ೧೭-೦೫-೧೯೭೦ರಲ್ಲಿ ಬಿಜಾಪುರ ಜಿಲ್ಲೆಯ ಕಟಗೇರಿ ಗ್ರಾಮದ ದಲಿತರಿಗೆ ತೀವ್ರ ನೀರಿನ ತೊಂದರೆ ಉಂಟಾಗಿದ್ದರಿಂದ ಸವರ್ಣೀಯರ ಬಾವಿಯಲ್ಲಿ ನೀರು ತುಂಬಿಕೊಂಡರು. ಇದು ಮಹಾ ಅಪರಾಧ ಎಂದು ತೀರ್ಮಾನಿಸಿದ ಮೇಲ್ಜಾತಿ ಅವರು ಅಲ್ಲಿನ ದಲಿತರಿಗೆ ಸಾಮಾಜಿಕ ಬಹಿಷ್ಕಾರ ಶಿಕ್ಷೆ ವಿಧಿಸಿದರು.[೯] ೧೯೭೩ರಲ್ಲಿ ಮುದ್ದೇಬಿಹಾಳ ತಾಲ್ಲೂಕಿನ ಗರಸಂಗಿ ಗ್ರಾಮದಲ್ಲಿ ಸುಮಾರು ೬೦೦ ಜನಸಂಖ್ಯೆ ಇರುವ ದಲಿತ ಕುಟುಂಬಗಳಿದ್ದು ಅನೇಕ ವರ್ಷಗಳಿಂದಲೂ ಇಲ್ಲಿ ಅಸ್ಪೃಶ್ಯತೆ ಆಚರಣೆಯಲ್ಲಿದೆ. ಇದನ್ನು ಅನುಭವಿಸಿ ಸಹಿಸದ ಕೆಲ ವಿದ್ಯಾವಂತ ದಲಿತ ಯುವಕರು ದೇವಾಲಯ ಪ್ರವೇಶ ಮತ್ತು ಬಾವಿಗಳನ್ನು ಮುಟ್ಟಲು ಮುಂದಾದಾಗ ಸವರ್ಣೀಯರು ಸಾಮಾಜಿಕ ಬಹಿಷ್ಕಾರ ಹಾಕಿದರು.[೧೦] ದಲಿತರು ತಮಗಾದ ಅನ್ಯಾಯವನ್ನು ಪ್ರತಿಭಟಿಸಿದರೆ ಸವರ್ಣೀಯರು ಅವರಿಗೆ

ಸಾಮಾಜಿಕ ಬಹಿಷ್ಕಾರದ ಶಿಕ್ಷೆಯನ್ನು ವಿಧಿಸುತ್ತಾರೆ. ನಮ್ಮ ದೇಶದಲ್ಲಿ ಅಸ್ತಿತ್ವದಲ್ಲಿರುವುದು ಪ್ರಜಾಪ್ರಭುತ್ವ ಸರ್ಕಾರವಾದರೂ ಇಂತಹ ದೌರ್ಜನ್ಯಗಳನ್ನು ಎದುರಿಸುತ್ತಿರುವುದು ಶೋಚನೀಯವೆಂದೇ ಹೇಳಬಹುದಾಗಿದೆ. ದಲಿತರ ಮೇಲಾಗುತ್ತಿರುವ ಅತ್ಯಾಚಾರ, ಹಿಂಸೆ, ದಬ್ಬಾಳಿಕೆಯನ್ನು ತಡೆಗಟ್ಟುವುದಕ್ಕಾಗಿ ನಾಗರಿಕ ಹಕ್ಕು ಪಾಲನೆ ಶಾಸನ, ೧೯೮೯ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಾಯ್ದೆಗಳನ್ನು ಜಾರಿಗೊಳಿಸಿದ್ದರೂ ಇವುಗಳ ವ್ಯಾಪ್ತಿ ವಿಶಾಲವಾಗಿದ್ದರೂ ಸಹ ಇವು ತಲುಪುವುದು ಮಾತ್ರ ಅಲ್ಪ ಪ್ರಮಾಣದ್ದಾಗಿದೆ.[೧೧]

೧೯೮೯ರ ಪರಿಶಿಷ್ಟಜಾತಿ, ಪರಿಶಿಷ್ಟಪಂಗಡ ಕಾಯ್ದೆಯು ದಲಿತರ ಮೇಲಾಗುವ ದೌರ್ಜನ್ಯಗಳನ್ನು ತಡೆಗಟ್ಟುವುದಕ್ಕಾಗಿ ಕೆಲವೊಂದು ಕ್ರಮಗಳನ್ನು ಕೈಗೊಂಡಿತು. ಅವುಗಳೆಂದರೆ

* ಮಾನವ ತಿನ್ನಬಾರದ್ದನ್ನು ತಿನ್ನುವಂತೆ ಒತ್ತಾಯಿಸುವುದು
* ಹಿಂದುಳಿದವರ ಮನೆಯ ಅಂಗಳದಲ್ಲಿ ಮಲ ಎಸೆಯುವುದು
* ಹಿಂದುಳಿದವರ ಬಟ್ಟೆ ಕಳಚಿ ಬೆತ್ತಲೆ ಇಲ್ಲವೇ ಅರೆಬೆತ್ತಲೆ ಮಾಡಿ ಅವರನ್ನು ಸಾರ್ವಜನಿಕರ ಮುಂದೆ ಓಡಾಡುವಂತೆ ಮಾಡುವುದು, ಅವರ ಮುಖ ಇಲ್ಲವೆ ದೇಹಕ್ಕೂ ಬಣ್ಣ ಹಚ್ಚುವುದು.
* ದಲಿತ ಮಹಿಳೆಯರಿಗೆ ಲೈಂಗಿಕವಾಗಿ ಕಿರುಕುಳ ಕೊಡುವುದು.
* ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡದವರು ತಮ್ಮ ಮನೆ, ಊರು ಬಿಡುವಂತೆ ಒತ್ತಾಯಿಸುವುದು.
* ಹಿಂದುಳಿದವರು ತಮ್ಮ ಸಾಂಸ್ಕೃತಿಕ ಹಬ್ಬ ಹರಿದಿನ ಆಚರಿಸಲು ಅಡ್ಡಿಪಡಿಸುವುದು.[೧೨]

ಇಂತಹ ಕೃತ್ಯಗಳನ್ನು ಎಸಗುವಂತಹ ತಪ್ಪಿತಸ್ಥರ ವಿರುದ್ಧ ಕೇಂದ್ರ ಸರ್ಕಾರ ಕ್ರಮವನ್ನು ಕೈಗೊಂಡಿತು. ಆದರೂ ಸಮಸ್ಯೆಗಳನ್ನು ಸಂಪೂರ್ಣವಾಗಿ ಅಳಿಸಿ ಹಾಕಲು ಸಾಧ್ಯವಾಗಿಲ್ಲವೆನ್ನಬಹುದಾಗಿದೆ.

ಅಸ್ಪೃಶ್ಯತೆಯ, ಜಾತಿಪದ್ಧತಿಯ ವಿನಾಶಕ್ಕಾಗಿ ಭಾರತದ ಸಾಮಾಜಿಕ ಆಚರಣೆಗಳು ಆಮೂಲಾಗ್ರವಾಗಿ ಬದಲಾಗಬೇಕೆಂದು ಅಂಬೇಡ್ಕರ್ ಬಯಸಿದರು. ''ಪ್ರತಿಯೊಬ್ಬ ಭಾರತೀಯ ಮಹಿಳೆ ಮತ್ತು ಪುರುಷರನ್ನು ಶಾಸ್ತ್ರದ ಗುಲಾಮಗಿರಿಯಿಂದ ಮುಕ್ತಗೊಳಿಸಿ, ಶಾಸ್ತ್ರಾಧಾರಿತ ವಿನಾಶಕಾರಿ ಭಾವನೆಗಳನ್ನು ಅವರ ಮನಸ್ಸುಗಳಿಂದ ತೆಗೆದು ಹಾಕಿ, ಅವರ ಮನಸ್ಸುಗಳನ್ನು ಶುದ್ಧಗೊಳಿಸಿದಾಗ ಅವಳಾಗಲಿ, ಅವನಾಗಲಿ ಸಹಪಂಕ್ತಿ ಭೋಜನ ಮತ್ತು ಅಂತರ್ಜಾತಿ ವಿವಾಹಕ್ಕೆ ಮುಂದಾಗುತ್ತಾರೆ. ಅಂತರ್ಜಾತಿ ವಿವಾಹವೇ ಜಾತಿಯ ವಿನಾಶಕ್ಕೆ ಸರಿಯಾದ ಉಪಾಯವೆಂದು ನನಗೆ ಮನವರಿಕೆಯಾಗಿದೆ. ತಾವು ತಮ್ಮವರೆಂಬ ಆತ್ಮೀಯ ಭಾವನೆ ರಕ್ತ ಸಂಬಂಧದಿಂದಲೇ ಬರಬಲ್ಲದು. ಅಂತರ್ಜಾತಿ ವಿವಾಹವಿಲ್ಲದೆ ಬೇರೆ ಯಾವುದರಿಂದಲೂ ಅಸ್ಪೃಶ್ಯತೆ ಮತ್ತು ಜಾತಿ ನಿರ್ಮೂಲನೆಗೆ ಪರಿಹಾರ ಸಿಗುವುದಿಲ್ಲ''[೧೩] ಎಂದು

ಅಂಬೇಡ್ಕರ್ ಅವರು ಹೇಳಿದ್ದಾರೆ. ಹಿಂದೂ ಸಮಾಜದಲ್ಲಿರುವ ಅಸ್ಪೃಶ್ಯತೆ ಮತ್ತು ಜಾತಿಪದ್ಧತಿ ತೊಲಗಿ ಅಂಬೇಡ್ಕರ್ ಅವರ ಕನಸು ನನಸಾಗುವುದು ಭ್ರಮೆಯಾಗಿದೆ.

ದಲಿತ ಸಮೂಹವನ್ನು ದಡ ಮುಟ್ಟಿಸುವ ಬಗ್ಗೆ ನಾಯಕರು ಯೋಚಿಸಬೇಕು ಎಂದರೆ ಈವತ್ತು ಎಡಗೈ-ಬಲಗೈ ವಿವಾದದ ಬಗ್ಗೆ ಯಾರು ಮಾತಾಡುತ್ತಿದ್ದಾರೋ ಅವರು ವಿನಾಕಾರಣ ಸೃಷ್ಟಿಸುತ್ತಿರುವ ಪೆಡಂಭೂತ.[೧೪] ಹೊಲೆಯ-ಮಾದಿಗ ಎಂಬ ವ್ಯತ್ಯಾಸ ಸ್ವಾತಂತ್ರ್ಯ ನಂತರದ ಕಾಲದಲ್ಲಿ ರೂಪುಗೊಂಡಿದ್ದಲ್ಲ. ಇದಕ್ಕೊಂದು ಚರಿತ್ರೆಯೇ ಇದೆಯೆಂದು ಹೇಳಬಹುದಾಗಿದೆ. ಉದಾರೀಕರಣದ ನೆಲೆಯಲ್ಲಿ ಅತ್ಯಂತ ಹೆಚ್ಚು ಶೋಷಿತನಾಗುವ ದಲಿತನಿಗೆ ಆರ್ಥಿಕ ಸ್ವಾವಲಂಬನೆ ಸಾಧಿಸುವ ದಾರಿಯನ್ನು ತೋರಿಸುವುದೇ ಚಳವಳಿಯ ಮುಂದಿರುವ ದೊಡ್ಡ ಸವಾಲು ಹಾಗೂ ಗುರಿ ಎಂಬುದನ್ನು ಗಮನಿಸಿದರೆ ಈ ನಂಬಿಕೆ ಹೆಚ್ಚಿಸುವ ಅನಿವಾರ್ಯತೆ ಎಂಥದ್ದು ಎಂದು ಮನವರಿಕೆಯಾಗುತ್ತದೆ.[೧೫] ದಲಿತರಲ್ಲಿ ಒಗ್ಗಟ್ಟಿಲ್ಲದಿರುವುದೇ ಅವರು ನಿರಂತರ ಶೋಷಣೆಗೊಳಗಾಗುತ್ತಿರುವುದಕ್ಕೆ ಪ್ರಮುಖ ಕಾರಣ. ದಲಿತ ನಾಯಕರಿಂದಲೇ ದಲಿತರಲ್ಲಿ ನಂಬಿಕೆ ಹುಟ್ಟಿಸುವುದಕ್ಕಿಂತ, ಪ್ರತಿಯೊಬ್ಬ ದಲಿತನಲ್ಲಿಯೂ ಆತ್ಮವಿಶ್ವಾಸವೆನ್ನುವುದು ಮೂಡಿಬಂದಾಗ ಮಾತ್ರ ತಮಗಾಗುತ್ತಿರುವ ಅನ್ಯಾಯದ ವಿರುದ್ಧ ಹೋರಾಡಲು ಸಾಧ್ಯವೆಂಬುದು ಗಮನಾರ್ಹ.

೩.೨. ಸಮಕಾಲೀನ ರಾಜಪ್ರಭುತ್ವ ಮತ್ತು ದಲಿತರು

ಶತಮಾನಗಳಿಂದಲೂ ಭಾರತದಲ್ಲಿ ದಲಿತರು ಸವರ್ಣೀಯರಿಂದ ನಿರಂತರವಾಗಿ ಶೋಷಣೆಗೆ ಒಳಗಾಗುತ್ತಲೇ ಬಂದಿದ್ದಾರೆ. ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಪ್ರತಿಯೊಂದು ವಿಷಯದಲ್ಲೂ ದಲಿತರು ಬಹಳ ಹಿಂದುಳಿದಿದ್ದಾರೆ ಎನ್ನಬಹುದಾಗಿದೆ. ಇವರು ತಮ್ಮ ಬದುಕನ್ನು ಸವರ್ಣೀಯರ ಸೇವೆಗೆ ಮೀಸಲಾಗಿಟ್ಟು, ಸವರ್ಣೀಯರಿಂದ ದೌರ್ಜನ್ಯಕ್ಕೆ ಒಳಗಾಗುತ್ತಲೇ ಇದ್ದಾರೆ. ಇವರನ್ನು ಮೇಲೆತ್ತುವ ಪ್ರಯತ್ನಗಳು ಕಾಲಕಾಲಕ್ಕೆ ನಡೆಯುತ್ತಲೇ ಇದ್ದರೂ, ಇವರು ಸವರ್ಣೀಯರ ದೌರ್ಜನ್ಯಗಳಿಂದ ಹೊರಬರಲು ಸಾಧ್ಯವಾಗುತ್ತಲೇ ಇಲ್ಲ. ಅಂತಹ ಸಂದರ್ಭದಲ್ಲಿ ಮೈಸೂರು ಒಡೆಯರು ದಲಿತರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು ಪ್ರಯತ್ನಿಸಿದ್ದನ್ನು ಮರೆಯುವ ಹಾಗಿಲ್ಲ. 'ನವ ಮೈಸೂರಿನ ಶಿಲ್ಪಿ' ಎಂದು ಹೆಸರಾಗಿರುವ ನಾಲ್ವಡಿ ಕೃಷ್ಣರಾಜ ಒಡೆಯರು ದಲಿತರ ಬದುಕಿನಲ್ಲಿ ಹೊಸ ಅರುಣೋದಯವನ್ನು ಉಂಟುಮಾಡಿದರೆನ್ನುವುದು ಉಲ್ಲೇಖಾರ್ಹವಾಗಿದೆ.

ಭರತ ಖಂಡದಲ್ಲಿ ಅತ್ಯಂತ ಹೆಚ್ಚಿನ ಪ್ರಗತಿಯನ್ನು ಸಾಧಿಸಿ ಮುಂದುವರಿಯುತ್ತಿರುವ ರಾಜ್ಯ ಎಂಬ ಹೆಗ್ಗಳಿಕೆಗೆ ನ್ಯಾಯವಾದ ಅರ್ಹತೆಯನ್ನು ಪಡೆದಿರುವ ಮೈಸೂರು ಮಾದರಿ ಸಂಸ್ಥಾನವಾಗಿದೆ. "ಮಾದರಿ ಸಂಸ್ಥಾನ ಎಂಬ ಹೆಮ್ಮೆಯ ಹೆಸರಿಗೆ ಮತ್ತಾವ ಭಾರತೀಯ ಸಂಸ್ಥಾನಕ್ಕೂ ಅರ್ಹತೆ ಇಲ್ಲ."

ಹಾಗೆಯೆ "ಮೈಸೂರು ಭಾರತಕ್ಕೆ ಮಾತ್ರವಲ್ಲದೆ ಇಡೀ ಜಗತ್ತಿಗೆ ಮಾದರಿಯಾಗಿರುವ ಸಂಸ್ಥಾನವಾಗಿದೆ"[೧೬] ಎಂದು ಪ್ರಥಮ ದುಂಡುಮೇಜಿನ ಸಮ್ಮೇಳನದ ಅಧ್ಯಕ್ಷರಾಗಿದ್ದ ಲಾರ್ಡ್ ಸಾಂಕಿ ಅವರು ಭಾರತದ ಸುಧಾರಣೆಗಳಿಗೆ ಸಂಬಂಧಿಸಿದಂತೆ ಮಾಡಿರುವ ಶ್ಲಾಘನೆಯಾಗಿದೆ. ಅವರು ವಸ್ತುನಿಷ್ಠವಾಗಿ ಪರೀಕ್ಷಿಸಿಯೇ ಈ ಮಾತನ್ನು ಹೇಳಿದ್ದಾರೆ. ಕಾರಣ ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಅವಧಿಯಲ್ಲಿಯೇ ಹೊಸ ಶಿಕ್ಷಣ ಮತ್ತು ಸಮಾನ ಉದ್ಯೋಗಾವಕಾಶಗಳನ್ನು ಪಡೆಯುವ ಸಲುವಾಗಿ ಸಮಾಜದ ವಿವಿಧ ವರ್ಗದ ಯುವಕರು ಧ್ವನಿ ಎತ್ತಿದರು. ಅಲ್ಲದೆ ಜಾತಿ ಪದ್ಧತಿ, ಅಸ್ಪೃಶ್ಯತೆ ಮುಂತಾದ ಸಾಮಾಜಿಕ ಅನಿಷ್ಟ ಪದ್ಧತಿಗಳು ಹೆಚ್ಚು ವಿಮರ್ಶೆಗೆ ಒಳಗಾಗಿದ್ದು ಗಮನಾರ್ಹವಾದ ಸಂಗತಿಯಾಗಿದೆ.

"ನಮ್ಮ ಸಂಸ್ಥಾನವು ವ್ಯವಸಾಯಿಕ ದೇಶ. ಹಳ್ಳಿಗಳೇ ಇಲ್ಲಿಯ ಐಶ್ವರ್ಯದ ಆಧಾರ. ರೈತನೇ ಹಳ್ಳಿಗಳ ಮತ್ತು ರಾಷ್ಟ್ರದ ತಳಹದಿ. ಅವನ ಸಂಪತ್ತೇ ದೇಶದ ಸಂಪತ್ತು. ಅವನ ಭಾಗ್ಯವೇ ದೇಶದ ಭಾಗ್ಯ. ಅವನ ಉದ್ಧಾರವೇ ದೇಶೋದ್ಧಾರ. ಸಂಸ್ಥಾನದ ಗ್ರಾಮೀಣ ಜನರಲ್ಲಿ ಸುಖ ಸಂಪತ್ತು, ಸಮೃದ್ಧಿಯಾಗಿದ್ದರೆ ದೇಶದಲ್ಲಿ ನೆಲವೂ, ಬಲವೂ, ಸಂಪತ್ತೂ ನದಿಯಂತೆ ಅವಿಚ್ಛಿನ್ನವಾಗಿ ಹರಿಯುತ್ತದೆ"[೧೭] ಎಂದು ನಾಲ್ವಡಿ ಕೃಷ್ಣರಾಜ ಒಡಯರ್ ಅವರು ಪ್ರಜಾಪ್ರತಿನಿಧಿ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದಂತಹ ಸಂದರ್ಭದಲ್ಲಿ ಆಡಿದ ಮಾತುಗಳಾಗಿವೆ. ಈ ಮೇಲಿನ ಮಾತುಗಳಿಂದ ರೈತರು ಮತ್ತು ಗ್ರಾಮದ ಬಗ್ಗೆ ನಾಲ್ವಡಿ ಅವರು ಹೊಂದಿದ್ದಂತಹ ಕಾಳಜಿಯನ್ನು ತಿಳಿಯಬಹುದಾಗಿದೆ.

ಮೈಸೂರು ಸಂಸ್ಥಾನದಲ್ಲಿದ್ದಂತಹ ದಲಿತರ ಮುಖ್ಯ ಕಸುಬು ಕೃಷಿಯಾಗಿತ್ತು. ಕೃಷಿಯೇ ಅವರ ಆರ್ಥಿಕ ಬೆನ್ನೆಲುಬಾಗಿತ್ತೆಂದು ಹೇಳಬಹುದಾಗಿದೆ. ಸಮಾಜದ ಬಹುಸಂಖ್ಯಾತರಿಗೆ ಉದ್ಯೋಗವನ್ನು ಒದಗಿಸುವುದು ಕೃಷಿಯಾದ್ದರಿಂದ, ಅದರ ಮೇಲೆ ಅವಲಂಬನೆ ಹೆಚ್ಚಾಗುತ್ತಲೇ ಹೋಯಿತು. ಕೃಷಿಯ ಮೇಲೆ ಅವಲಂಬನೆ ಹೆಚ್ಚಾದಂತೆ ಸಮಸ್ಯೆಗಳು ಸಹ ಹೆಚ್ಚಾದವು. ಅಂತಹ ಸಮಸ್ಯೆಗಳಲ್ಲಿ ಪ್ರಮುಖವಾದುದೆಂದರೆ ಬಂಡವಾಳದ ಕೊರತೆ ಪ್ರಮುಖವಾದದ್ದು. ಬಂಡವಾಳದ ಕೊರತೆಯನ್ನು ನೀಗಿಸುವುದಕ್ಕಾಗಿ ನಾಲ್ವಡಿ ಅವರು ಆರ್ಥಿಕ ಪರಿಷತ್ತನ್ನು ಸ್ಥಾಪಿಸಿದರು.[೧೮] ಆರ್ಥಿಕ ಪರಿಷತ್ತಿನ ಸ್ಥಾಪನೆಯಿಂದಾಗಿ ಅದರ ಅಂಗವಾಗಿದ್ದಂತಹ ವ್ಯವಸಾಯ ಸಮಿತಿಯು ಅಸ್ತಿತ್ವಕ್ಕೆ ಬಂದಿತು. ವ್ಯವಸಾಯ ಸಮಿತಿಯು ರೈತರಿಗೆ ಕಬ್ಬು ಬೆಳೆ ಅಭಿವೃದ್ಧಿ, ರೇಷ್ಮೆ ಕೃಷಿ ವಿಸ್ತರಣೆ, ಕೆರೆಗಳ ಅಭಿವೃದ್ಧಿ, ಖಾಯಂ ನೀರಾವರಿಗೆ ಅಂತರ್ಜಲ ಬಳಕೆ, ಗ್ರಾಮೀಣ ಕೈಗಾರಿಕೆಗಳ ಸ್ಥಾಪನೆ, ವ್ಯವಸಾಯ ಶಿಕ್ಷಣದ ವಿಸ್ತರಣೆ ಮೊದಲಾದವುಗಳ ಬಗ್ಗೆ ರೈತರಿಗೆ ಹೆಚ್ಚಿನ ತರಬೇತಿಯನ್ನು ನೀಡುವುದರ ಮೂಲಕ ರೈತರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ ಎನ್ನಬಹುದಾಗಿದೆ.

೧೯೧೨ರಲ್ಲಿ ಹೆಬ್ಬಾಳದಲ್ಲಿ ಕೃಷಿ ಶಾಲೆಯನ್ನು ಆರಂಭಿಸಲಾಯಿತು. ಮುಂದೆ ಕೃಷಿ ಶಾಲೆಯು ಕಾಲೇಜಾಗಿ ಇಂದು ವಿಶ್ವವಿಖ್ಯಾತ ವಿಶ್ವವಿದ್ಯಾಲಯವಾಗಿದೆ.[೧೯] ಇದೇ ಸಂದರ್ಭದಲ್ಲಿ ಮೈಸೂರಿನ

ನಾಗೇನಪಳ್ಳಿಯಲ್ಲಿ, ಆ ಜಿಲ್ಲೆಯ ಕೃಷಿ ಪರಿಸ್ಥಿತಿಯನ್ನು ಕುರಿತು ಅಧ್ಯಯನ ಮಾಡಲು ಸರ್ಕಾರಿ ಕೃಷಿ ಫಾರಂ ಒಂದನ್ನು ಸ್ಥಾಪಿಸಲಾಯಿತು. ಆಗಿನ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ಅವರು ಕೃಷಿ ಪ್ರದರ್ಶನಗಳಿಗೂ ಏರ್ಪಾಡು ಮಾಡಿದರು. ರೈತರಿಗೆ ಉತ್ತಮ ಬೀಜಗಳನ್ನು, ಗೊಬ್ಬರವನ್ನು ಮತ್ತು ಆಧುನಿಕ ಸಲಕರಣೆಗಳನ್ನು ನೀಡಲು ಏರ್ಪಾಡು ಮಾಡಿದರು. ಅಲ್ಲದೆ ಗ್ರಾಮೀಣಾಭಿವೃದ್ಧಿಗಾಗಿ ಗ್ರಾಮ ಸುಧಾರಣೆ ಸಮಿತಿಗಳನ್ನು ರೂಪಿಸಿದರು.[೨೦]

ನಾಲ್ವಡಿ ಕೃಷ್ಣರಾಜ ಒಡೆಯರು ರೈತರಿಗೆ ಅವಶ್ಯವಾದಂತಹ ಸೌಲಭ್ಯಗಳನ್ನು ಒದಗಿಸಲು ತೀರ್ಮಾನಿಸಿ ೧೯೦೫ರಲ್ಲಿ ಸಹಕಾರಿ ಸೊಸೈಟಿಗಳ ಕಾಯ್ದೆಯನ್ನು ಜಾರಿಗೆ ತಂದರು.[೨೧] ಈ ಕಾಯ್ದೆಗಳ ಆಧಾರದ ಮೇಲೆ ಅನೇಕ ಸದಸ್ಯರು ಒಗ್ಗೂಡಿ ಷೇರು ಬಂಡವಾಳವನ್ನು ತೊಡಗಿಸಿ ಮತ್ತು ಸರ್ಕಾರದ ಸಹಾಯಧನವನ್ನು ಉಪಯೋಗಿಸಿಕೊಂಡು ಅನೇಕ ಸಹಕಾರಿ ಬ್ಯಾಂಕುಗಳನ್ನು ಸ್ಥಾಪನೆ ಮಾಡಿದರು. ಈ ಸಹಕಾರಿ ಸೊಸೈಟಿಗಳು ಕೃಷಿಗೆ ಬೇಕಾದ ಆಧುನಿಕ ಕೃಷಿ ಸಲಕರಣೆಗಳು, ಉತ್ತಮ ತಳಿಯ ರಾಸುಗಳು ಮತ್ತು ಬೀಜಗಳು, ರಾಸಾಯನಿಕ ಗೊಬ್ಬರ, ಕಬ್ಬು ಅರೆಯುವ ಯಂತ್ರಗಳು, ಹೆಚ್ಚು ಹೆಚ್ಚಾಗಿ ಇಳುವರಿ ನೀಡುವ ಭತ್ತ, ರಾಗಿ, ಜೋಳ, ದ್ವಿದಳ ಧಾನ್ಯಗಳು ಮುಂತಾದವುಗಳನ್ನು ಒದಗಿಸುತ್ತಿದ್ದವು. ಹೀಗೆ ನಾಲ್ವಡಿ ಕೃಷ್ಣರಾಜ ಒಡೆಯರು ಹಲವಾರು ಸೌಲಭ್ಯಗಳನ್ನು ಕಲ್ಪಿಸಿಕೊಡುವುದರ ಮೂಲಕ ದಲಿತರ ಅಭಿವೃದ್ಧಿಗೆ ಶ್ರಮಿಸಿದ್ದು ಗಮನಾರ್ಹವಾಗಿದೆ.

ಅನಿಷ್ಟ ಪದ್ಧತಿಗಳ ನಿರ್ಮೂಲನೆಗಾಗಿ ಕಾನೂನುಗಳು

ಒಂದು ಸರ್ಕಾರವು ತನ್ನ ರಾಜ್ಯದ ಜನತೆಯ ಸರ್ವತೋಮುಖ ಅಭಿವೃದ್ಧಿಗಾಗಿ ರೂಪಿಸಿದಂತಹ ವಿವಿಧ ಕಾರ್ಯಕ್ರಮಗಳು ಮತ್ತು ನೀತಿಗಳೇ ಸಾಮಾಜಿಕ ಕಾನೂನುಗಳಾಗಿವೆ. ಒಂದು ಸಂಸ್ಥಾನದ ಸರ್ವಕ್ಷೇತ್ರಗಳ ಬೆಳವಣಿಗೆಯನ್ನು ತಿಳಿಯಲು ಆ ಸಂಸ್ಥಾನವು ಜಾರಿಗೆ ತಂದ ಕಾನೂನುಗಳನ್ನೇ ಆಧಾರಗಳಾಗಿ ಬಳಸಿಕೊಳ್ಳಬಹುದಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಆಳ್ವಿಕೆಯ ಅವಧಿಯಲ್ಲಿ ದಲಿತರ ಅಭಿವೃದ್ಧಿಗಾಗಿ ಹಲವಾರು ಕ್ರಮಗಳನ್ನು ಕೈಗೊಂಡರು.

೧. ೧೯೦೯ರ ದೇವದಾಸಿ ನಿಷೇಧ ಆಜ್ಞೆ ಕಾನೂನು

ದೇವದಾಸಿಯರೆಂದರೆ ದೇವಾಲಯಗಳಲ್ಲಿ ದೇವರ ಹೆಸರಿನಲ್ಲಿ ಸಮರ್ಪಿಸಿಕೊಳ್ಳುವುದರ ಮೂಲಕ ನೃತ್ಯ ಮತ್ತು ಸಂಗೀತ ಸೇವೆ ಮಾಡುವ ಸ್ತ್ರೀಯರಾಗಿದ್ದರು. ಮೊದಲು ದೇವದಾಸಿ ಪದ್ಧತಿಯು ಉನ್ನತ ಆದರ್ಶ ಮತ್ತು ಸಂಪ್ರದಾಯವನ್ನು ಹೊಂದಿದ್ದಂತಹ ಪದ್ಧತಿಯಾಗಿತ್ತು. ಆದರೆ ಮುಂದೆ ೧೮ ಮತ್ತು ೧೯ನೇ ಶತಮಾನಗಳಲ್ಲಿ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು, ದೇವದಾಸಿಯರು ಸಲ್ಲಿಸುವ ಸೇವೆ ಮತ್ತು ಸ್ಥಾನಗಳು ಕೀಳುಮಟ್ಟಕ್ಕಿಳಿದವು ಎನ್ನಬಹುದಾಗಿದೆ. ಮೈಸೂರು ಸಂಸ್ಥಾನದಲ್ಲಿಯೂ

ಇಂತಹ ಒಂದು ನೀಚ ಪದ್ಧತಿ ಅಸ್ತಿತ್ವದಲ್ಲಿತ್ತು. ದೇವದಾಸಿಯರು ಮತ್ತು ಬಸವಿಯರು ಹೆಚ್ಚಿನದಾಗಿ ದಲಿತರೇ ಆಗಿರುತ್ತಿದ್ದರೆಂಬುದು ಗಮನಾರ್ಹ.

ನಾಲ್ವಡಿ ಅವರು ಅಧಿಕಾರ ವಹಿಸಿಕೊಂಡ ನಂತರ ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ೧೯೦೯ರಲ್ಲಿ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿತು. ದೇವದಾಸಿ ಪದ್ಧತಿಯು ತನ್ನ ಪಾವಿತ್ರ್ಯತೆಯನ್ನು ಕಳೆದುಕೊಂಡಿರುವ ದುಷ್ಟಪದ್ಧತಿಯೆಂದು ಘೋಷಿಸಿ ಅದನ್ನು ನಿಷೇಧಿಸಿತು. ೧೯೧೦ರಲ್ಲಿ ಸರ್ಕಾರದ ಹತೋಟಿಯಲ್ಲಿರುವ ಮುಜರಾಯಿ ದೇವಸ್ಥಾನಗಳಲ್ಲಿ 'ಗೆಜ್ಜೆಪೂಜೆ' ಸಮಾರಂಭ ಏರ್ಪಡಬಾರದೆಂದು ಆಜ್ಞೆ ಹೊರಡಿಸಿದರು.[೨೨] ಹೀಗೆ ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಆಡಳಿತದ ಅವಧಿಯಲ್ಲಿ ಹಂತ ಹಂತವಾಗಿ ದೇವದಾಸಿ ಪದ್ಧತಿಯನ್ನು ನಿರ್ಮೂಲನಗೊಳಿಸಲು ಪ್ರಯತ್ನಿಸಿದರೆನ್ನ ಬಹುದಾಗಿದೆ.

೨. ೧೯೩೬ ಜುಲೈ ೪೬ರ ವೇಶ್ಯಾವೃತ್ತಿಯ ನಿಷೇಧಾಜ್ಞೆ ಕಾನೂನು

ಆಧುನಿಕ ಸಮಾಜದ ಮತ್ತೊಂದು ಪಿಡುಗಾಗಿರುವ ವೇಶ್ಯಾವೃತ್ತಿಯನ್ನು ತೊಡೆದು ಹಾಕಲು ಮೈಸೂರು ಸಂಸ್ಥಾನದಲ್ಲಿ ಕೆಲವು ಪ್ರಯತ್ನಗಳು ನಡೆದವು. ಈ ವೇಶ್ಯಾವೃತ್ತಿಯನ್ನು ಅನುಸರಿಸುತ್ತಿದ್ದವರೂ ಬಡತನದ ಬೇಗೆಯಿಂದ ಬಳಲುತ್ತಿದ್ದಂತಹ ದಲಿತರೇ ಎಂಬುದು ವಿಷಾದನೀಯ ಸಂಗತಿಯಾಗಿದೆ. ೧೯೩೧ರಲ್ಲಿ ಅಂದಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದಂತಹ ಹೆಚ್.ಸಿ.ದಾಸಪ್ಪ ಅವರು ವೇಶ್ಯಾವೃತ್ತಿಯನ್ನು ಸಂಪೂರ್ಣವಾಗಿ ತೊಡೆದುಹಾಕಲು ಸರ್ಕಾರ ಕಾನೂನನ್ನು ಜಾರಿಗೊಳಿಸಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.[೨೩] ಆದರೆ ಇಂತಹ ಕಾನೂನನ್ನು ಹೆಚ್ಚಿನ ಸಂಖ್ಯೆಯ ಸದಸ್ಯರು ವಿರೋಧಿಸಿದ್ದರಿಂದ ಜಾರಿಗೆ ತರಲಾಗಲಿಲ್ಲ. ೧೯೩೫ರಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯರು ಪ್ರಮುಖ ನಗರಗಳಲ್ಲಿ ವೇಶ್ಯಾವೃತ್ತಿ ಹೆಚ್ಚುತ್ತಿರುವುದರ ಬಗ್ಗೆ ಕಳವಳವನ್ನು ವ್ಯಕ್ತಪಡಿಸಿ, ವೇಶ್ಯಾವೃತ್ತಿಯನ್ನು ತಡೆಗಟ್ಟಲು ಕಾನೂನನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿದರು.

ಸಮಾಜದ ಹಿತವನ್ನು ಬಯಸುವವರಾಗಿದ್ದಂತಹ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ೧೯೩೫ ಜುಲೈ ೧೪ರಂದು ವೇಶ್ಯಾವೃತ್ತಿ ತಡೆಗಟ್ಟುವ Suppression of immoral traffic Act ಎಂಬ ಕಾನೂನನ್ನು ಜಾರಿಗೊಳಿಸಿದರು.[೨೪] ಹೀಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕಾನೂನನ್ನು ಜಾರಿಗೆ ತರುವುದರ ಮೂಲಕ ವೇಶ್ಯಾವೃತ್ತಿಯನ್ನು ನಿಯಂತ್ರಿಸಲು ಪ್ರಯತ್ನಿಸಿದರು.

೩. ೧೯೩೮ ಜುಲೈ ೭ರ 'ದಿ ಮೈಸೂರು ಹಿಂದೂ ವಿಡೋ ರೀಮ್ಯಾರೇಜ್ ಆಕ್ಟ್'

ಮೈಸೂರು ಸಂಸ್ಥಾನವು ೧೮೯೪ರಲ್ಲೇ ಬಾಲ್ಯವಿವಾಹ ನಿಷೇಧ ಕಾನೂನನ್ನು ಜಾರಿಗೆ ತರುವುದರ ಮೂಲಕ ಬಾಲವಿಧವೆಯರ ಸಂಖ್ಯೆಯನ್ನು ಕಡಿತಗೊಳಿಸಿತು. ಆದರೂ ಸಹ ಬಾಲವಿಧವೆಯರ ಸಂಖ್ಯೆ

ಹೆಚ್ಚುತ್ತಲೇ ಇತ್ತು. ಕಾರಣ ಹಿಂದೂ ಸಮಾಜದಲ್ಲಿ ಲಿಖಿತ ಸಂವಿಧಾನದ ಕಾನೂನುಗಳಿಗಿಂತ ಅಲಿಖಿತ ಸಂವಿಧಾನದ ನೀತಿ ನಿಯಮಗಳೇ ಹೆಚ್ಚು ಪ್ರಬಲವಾಗಿ ಅಸ್ತಿತ್ವದಲ್ಲಿದ್ದವು. ವಿಧವೆಯರ ಸ್ಥಿತಿ ಬಹಳ ಹೀನಾಯವಾಗಿತ್ತೆಂದು ಹೇಳಬಹುದಾಗಿದೆ. ದಲಿತರು ಸಹ ಹಿಂದೂ ಸಂಪ್ರದಾಯಸ್ಥರ ಸಂಪರ್ಕದಿಂದ ಪ್ರಭಾವಿತರಾಗಿ ಈ ಪದ್ಧತಿಯನ್ನೇ ತಮ್ಮ ಸಮಾಜದಲ್ಲಿಯೂ ಅನುಸರಿಸಿಕೊಂಡು ಬರುತ್ತಿದ್ದರು. ೧೯೩೬ರಲ್ಲಿ ಪ್ರಜಾಪ್ರತಿನಿಧಿ ಸಭೆಯು ಹಿಂದೂ ವಿಧವೆಯರ ಪುನರ್ವಿವಾಹಕ್ಕೆ ಸಂಬಂಧಿಸಿದ ಮಸೂದೆಯನ್ನು ಬಹುಮತದಿಂದ ಬೆಂಬಲಿಸಿತು. ಪರಿಣಾಮವಾಗಿ ಸಾರ್ವಜನಿಕರ ಬೇಡಿಕೆಯನ್ನು ಗಮನಿಸಿದ ನಾಲ್ವಡಿ ಅವರು ೧೯೩೮ರ ಜುಲೈ ೭ರಂದು 'ದಿ ಮೈಸೂರು ಹಿಂದೂ ವಿಡೋ ರೀ ಮ್ಯಾರೇಜ್ ಆಕ್ಟ್' ಎಂಬ ಕಾನೂನನ್ನು ಜಾರಿಗೆ ತಂದರು.[೨೫] ಹೀಗೆ ನಾಲ್ವಡಿ ಅವರು ಕಾನೂನನ್ನು ಜಾರಿಗೊಳಿಸುವುದರ ಮೂಲಕ ಹಿಂದೂ ವಿಧವೆಯರ ಪುನರ್ ವಿವಾಹಕ್ಕೆ ಇದ್ದ ತೊಂದರೆಗಳನ್ನು ಸ್ವಲ್ಪಮಟ್ಟಿಗೆ ನಿಯಂತ್ರಿಸಿದರೆನ್ನ ಬಹುದಾಗಿದೆ.

೪. ದಿ ಹಿಂದೂ ಲಾ ವುಮೆನ್ಸ್ ರೈಟ್ಸ್ ಆಕ್ಟ್

ಸಮಾಜದಲ್ಲಿ ಮಹಿಳೆಯರು ಬಹಳ ಶೋಷಣೆಗೊಳಪಡುತ್ತಿದ್ದರು. ಇದಕ್ಕೆ ಪ್ರಮುಖ ಕಾರಣ ಪಿತ್ರಾರ್ಜಿತ ಆಸ್ತಿಯಲ್ಲಿ ಅವರಿಗೆ ಯಾವುದೇ ಪಾಲಿಲ್ಲವೆಂಬುದು. ಹಿಂದೂ ಮೂಲಭೂತವಾದಿಗಳ ಕಾನೂನಿನಂತೆ ಆಧುನಿಕ ಸಮಾಜವು ಮುಂದುವರೆಯುತ್ತಿದ್ದುದನ್ನು ಸಮಾಜ ಸುಧಾರಕರು ವಿರೋಧಿಸಿದರು. ಇದರಿಂದಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ೧೯೩೩ರ ಜೂನ್ ೨೯ರಂದು 'ದಿ ಹಿಂದೂ ಲಾ ವುಮೆನ್ಸ್ ರೈಟ್ಸ್ ಆಕ್ಟ್' ಅನ್ನು ಜಾರಿಗೆ ತಂದರು.[೨೬] ಈ ಕಾನೂನಿನಿಂದಾಗಿ ಸ್ತ್ರೀಯರ ಸ್ಥಾನಮಾನ ಸ್ವಲ್ಪಮಟ್ಟಿಗೆ ಉತ್ತಮವಾಯಿತೆಂದು ಹೇಳಿದರೆ ತಪ್ಪಾಗಲಾರದು.

೫. ದಿ ಪ್ರಿವೆನ್ಷನ್ ಆಫ್ ಜುವೆನೈಲ್ ಸ್ಮೋಕಿಂಗ್ ಆಕ್ಟ್

ದಲಿತ ಸಮಾಜಕ್ಕಂಟಿದ ಮತ್ತೆರಡು ಶಾಪಗಳೆಂದರೆ ಕುಡಿತ ಮತ್ತು ಧೂಮಪಾನ. ಸಾರ್ವಜನಿಕರ ಆರೋಗ್ಯಕ್ಕೆ ಕಂಟಕಪ್ರಾಯವಾದ ಧೂಮಪಾನ ಮತ್ತು ಮದ್ಯಪಾನಗಳನ್ನು ತಡೆಗಟ್ಟಲು, ಅದರಲ್ಲೂ ಅಪ್ರಾಪ್ತ ವಯಸ್ಕ ಹುಡುಗರನ್ನು ಧೂಮಪಾನದಿಂದ ದೂರವಿಡಲು ನಾಲ್ವಡಿ ಅವರು ೧೯೧೧ ಅಕ್ಟೋಬರ್ ೯ರಂದು 'ದಿ ಪ್ರಿವೆನ್ಷನ್ ಆಫ್ ಜುವೆನೈಲ್ ಸ್ಮೋಕಿಂಗ್ ಆಕ್ಟ್' ಎಂಬ ಕಾನೂನಿಗೆ ಸಹಿ ಮಾಡಿದರು.[೨೭] ಈ ಒಂದು ಕಾನೂನಿನ ಪ್ರಭಾವದಿಂದಾಗಿ ಇಂದಿಗೂ ಸಹ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ ಕಾನೂನನ್ನು ರಾಜ್ಯ ಸರ್ಕಾರ ಜಾರಿಗೆ ತರಲು ಮುಂದಾಗಿರುವುದು ಗಮನಾರ್ಹ.

೬. ೧೯೩೭ರಲ್ಲಿ 'ದಿ ಮೈಸೂರ್ ಮೆಟರ್ನಿಟಿ ಬೆನಿಫಿಟ್ ಆಕ್ಟ್'

ನಗರೀಕರಣ, ಜಾಗತೀಕರಣ ಹಾಗೂ ಕೈಗಾರಿಕೀಕರಣದ ಪ್ರಭಾವದಿಂದಾಗಿ ಹೆಚ್ಚು ಹೆಚ್ಚು ಕಾರ್ಖಾನೆಗಳು ಮೈಸೂರು ಸಂಸ್ಥಾನದಲ್ಲಿ ಸ್ಥಾಪನೆಗೊಂಡವು. ಕಾರ್ಖಾನೆಗಳು ಹೆಚ್ಚಿದ ಹಾಗೆಯೇ

ಕಾರ್ಮಿಕರ ಸಂಖ್ಯೆಯು ಹೆಚ್ಚಾಯಿತು. ಕಾರ್ಖಾನೆಗಳ ಮಾಲೀಕರು ಕಡಿಮೆ ವೇತನಕ್ಕೆ ಸ್ತ್ರೀಯರನ್ನು ಕಾರ್ಮಿಕರಾಗಿ ನೇಮಿಸಿಕೊಳ್ಳಲಾರಂಭಿಸಿದರು. ಈ ಸ್ತ್ರೀ ಕಾರ್ಮಿಕರಲ್ಲಿ ದಲಿತ ಮಹಿಳೆಯರು ಸಹ ಹೆಚ್ಚಿನ ಪ್ರಮಾಣದಲ್ಲಿದ್ದರು. ಸ್ತ್ರೀ ಕಾರ್ಮಿಕರ ಸ್ಥಿತಿ ಬಹಳ ಶೋಚನೀಯವಾಗಿತ್ತು. ಕಾರಣ ಖಾಸಗಿ ಕಾರ್ಖಾನೆಗಳಲ್ಲಿನ ಮಹಿಳಾ ಕಾರ್ಮಿಕರಿಗೆ ಹೆರಿಗೆ ರಜೆ ಅಥವಾ ಇತರೆ ಭತ್ಯೆಯ ಸೌಲಭ್ಯಗಳಿರಲಿಲ್ಲವೆಂಬುದಾಗಿದೆ. ೧೯೨೯ರಲ್ಲಿ ಬೊಂಬಾಯಿ ಸರ್ಕಾರ ಹೆರಿಗೆ ಭತ್ಯೆ ಕಾನೂನಿಗನುಗುಣವಾಗಿ ಮೈಸೂರಿನಲ್ಲಿ ಅಂತಹ ಕಾನೂನನ್ನು ಜಾರಿಗೆ ತರಬೇಕೆಂದು ಬೋರ್ಡ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಕೋರಿಕೊಂಡಿತು. ಮೈಸೂರಿನ ಮಹಿಳಾ ಕಾರ್ಮಿಕರ ಸ್ಥಿತಿಗತಿಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ ನಂತರ ೧೯೩೭ರಲ್ಲಿ 'ದಿ ಮೈಸೂರು ಮೆಟರ್ನಿಟಿ ಬೆನಿಫಿಟ್ ಆಕ್ಟ್'ನ್ನು ಜಾರಿಗೆ ತರಲಾಯಿತು.[೨೮] ಹೀಗೆ ನಾಲ್ವಡಿ ಅವರ ಸರ್ಕಾರದಿಂದಾಗಿ ಮಹಿಳಾ ಕಾರ್ಮಿಕರ ಸ್ಥಿತಿಗತಿಗಳು ಸ್ವಲ್ಪಮಟ್ಟಿಗೆ ಸುಧಾರಿಸಿದವೆಂದು ಹೇಳಬಹುದಾಗಿದೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಆಳ್ವಿಕೆಯ ಕಾಲಾವಧಿಯಲ್ಲಿ ದಲಿತರ ಅಭಿವೃದ್ಧಿಗಾಗಿ ಹಲವಾರು ಕಾನೂನುಗಳನ್ನು ಜಾರಿಗೊಳಿಸಿದರು. ಆದರೆ ದೇವದಾಸಿ ಪದ್ಧತಿ, ವೇಶ್ಯಾವೃತ್ತಿ, ಮಹಿಳೆಯರ ಮೇಲಿನ ಶೋಷಣೆ, ಧೂಮಪಾನ ಮತ್ತು ಮದ್ಯಪಾನಗಳಂತಹ ಸಾಮಾಜಿಕ ಅನಿಷ್ಟ ಪದ್ಧತಿಗಳು ಇಂದಿಗೂ ಸಹ ಅಸ್ತಿತ್ವದಲ್ಲಿವೆ. ಇಂತಹ ನೀಚ ಪದ್ಧತಿಗಳನ್ನು ಸ್ವಲ್ಪಮಟ್ಟಿಗಾದರೂ ನಿಯಂತ್ರಿಸುವಲ್ಲಿ ನಾಲ್ವಡಿ ಅವರ ಪಾತ್ರ ಮಹತ್ವವಾದುದಾಗಿದೆ.

ಮೈಸೂರು ಅರಸರು ಮತ್ತು ದಲಿತ ಶಿಕ್ಷಣ

ಪ್ರತಿಯೊಬ್ಬ ವ್ಯಕ್ತಿಯು ಸಮಾಜದಲ್ಲಿ ಸ್ವಾಭಿಮಾನದಿಂದ ಬದುಕಲು, ಉತ್ತಮ ಪ್ರಜೆಯಾಗಿ ಬಾಳಲು ಶಿಕ್ಷಣ ಬಹಳ ಅವಶ್ಯಕವಾದುದು. ಇಂತಹ ಶಿಕ್ಷಣದಿಂದ ದಲಿತರು ಅನಾದಿಕಾಲದಿಂದಲೂ ವಂಚಿತರಾಗಿದ್ದರು. ಶಿಕ್ಷಣದ ಮಹತ್ವವನ್ನು ಅರಿತಿದ್ದಂತಹ ನಾಲ್ವಡಿ ಅವರು ಮೈಸೂರು ಸಂಸ್ಥಾನದಲ್ಲಿ ಪಶುಗಳಿಗಿಂತಲೂ ಕೀಳು ಜೀವನ ಸಾಗಿಸುತ್ತಿದ್ದಂತಹ ದಲಿತರಿಗೆ ಶಿಕ್ಷಣದ ಅವಕಾಶವನ್ನು ಕಲ್ಪಿಸಿಕೊಡುವುದರ ಮೂಲಕ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಪ್ರಯತ್ನವನ್ನು ಮಾಡಿದರು. ನಾಲ್ವಡಿ ಅವರು ತಮ್ಮ ಆಳ್ವಿಕೆಯ ಕಾಲಾವಧಿಯಲ್ಲಿ ಎಲ್ಲ ವರ್ಗದ ವಿದ್ಯಾರ್ಥಿಗಳು ಒಟ್ಟಿಗೆ ಕಲಿಯಲು, ವಾಸಿಸಲು ಸಮಾನತೆಯ ಅವಕಾಶವನ್ನು ಕಲ್ಪಿಸುವುದರ ಮೂಲಕ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದರು.

ನಾಲ್ವಡಿ ಅವರ ಸರ್ಕಾರ ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಹಾಗೂ ೨೦ನೇ ಶತಮಾನದ ಮೊದಲಲ್ಲಿ ದಲಿತರಿಗಾಗಿಯೇ ಪ್ರತ್ಯೇಕ ಶಾಲೆಗಳನ್ನು ತೆರೆಯಿತು. ಈ ಶಾಲೆಗಳನ್ನು

ಪಂಚಮ ಶಾಲೆಗಳೆಂಬುದಾಗಿ ಹೆಸರಿಸಲಾಯಿತು. ನಾಲ್ವಡಿ ಅವರ ಸರ್ಕಾರ ದಲಿತರ ವಿದ್ಯಾಭ್ಯಾಸಕ್ಕಾಗಿ ಹಲವಾರು ಕ್ರಮಗಳನ್ನು ಕೈಗೊಂಡಿತು. ಭಾರತದಲ್ಲಿ ಮೊದಲ ಬಾರಿಗೆ ಕಡ್ಡಾಯ ಶಿಕ್ಷಣದ ವ್ಯವಸ್ಥೆಯನ್ನು ಜಾರಿಗೆ ತಂದ ರಾಜ್ಯಗಳಲ್ಲಿ ಮೈಸೂರು ಸಂಸ್ಥಾನ ಎರಡನೆಯದಾಗಿದೆ. ಮೊದಲನೆಯದು ಬರೋಡ ಸಂಸ್ಥಾನ. ೧೯೦೯ರಲ್ಲಿ ಮೈಸೂರು ಸಂಸ್ಥಾನ ಕಡ್ಡಾಯ ಶಿಕ್ಷಣದ ವ್ಯವಸ್ಥೆಯನ್ನು ಜಾರಿಗೊಳಿಸಿತು.[೨೯] ಮೊದಲು ಪಂಚಮ ಶಾಲೆಗಳು ಕ್ರೈಸ್ತ ಮಿಷನ್ ಸಂಸ್ಥೆಗಳ ಆಶ್ರಯದಲ್ಲಿ ನಡೆಯುತ್ತಿದ್ದವು. ೧೯೧೩ರಲ್ಲಿ ಬಿ.ಎನ್.ನರಸಿಂಹ ಅಯ್ಯಂಗಾರ್ ಅವರ ಶ್ರಮದಿಂದಾಗಿ 'ದಲಿತ ಶಿಕ್ಷಣ ಮಿಷನ್' ಎಂಬ ಸಂಸ್ಥೆ ಸ್ಥಾಪಿತವಾಯಿತು. ೧೯೧೫ರಲ್ಲಿ ಈ ಸಂಸ್ಥೆ ೧೫ ಶಾಲೆಗಳನ್ನು ನಡೆಸುತ್ತಿತ್ತು.[೩೦] ದಲಿತರು ಸಾರ್ವಜನಿಕ ಶಾಲೆಗಳಲ್ಲಿ ವಿದ್ಯೆಯನ್ನು ಕಲಿಯಲು ಸರ್ಕಾರ ಅನುಮತಿಯನ್ನು ನೀಡಿತು. ಇದರಿಂದಾಗಿ ಸವರ್ಣೀಯರಿಂದ ಸಾಕಷ್ಟು ವಿರೋಧಗಳು ವ್ಯಕ್ತವಾದವು. ಹಾಗಾಗಿ ಸರ್ಕಾರವು ವಿಧಿಯಿಲ್ಲದೆ ದಲಿತರಿಗಾಗಿ ಪ್ರತ್ಯೇಕ ಶಾಲೆಗಳನ್ನು ತೆರೆಯುವ ಕಡೆ ಗಮನ ಹರಿಸಿತು.

೧೯೧೫ರಲ್ಲಿ ಸರ್ಕಾರ ಒಂದು ಸಾರ್ವಜನಿಕ ಸುತ್ತೋಲೆ ಹೊರಡಿಸಿ ಯಾರನ್ನು ಸಾಮಾಜಿಕ ಅಥವಾ ಧಾರ್ಮಿಕ ನಿರ್ಬಂಧದ ಆಧಾರದ ಮೇಲೆ ಸಾರ್ವಜನಿಕ ಶಾಲೆಗಳಿಗೆ ಸೇರುವುದನ್ನು ನಿಷೇಧಿಸಕೂಡದು ಎಂದು ತಿಳಿಸಿತು. ಸರ್ಕಾರ ಈ ನಿಟ್ಟಿನಲ್ಲಿಯೇ ಹೆಚ್ಚು ಪಂಚಮ ಶಾಲೆಗಳನ್ನು ಪ್ರಾರಂಭಿಸಿತು. ೧೯೧೦-೧೧ರಲ್ಲಿ ಪಂಚಮರಿಗಾಗಿ ೬೭ ಸರ್ಕಾರಿ ಶಾಲೆಗಳು ಮತ್ತು ೩೭ ಅನುದಾನಿತ ಶಾಲೆಗಳು ಹಾಗೂ ೪ ಅನುದಾನರಹಿತ ಶಾಲೆಗಳಿದ್ದರೆ, ೧೯೧೫-೧೬ರಲ್ಲಿ ೧೭೧ ಸರ್ಕಾರಿ ಶಾಲೆಗಳು ೧೦೮ ಅನುದಾನಿತ ಶಾಲೆಗಳು ಮತ್ತು ೮೮ ಅನುದಾನರಹಿತ ಶಾಲೆಗಳು ಅಸ್ತಿತ್ವದಲ್ಲಿದ್ದವು.[೩೧] ಹೀಗೆ ನಾಲ್ವಡಿ ಅವರ ಸರ್ಕಾರ ಮೈಸೂರು, ತುಮಕೂರು, ಚಿಕ್ಕಮಗಳೂರು, ಹಾಸನ, ಚಾಮರಾಜನಗರಗಳಲ್ಲಿ ದಲಿತ ವಿದ್ಯಾರ್ಥಿಗಳಿಗೆ ಶಿಕ್ಷಣದ ಅವಕಾಶವನ್ನು ನೀಡುವುದರ ಮೂಲಕ ಅವರ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸಿದ್ದು ಉಲ್ಲೇಖಾರ್ಹವಾಗಿದೆ. ೧೯೧೬ರಲ್ಲಿ ಸರ್ಕಾರ ಹೊರಡಿಸಿದ್ದ ಶಾಲೆಗಳನ್ನು ಎಲ್ಲ ವರ್ಗದವರಿಗೂ ತೆರೆದಿಡುವ ಸುತ್ತೋಲೆಗೆ ಶೃಂಗೇರಿಯಲ್ಲಿ ಪ್ರಬಲ ವಿರೋಧ ಕಂಡುಬಂದಿತು. ಕಾರಣ ಇಲ್ಲಿನ ಆಂಗ್ಲೋ ವರ್ನಾಕ್ಯುಲರ್ ಶಾಲೆಗೆ ಒಬ್ಬ ದಲಿತ ವಿದ್ಯಾರ್ಥಿಯನ್ನು ಸೇರಿಸಲಾಗಿತ್ತು. ಅದನ್ನು ಪ್ರತಿಭಟಿಸಿ ೪೦೦ ವೈದಿಕ ಬ್ರಾಹ್ಮಣರು ಒಂದು ಸಮಿತಿಯನ್ನು ರಚಿಸಿಕೊಂಡು ಸರ್ಕಾರಕ್ಕೆ ಅಹವಾಲು ಸಲ್ಲಿಸಿದರು. ದಲಿತರು ಸರ್ಕಾರಿ ಅಥವಾ ಖಾಸಗಿ ಶಾಲೆಗಳಲ್ಲಿ ಇತರೆ ಸವರ್ಣೀಯರೊಂದಿಗೆ ವಿದ್ಯೆ ಕಲಿಯಲು ಸಾಕಷ್ಟು ಪ್ರತಿರೋಧವಿತ್ತು ಎಂಬುದಕ್ಕೆ ಇದು ಒಂದು ಉದಾಹರಣೆಯಾಗಿದೆ. ಸವರ್ಣೀಯರ ಈ ಮನೋಭಾವನೆಗೆ ಶತಮಾನಗಳಿಂದಲೂ ಅವರು ಬೆಳೆಸಿಕೊಂಡು ಬಂದಿದ್ದ ಪ್ರತ್ಯೇಕ ಸಾಂಸ್ಕೃತಿಕ ಆವರಣ ಮತ್ತು ಪಂಚಮರ ಬಗ್ಗೆ ಸಮಾಜ ಹೊಂದಿದ್ದ ಕೀಳು ಭಾವನೆಗಳು ಕಾರಣವಾಗಿದ್ದವೆನ್ನುವುದು ವಿಷಾದನೀಯ ಸಂಗತಿಯಾಗಿದೆ.

ನಾಲ್ವಡಿ ಅವರ ಸರ್ಕಾರ ೧೯೧೮ರ ನವೆಂಬರ್ ೨೯ರಂದು ಒಂದು ಆದೇಶ ಹೊರಡಿಸಿ ರೈಲು, ಆಸ್ಪತ್ರೆ, ನ್ಯಾಯಾಲಯಗಳಂತೆಯೇ ಶಾಲೆಗಳು ಸಾರ್ವಜನಿಕ ಸಂಸ್ಥೆಗಳೆಂದು ಘೋಷಿಸಿತು.[೬೨] ಈ ರೀತಿ ಸರ್ಕಾರ ಅಸ್ಪೃಶ್ಯರು ವಿದ್ಯೆ ಕಲಿಯುವ ಹಕ್ಕನ್ನು ಎತ್ತಿ ಹಿಡಿಯುವುದರ ಮೂಲಕ ಅವರ ಶೈಕ್ಷಣಿಕ ಪ್ರಗತಿಗೆ ಶ್ರಮಿಸಿತು. ಬ್ರಾಹ್ಮಣೇತರ ಚಳವಳಿಯ ಸಂದರ್ಭದಲ್ಲಿ ಲಿಂಗಾಯತ ಮತ್ತು ಒಕ್ಕಲಿಗರ ಹೋರಾಟಕ್ಕೆ ಸ್ಫೂರ್ತಿ ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಆಡಳಿತದಲ್ಲಿ ಶೂದ್ರರು ಮತ್ತು ದಲಿತರಿಗೆ ಶಾಲಾ ಕಾಲೇಜು ಪ್ರಾರಂಭಿಸಿದ್ದಲ್ಲದೆ ಪ್ರತಿಯೊಂದು ತಾಲ್ಲೂಕಿನಲ್ಲಿ ವಿದ್ಯಾರ್ಥಿ ವಸತಿ ನಿಲಯಗಳನ್ನು ಪ್ರಾರಂಭಿಸಿದರು. ಉನ್ನತ ಶಿಕ್ಷಣ ಪಡೆಯಲಿಚ್ಛಿಸುವ ಶೂದ್ರರು ಮತ್ತು ಶೂದ್ರಾತಿ ಶೂದ್ರರಿಗೆ ವಿದ್ಯಾರ್ಥಿ ವೇತನ ಕೊಡಮಾಡಿದರು. ೧೯೨೧ರಲ್ಲಿ ಶೂದ್ರರು ಮತ್ತು ಅಸ್ಪೃಶ್ಯರಿಗೆ ೭೫% ರಷ್ಟು ಮೀಸಲಾತಿಯನ್ನು ಕಲ್ಪಿಸುವುದರ ಮೂಲಕ ಮಹತ್ತರವಾದ ಹೆಜ್ಜೆಯನ್ನಿಟ್ಟರು.[೬೩] ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ.ವಿಶ್ವೇಶ್ವರಯ್ಯ, ಸರ್.ಮಿರ್ಜಾ ಇಸ್ಮಾಯಿಲ್ ಮತ್ತು ಜಯಚಾಮರಾಜ ಒಡೆಯರ್ ಅವರು ಶೈಕ್ಷಣಿಕ ಸುಧಾರಣೆಗೆ ವಿಶೇಷ ಗಮನ ಹರಿಸಿದ್ದಾರೆ. ೧೯೧೨-೧೩ರಲ್ಲಿ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ೩೦ ಮತ್ತು ೩ ಇದ್ದವು. ೧೯೪೭ರ ವೇಳೆಗೆ ಅವುಗಳ ಸಂಖ್ಯೆ ೮೩ ಮತ್ತು ೭೧ಕ್ಕೆ ಏರಿದವು ೧೯೧೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಯಿತು. ಸಂಸ್ಥಾನದ ಹೈಸ್ಕೂಲುಗಳನ್ನೆಲ್ಲ ಪದವಿ ಕಾಲೇಜುಗಳಾಗಿ ಪರಿವರ್ತಿಸಲಾಯಿತು.[೬೪]

ಮೈಸೂರು ಸಂಸ್ಥಾನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯ ಕಾಲಾವಧಿ ಬಹಳ ಮಹತ್ವಪೂರ್ಣವಾದುದು. ಕಾರಣ ಶತಶತಮಾನಗಳಿಂದಲೂ ಸವರ್ಣೀಯರಿಂದ ಶೋಷಣೆಗೊಳಪಟ್ಟಿದ್ದಂತಹ ದಲಿತರಿಗೆ ಶಿಕ್ಷಣವನ್ನು ನೀಡುವುದರ ಮೂಲಕ ಅವರಲ್ಲಿ ಒಂದು ಹೊಸ ಚೈತನ್ಯವನ್ನು ಮೂಡಿಸಿದವು. ದಲಿತರಿಗೆ ಶಾಲೆಗಳಲ್ಲಿ ಮುಕ್ತ ಅವಕಾಶವನ್ನು ಕಲ್ಪಿಸಿಕೊಡುವುದರ ಮೂಲಕ ಅವರ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸಿದರು. ಶಿಕ್ಷಣವನ್ನು ಪಡೆದಂತಹ ದಲಿತ ಯುವಕ, ಯುವತಿಯರು ತಮ್ಮ ಹಕ್ಕುಗಳಿಗಾಗಿ ಹೋರಾಟವನ್ನು ಆರಂಭಿಸಿದ್ದು ಗಮನಾರ್ಹ.

ಆರ್.ಗೋಪಾಲಸ್ವಾಮಿ ಅಯ್ಯರ್ ಹಾಗೂ ದಲಿತ ಶಿಕ್ಷಣ

ಮೈಸೂರು ಸಂಸ್ಥಾನದಲ್ಲಿಯೂ ಭಾರತದಲ್ಲಿ ಹಿಂದಿನಿಂದ ಬಂದಿದ್ದಂತಹ ಸಾಮಾಜಿಕ ಸ್ತರವಿನ್ಯಾಸವೇ ಮುಂದುವರೆದುಕೊಂಡು ಬಂದಿತ್ತು. ಸಮಾಜದಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರೆಂಬ ಪ್ರಧಾನ ಜಾತಿಗಳಿದ್ದವು. ಇವುಗಳಲ್ಲದೆ ಇಂದಿನಂತೆ ಅನೇಕ ಜಾತಿಗಳಿದ್ದು ಪಂಚಮ ವರ್ಗವೂ ಸಹ ಇವುಗಳಲ್ಲಿ ಒಂದಾಗಿತ್ತು. ಪಂಚಮರ ಜೀವನಸ್ಥಿತಿಯು ಬಹಳ ಶೋಚನೀಯವಾಗಿತ್ತು. ಅಂದರೆ

ವಾಸಿಸಲು ಒಳ್ಳೆಯ ಗುಣಮಟ್ಟದ ಮನೆಗಳಿಲ್ಲದೆ, ಕೃಷಿಕಾರ್ಯ ಮಾಡಲು ಭೂಮಿಯೂ ಇಲ್ಲದೆ ಅತೀವ ಬಡತನದಿಂದ ಜೀವನ ಸಾಗಿಸುತ್ತಿದ್ದರು. ಮೊದಲಾಗಿ ಇವರ ಮಕ್ಕಳಿಗೆ ಶಿಕ್ಷಣ ಕಲಿಯಲು ಶಾಲೆಯಲ್ಲಿ ಪ್ರವೇಶವನ್ನು ನಿಷೇಧಿಸಲಾಗಿತ್ತು. ಒಟ್ಟಾರೆ ಸಮಾಜದಲ್ಲಿ ಯಾವುದೇ ಸ್ಥಾನಮಾನಗಳಿಲ್ಲದೆ ಸಂಸ್ಥಾನದಲ್ಲಿ ಬಹುಸಂಖ್ಯಾತ ದಲಿತರು ಅಜ್ಞಾನ, ಬಡತನ, ದಬ್ಬಾಳಿಕೆ ಮತ್ತು ಶೋಷಣೆಗೆ ಒಳಗಾಗಿ ಹೀನಾಯ ಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದರು. ದಲಿತರ ಸ್ಥಿತಿಗತಿಗಳನ್ನು ಹತ್ತಿರದಿಂದ ಅರ್ಥ ಮಾಡಿಕೊಂಡ ಬ್ರಿಟಿಷರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಭಾರತದಲ್ಲಿ ಶೋಷಣೆಗೆ ಒಳಗಾದ ದಲಿತರಿಗೆ ಇಂಗ್ಲಿಷ್ ಶಿಕ್ಷಣ ಕೊಡಲು ವಿಶೇಷ ಶಾಲೆ ಮತ್ತು ವಿದ್ಯಾರ್ಥಿನಿಲಯಗಳನ್ನು ಆರಂಭಿಸಿದರು. ಮದ್ರಾಸಿನ ಜಸ್ಟಿಸ್ ಪಾರ್ಟಿಯ ಕಾರ್ಯಕ್ರಮ, ಸ್ವಾಮಿ ವಿವೇಕಾನಂದ, ಜ್ಯೋತಿಬಾ ಫುಲೆ ಅವರ ಚಿಂತನೆಗಳಿಂದ ಪ್ರಭಾವಿತರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಆಡಳಿತದ ಕಾಲಾವಧಿಯಲ್ಲಿ ಸಾಮಾಜಿಕ ಸುಧಾರಣೆಗಳನ್ನು ತರಲು ಮುಖ್ಯವಾಗಿ ದಲಿತರ ಅಭಿವೃದ್ಧಿಗಾಗಿ ಕಾನೂನುಗಳನ್ನು ರೂಪಿಸಲು ಮುಂದಾದರು.

ಅನಿಬೆಸೆಂಟ್ ಅವರ ಪ್ರಭಾವ ಹೆಚ್ಚಾಗಿ 'ಥಿಯೋಸಾಫಿಕಲ್ ಸೊಸೈಟಿ ಆಫ್ ಇಂಡಿಯಾ' ಅಸ್ತಿತ್ವಕ್ಕೆ ಬಂದು ಸುಧಾರಣಾವಾದಿಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಶೋಷಿತರ ಪರವಾಗಿ ದುಡಿಯುವಂತೆ ಮಾಡಿತು. ಥಿಯೋಸಾಫಿಕಲ್ ಸೊಸೈಟಿಯ ಸದಸ್ಯರಾದ ಅನಿಬೆಸೆಂಟ್ ಅವರಿಂದ ಪ್ರಭಾವಿತರಾದ ಬೆಂಗಳೂರಿನ ಆರ್.ಗೋಪಾಲಸ್ವಾಮಿ ಅಯ್ಯರ್ ಅವರು ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಗಾಂಧೀಜಿ ಪೂರ್ವದಲ್ಲಿಯೇ ಮೈಸೂರು ಸಂಸ್ಥಾನದಲ್ಲಿ ಪಂಚಮರ ಏಳಿಗೆಗಾಗಿ ದುಡಿದರು. ಅಸ್ಪೃಶ್ಯತಾ ನಿವಾರಣಾ ಕಾರ್ಯದಲ್ಲಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು ಯಾವುದೇ ಪ್ರತಿಫಲಾಪೇಕ್ಷೆ ಯಿಲ್ಲದೆ ನಿಸ್ವಾರ್ಥ ಸೇವೆಯನ್ನು ಮಾಡಿ ಮೈಸೂರು ಸಂಸ್ಥಾನದಲ್ಲಿ ಇತಿಹಾಸ ನಿರ್ಮಿಸಿದವರೆಂದರೆ ಗೋಪಾಲಸ್ವಾಮಿ ಅಯ್ಯರ್ ಅವರಾಗಿದ್ದಾರೆ.

ದಲಿತ ಹುಡುಗರಿಗೆ ವಿದ್ಯೆಯ ಮಹತ್ವವನ್ನು ತಿಳಿಸುತ್ತಾ ೧೯೧೪ರಲ್ಲಿ ಸಂಸ್ಥಾನದಲ್ಲಿ ಸ್ಥಾಪಿತವಾಗಿದ್ದಂತಹ 'ಪಂಚಮರ ಬೋರ್ಡಿಂಗ್ ಹೋಂ'ಗೆ ಅಯ್ಯರ್ ಅವರು ದಾಖಲು ಮಾಡಿಸುತ್ತಿದ್ದರು.[೩೫] ಸರ್ಕಾರಿ ಶಾಲೆಗಳು, ೧೦೮ ಅನುದಾನಿತ ಶಾಲೆಗಳು ಮತ್ತು ೮೮ ಅನುದಾನ ರಹಿತ ಶಾಲೆಗಳನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಸ್ಥಾನದಲ್ಲಿ ದಿವಾನರಾಗಿದ್ದ ವಿಶ್ವೇಶ್ವರಯ್ಯ ಅವರ ಆಡಳಿತ ಕಾಲದಲ್ಲಿ ತೆರೆಯಲಾಯಿತು. ಮೈಸೂರು, ತುಮಕೂರು ಮತ್ತು ಚಿಕ್ಕಮಗಳೂರುಗಳಲ್ಲಿ ಪಂಚಮ ವಿದ್ಯಾರ್ಥಿಗಳಿಗಾಗಿ ಶಿಕ್ಷಣದ ಅವಕಾಶವನ್ನು ಹೆಚ್ಚಿಸುವ ಕ್ರಮವನ್ನು ಅಯ್ಯರ್ ಅವರ ನೇತೃತ್ವದಲ್ಲಿ ನಾಲ್ವಡಿ ಅವರು ಕೈಗೊಂಡರು. ಹೀಗೆ ಪ್ರಾರಂಭಗೊಂಡ ಪಂಚಮ ಶಾಲೆಗಳಲ್ಲಿನ ಶಿಕ್ಷಣದ

ಬಗ್ಗೆ ಅಯ್ಯರ್ ಅವರು ಯುವರಾಜರಾದ ಕಂಠೀರವ ನರಸಿಂಹರಾಜ ಒಡೆಯರಿಗೆ ಆ ದಿನದ ದಿನಚರಿಯನ್ನು ತಿಳಿಸಬೇಕಾಗಿತ್ತು. ಹಾಗಾಗಿ ಅಯ್ಯರ್ ಅವರು ಪಂಚಮರ ಶೈಕ್ಷಣಿಕ ಪ್ರಗತಿಗೋಸ್ಕರ ದಿನಕ್ಕೆ ೧೮ ಗಂಟೆಗಳನ್ನು ಮೀಸಲಿರಿಸಿದ್ದರೆಂದು ಡಾ.ಜಿ.ಗೋಪಾಲ ಅವರು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ತಿಳಿಸಿದ್ದಾರೆ.[೩೬] ಈ ಮೇಲಿನ ವಾಕ್ಯವನ್ನು ಗಮನಿಸಿದಾಗ ಯುವರಾಜರು ಮತ್ತು ನಾಲ್ವಡಿ ಅವರು ಪಂಚಮರ ಮೇಲಿಟ್ಟಿದ್ದ ಕಾಳಜಿ, ಅವರು ಕೈಗೊಂಡ ಕ್ರಮಗಳು, ಅಯ್ಯರ್ ಅವರ ಮೇಲೆ ಇಟ್ಟಿದ್ದ ಪ್ರೀತಿ ಮತ್ತು ನಂಬಿಕೆ ಮನದಟ್ಟಾಗುತ್ತದೆ. ಇವರ ಪ್ರೇರಣೆಯಿಂದಲೇ ಮುಂದೆ ಮೈಸೂರು ಸಂಸ್ಥಾನದಲ್ಲಿ ಪಂಚಮರು ಶೈಕ್ಷಣಿಕ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಯಿತು.

ಹಳ್ಳಿಯಿಂದ ಕರೆದು ತಂದ ಪಂಚಮ ಹುಡುಗರನ್ನು ಸರ್ಕಾರಿ ಅಥವಾ ಖಾಸಗಿ ಶಾಲೆಗಳಿಗೆ ಸೇರಿಸಿ ವಿದ್ಯೆ ಕಲಿಯುವ ಅವಕಾಶವನ್ನು ಮಾಡಿಕೊಟ್ಟರು. ಆದರೆ ಶಾಲೆಗಳಲ್ಲಿ ಇತರೆ ಸವರ್ಣೀಯರೊಂದಿಗೆ ವಿದ್ಯೆ ಕಲಿಯಲು ಸಾಕಷ್ಟು ಸಾಮಾಜಿಕ ಪ್ರತಿರೋಧವಿತ್ತು. ಹೀಗೆ ವಿರೋಧಿಸುತ್ತಿದ್ದವರಲ್ಲಿ ಎಲ್ಲ ಸವರ್ಣೀಯ ಜಾತಿಯವರು ಸೇರಿರುತ್ತಿದ್ದರು. ಅದರಲ್ಲಿಯೂ ಬ್ರಾಹ್ಮಣರು ವಿಶೇಷವಾಗಿ ಅಸ್ಪೃಶ್ಯರೊಂದಿಗೆ ತಮ್ಮ ಮಕ್ಕಳು ವ್ಯಾಸಂಗ ಮಾಡುವುದನ್ನು ಸಹಿಸುತ್ತಿರಲಿಲ್ಲ. ಅವರ ಈ ಮನೋಭಾವನೆಗೆ ಶತಮಾನ ದಿಂದಲೂ ಅವರು ಬೆಳೆಸಿಕೊಂಡು ಬಂದಿದ್ದ ಪ್ರತ್ಯೇಕ ಸಾಂಸ್ಕೃತಿಕ ಆವರಣ ಮತ್ತು ಪಂಚಮರ ಬಗ್ಗೆ ಸಮಾಜ ಹೊಂದಿದ್ದ ಕೀಳು ಭಾವನೆಗಳು ಕಾರಣವಾಗಿದ್ದವು. ಈ ವಿಷಯವನ್ನು ಅಂದಿನ ದಿವಾನರಾಗಿದ್ದ ವಿಶ್ವೇಶ್ವರಯ್ಯ ಅವರ ಬಳಿ ಅಯ್ಯರ್ ಅವರು ಪ್ರಸ್ತಾಪಿಸಲಾಗಿ ಅಸ್ಪೃಶ್ಯರ ಏಳಿಗೆಯ ಬಗ್ಗೆ ಕಳಕಳಿ ಹೊಂದಿದ್ದ ದಿವಾನರು ೧೯೧೫ರಲ್ಲಿ ಸರ್ಕಾರಿ ಶಾಲೆಗಳಲ್ಲಿ ವಿದ್ಯೆ ಕಲಿಯುವುದಕ್ಕೆ ಯಾವುದೇ ಜಾತಿಯ ನಿರ್ಬಂಧವಿರಕೂಡದೆಂದು ಸುತ್ತೋಲೆಯನ್ನು ಹೊರಡಿಸಿದರು.[೩೭] ಇದು ಅಯ್ಯರ್ ಅವರಿಗೆ ಪಂಚಮರ ಮೇಲಿದ್ದ ಕಾಳಜಿ ಮತ್ತು ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರಬೇಕೆಂಬ ಹಂಬಲದ ಜೊತೆಗೆ ಮೈಸೂರು ಸರ್ಕಾರ ಅವರಿಗೆ ನೀಡಿದ ಎಲ್ಲ ಬಗೆಯ ಸಹಕಾರವು ಮತ್ತಷ್ಟು ಕಾರ್ಯಪ್ರವೃತ್ತರಾಗುವಂತೆ ಮಾಡಿತು.

ನರಸಿಂಹರಾಜ ವಿದ್ಯಾರ್ಥಿನಿಲಯದ ಸ್ಥಾಪನೆ

೧೯೨೩ರಲ್ಲಿ ಅಯ್ಯರ್ ಅವರು ಬೆಂಗಳೂರಿನಲ್ಲಿ ೧೨ ಜನ ವಿದ್ಯಾರ್ಥಿಗಳಿಗಾಗಿ ಯುವರಾಜರ ಒಪ್ಪಿಗೆ ಪಡೆದು ಪಂಚಮ ಬೋರ್ಡಿಂಗ್ ಹೋಂ ಅನ್ನು ಸ್ಥಾಪಿಸಿದರು.[೩೮] ಈ ವಿದ್ಯಾರ್ಥಿನಿಲಯವನ್ನು ಇಂದು ನರಸಿಂಹರಾಜ ಹಾಸ್ಟೆಲ್ ಎಂದು ಕರೆಯಲಾಗುತ್ತಿದೆ. ಇದು ಸಹ ಎಲ್ಲ ಬೋರ್ಡಿಂಗ್ ಹೋಂಗಳಂತೆ ಉಚಿತ ವಿದ್ಯಾರ್ಥಿನಿಲಯವಾಗಿದ್ದು, ೬೦ ರಿಂದ ೮೦ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಿಕೊಡಲಾಯಿತು.

ಸ್ಕೌಟ್ ಅಂಡ್ ಗೈಡ್ ಸ್ಥಾಪನೆ

ಸ್ವಾತಂತ್ರ್ಯ ಪೂರ್ವದಲ್ಲೇ ಅಯ್ಯರ್ ಅವರು ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಮನೋಭಾವನೆಯನ್ನು ಬೆಳೆಸುವ ಮತ್ತು ಆ ಮೂಲಕ ವಿದ್ಯಾರ್ಥಿಗಳಲ್ಲಿ ವಿಶಾಲ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲು ಮತ್ತು ಕ್ರೀಡಾಸಕ್ತಿಯನ್ನು ಉಂಟುಮಾಡುವ ಸಲುವಾಗಿ ತಾವು ಸ್ಥಾಪಿಸಿದ ನರಸಿಂಹರಾಜ ವಿದ್ಯಾರ್ಥಿನಿಲಯದಲ್ಲಿ ಸ್ಕೌಟ್ ಅಂಡ್ ಗೈಡ್ ಅನ್ನು ಸ್ಥಾಪಿಸಿದರು.[೩೯]

ಅನುದಾನಿತ ವಿದ್ಯಾರ್ಥಿನಿಲಯಗಳ ಸ್ಥಾಪನೆ

ಬೆಂಗಳೂರಿನ ಬಂಬು ಬಜಾರ್, ಮೈಸೂರಿನ ನಜರ್‌ಬಾದ್‌ಗಳಲ್ಲಿ ಆದಿ ಕರ್ನಾಟಕ ಅನುದಾನಿತ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಆಗಿನ ದಿವಾನರಾದಂತಹ ಸರ್.ಮಿರ್ಜಾಇಸ್ಮಾಯಿಲ್ ಅವರು ಅಯ್ಯರ್ ಅವರಿಗೆ ಅನುಮತಿಯನ್ನು ನೀಡಿದರು. ಹಾಗೆಯೇ ಬೆಂಗಳೂರಿನಲ್ಲಿ ಆದಿ ಜಾಂಬವ ವಿದ್ಯಾರ್ಥಿನಿಲಯದ ಸ್ಥಾಪನೆಯ ಜೊತೆಗೆ ೧೯೩೦ರಲ್ಲಿ ಮೈಸೂರು, ಮಂಡ್ಯ, ಹಾಸನ, ಮಳವಳ್ಳಿ, ಕೆ.ಜಿ.ಎಫ್, ಚಿತ್ರದುರ್ಗ ಮೊದಲಾದ ಸ್ಥಳಗಳಲ್ಲಿ ಸರ್ಕಾರದಿಂದ ಅನುದಾನ ಪಡೆದು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು.[೪೦] ಇದರಿಂದ ಸ್ಪಷ್ಟವಾಗಿ ತಿಳಿದುಬರುವ ಅಂಶವೆಂದರೆ ಅಯ್ಯರ್ ಅವರ ಸಹಕಾರದೊಂದಿಗೆ ಪಂಚಮ ವಿದ್ಯಾರ್ಥಿಗಳಿಗೆ ಶಿಕ್ಷಣದ ಅವಕಾಶವನ್ನು ಹೆಚ್ಚಿಸುವ ಕ್ರಮಗಳು ಸರ್ಕಾರದ ಮೂಲಕವೇ ನಡೆಯಿತು.

ಹಾಸನದ ವಿದ್ಯಾರ್ಥಿನಿಲಯದ ಸ್ಥಾಪನೆ

ಹಾಸನದ ವಿದ್ಯಾರ್ಥಿನಿಲಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಅಯ್ಯರ್ ಅವರ ಕೋರಿಕೆಯ ಮೇರೆಗೆ ಹಾಸನದ ಜಂಖಾನ ಮೈದಾನದಲ್ಲಿದ್ದ ವಿಕ್ಟೋರಿಯಾ ಸಭಾಂಗಣದಲ್ಲಿ ೪೦ ವಿದ್ಯಾರ್ಥಿಗಳಿಗಾಗಿ ಉಚಿತ ವಿದ್ಯಾರ್ಥಿನಿಲಯವೊಂದನ್ನು ತೆರೆಯಲಾಯಿತು.[೪೧]

ಸಾರ್ವಜನಿಕ ವಲಯದಲ್ಲಿ ಅದರಲ್ಲಿಯೂ ಪಂಚಮರ ಶೈಕ್ಷಣಿಕ ಅಭಿವೃದ್ಧಿಗೆ ನಿರಂತರವಾಗಿ ಸೃಜನಶೀಲ ಕ್ರಾಂತಿಯನ್ನು ಉಂಟುಮಾಡಿದವರೆಂದರೆ ಮಾನವತಾವಾದಿ ಆರ್.ಗೋಪಾಲಸ್ವಾಮಿ ಅಯ್ಯರ್ ಅವರಾಗಿದ್ದಾರೆ. ಇವರ ಸಾಮಾಜಿಕ ಚಟುವಟಿಕೆ ಜಡ್ಡುಗಟ್ಟಿದ ಅಸ್ಪೃಶ್ಯ ಸಮುದಾಯವನ್ನು ಚಲನಶೀಲ ಗೊಳಿಸಿದವು. ತುಳಿತಕ್ಕೊಳಗಾದ ಸಮುದಾಯ ಮೈಸೂರು ಸಂಸ್ಥಾನದಲ್ಲಿ ವಿಮೋಚನೆಯ ಸುಖ ಅನುಭವಿಸಿದ್ದು ಮತ್ತು ಇಂದು ಅನುಭವಿಸುತ್ತಿರುವುದು ಅಯ್ಯರ್ ಅವರ ಶ್ರಮದಿಂದಲೇ ಎಂದು ಹೇಳಬಹುದಾಗಿದೆ. ತನ್ನ ಸ್ವಾರ್ಥಕ್ಕಾಗಿ ಕಾಲವನ್ನು ಕಳೆಯದೇ ಬದುಕನ್ನು ಅಸ್ಪೃಶ್ಯ ಸಮುದಾಯದ ಶೈಕ್ಷಣಿಕ ಅಭಿವೃದ್ಧಿಗಾಗಿ ತಮ್ಮ ಕಾಲಮಾನವನ್ನೆಲ್ಲ ಚರಿತ್ರೆಯಾಗಿಸಿದ ಮಹಾನ್ ವ್ಯಕ್ತಿ ಗೋಪಾಲಸ್ವಾಮಿ ಅಯ್ಯರ್ ಅವರಾಗಿದ್ದಾರೆ.

ಕೊನೆ ಟಿಪ್ಪಣಿಗಳು

೧. ವಿರೂಪಾಕ್ಷಿ ಪೂಜಾರಹಳ್ಳಿ, ಆಧುನಿಕ ಕರ್ನಾಟಕದ ಚರಿತ್ರೆ ಮತ್ತು ದಲಿತರು, (ವಿರೂಪಾಕ್ಷಿ ಪೂಜಾರಹಳ್ಳಿ(ಸಂ), ದಲಿತರು ಮತ್ತು ಚರಿತ್ರೆ), ೨೦೦೫, ಪು.೧೪೧

೨. ಚಿನ್ನಸ್ವಾಮಿ ಸೋಸಲೆ ಎನ್., ಭಾರತೀಯ ಸಮಾಜ ಮತ್ತು ದಲಿತರು, ೨೦೦೮, ಪು.೫೮

೩. ನೀಲಕಂಠಸ್ವಾಮಿ ಮಾಂಬಳ್ಳಿ, ಬಾಬಾಸಾಹೇಬ್ ಅಂಬೇಡ್ಕರ್, ೨೦೦೧, ಪು.೧೬೫

೪. ಚಿನ್ನಸ್ವಾಮಿ ಸೋಸಲೆ ಎನ್., ಭಾರತೀಯ ಸಮಾಜ ಮತ್ತು ದಲಿತರು, ೨೦೦೮, ಪು.೪

೫. ಮ.ನ.ಜವರಯ್ಯ, ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ೧೯೯೫, ಪು.೧೬೩

೬. ಚಿನ್ನಸ್ವಾಮಿ ಸೋಸಲೆ ಎನ್., ಭಾರತೀಯ ಸಮಾಜ ಮತ್ತು ದಲಿತರು, ೨೦೦೮, ಪು.೭

೭. ಮ.ನ.ಜವರಯ್ಯ, ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ೧೯೯೫, ಪು.೧೧

೮. ವಿರೂಪಾಕ್ಷಿ ಪೂಜಾರಹಳ್ಳಿ, ಆಧುನಿಕ ಕರ್ನಾಟಕದ ಚರಿತ್ರೆ ಮತ್ತು ದಲಿತರು, (ವಿರೂಪಾಕ್ಷಿ ಪೂಜಾರಹಳ್ಳಿ (ಸಂ), ದಲಿತರು ಮತ್ತು ಚರಿತ್ರೆ), ೨೦೦೫, ಪು.೧೪೩

೯. ಆಶಾಬಾಬು ಯಂಕಪ್ಪಗೋಳ, ಬಾಗಲಕೋಟೆ ಜಿಲ್ಲೆಯ ದಲಿತ ಚಳವಳಿ : ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್ ನಿಬಂಧ, ೨೦೦೯, ಪು.೩೫.

೧೦. ಅದೇ, ಪು.೩೫

೧೧. ಚಿನ್ನಸ್ವಾಮಿ ಸೋಸಲೆ ಎನ್., ಭಾರತೀಯ ಸಮಾಜ ಮತ್ತು ದಲಿತರು, ೨೦೦೮, ಪು.೧೦

೧೨. ಮುರುಳೀಧರ ವೈ.ಜಿ., ದುರ್ಬಲ ವರ್ಗದವರಿಗೆ ಇರುವ ಸೌಲಭ್ಯಗಳು, ೨೦೦೯, ಪು.೧೪

೧೩. ನರೇಂದ್ರ ಕುಮಾರ್, ಹೊಸ ಸಮಾಜ ಮತ್ತು ಅಂಬೇಡ್ಕರ್, ೨೦೦೨, ಪು.೨೦

೧೪. ವಿಠ್ಠಲ ಮೂರ್ತಿ ಆರ್., ದಲಿತ ಚಳವಳಿಯ ನಾಳೆಗಳು, ೨೦೦೫, ಪು.೨೬

೧೫. ಅದೇ, ಪು.೨೭

೧೬. ಚಿನ್ನಸ್ವಾಮಿ ಸೋಸಲೆ ಎನ್., ಕರ್ನಾಟಕ ಚರಿತ್ರೆಯ ರಾಜಪ್ರಭುತ್ವ ಮತ್ತು ದಲಿತರು(ವಿರೂಪಾಕ್ಷಿ ಪೂಜಾರಹಳ್ಳಿ(ಸಂ), ದಲಿತರು ಮತ್ತು ಚರಿತ್ರೆ), ೨೦೦೫, ಪು.೧೧೭

೧೭. ಚಿನ್ನಸ್ವಾಮಿ ಸೋಸಲೆ ಎನ್., ನಾಲ್ವಡಿ ಕೃಷ್ಣನ ಮೈಸೂರು, (ಸಾಮಾಜಿಕ, ಶೈಕ್ಷಣಿಕ ಹಾಗೂ ಅಭಿವೃದ್ಧಿ ನೆಲೆಯ ಅಧ್ಯಯನ), ೨೦೦೫, ಪು.೪೬

೧೮. ಅದೇ, ಪು.೪೭

೧೯. ಸೂರ್ಯನಾಥ ಕಾಮತ್, ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ೧೯೭೩, ಪು.೨೪೫

೨೦. ಗೋವಿಂದರಾಜು ಸಿ.ಆರ್.(ಸಂ)., ಇತಿಹಾಸ, ೨೦೦೫, ಪು.೨೭೧

೨೧. ಚಿನ್ನಸ್ವಾಮಿ ಸೋಸಲೆ ಎನ್., ಆಧುನಿಕ ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ಸುಧಾರಣಾ ಕ್ರಮಗಳು, (ಲಕ್ಷ್ಮಣ್ ತೆಲಗಾವಿ(ಸಂ), ಚರಿತ್ರೆ ಅಧ್ಯಯನ, ಸಂಪುಟ ೧, ಸಂಚಿಕೆ ೧), ೨೦೦೬, ಪು.೪೩

೨೨. ಚಿನ್ನಸ್ವಾಮಿ ಸೋಸಲೆ ಎನ್., ನಾಲ್ವಡಿ ಕೃಷ್ಣನ ಮೈಸೂರು, ೨೦೦೫, ಪು.೪೧

೨೩. ಚಿನ್ನಸ್ವಾಮಿ ಸೋಸಲೆ ಎನ್., ಆಧುನಿಕ ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ಸುಧಾರಣಾ ಕ್ರಮಗಳು, (ಲಕ್ಷ್ಮಣ್ ತೆಲಗಾವಿ (ಸಂ), ಚರಿತ್ರೆ ಅಧ್ಯಯನ, ಸಂಪುಟ ೧, ಸಂಚಿಕೆ ೧), ೨೦೦೬, ಪುಟ.೩೭

೨೪. ಅದೇ, ಪು.೩೮

೨೫. ಅದೇ, ಪು.೩೯

೨೬. ಚಿನ್ನಸ್ವಾಮಿ ಸೋಸಲೆ ಎನ್., ಕರ್ನಾಟಕ ಚರಿತ್ರೆ ರಾಜಪ್ರಭುತ್ವ ಮತ್ತು ದಲಿತರು(ವಿರೂಪಾಕ್ಷಿ ಪೂಜಾರಹಳ್ಳಿ (ಸಂ), ದಲಿತರು ಮತ್ತು ಚರಿತ್ರೆ), ೨೦೦೫, ಪು.೧೨೭

೨೭. ಅದೇ, ಪು.೧೨೭

೨೮. ಅದೇ, ಪು.೧೨೮

೨೯. ಚಿನ್ನಸ್ವಾಮಿ ಸೋಸಲೆ ಎನ್., ಪ್ರಭುತ್ವ ಮತ್ತು ದಲಿತರು, ೨೦೦೬, ಪು.೫೯

೩೦. ಅದೇ, ಪು.೬೦

೩೧. ಚಿನ್ನಸ್ವಾಮಿ ಸೋಸಲೆ ಎನ್., ನಾಲ್ವಡಿ ಕೃಷ್ಣನ ಮೈಸೂರು, ೨೦೦೫, ಪು.೪೯

೩೨. ಅದೇ, ಪು.೪೯

೩೩. ಪೋತೆ ಎಚ್.ಟಿ., ದಲಿತಾಂತರಂಗ, ೨೦೦೪, ಪು.೨೪

೩೪. ಉಮಾ ಮಹೇಶ್ವರ ಬಿ.ಎಸ್., ಕರ್ನಾಟಕದ ಇತಿಹಾಸ, ೨೦೦೨, ಪು.೧೦೪

೩೫. ಸ್ವಾಮಿ ಕೆ.ಎಸ್., ಪಂಚಮರ ಆರ್ .ಗೋಪಾಲಸ್ವಾಮಿ ಅಯ್ಯರ್ : ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್ ನಿಬಂಧ, ೨೦೦೮, ಪು.೪೪

೩೬. ಅದೇ, ಪು.೪೬

೩೭. ಅದೇ, ಪು.೪೭

೩೮. ಅದೇ, ಪು.೪೮

೩೯. ಅದೇ, ಪು.೫೦

೪೦. ಅದೇ, ಪು.೫೬

೪೧. ಅದೇ, ಪು.೫೬

ಅಧ್ಯಾಯ ನಾಲ್ಕು

ಸಾಧನೆಯ ಹಾದಿಯಲ್ಲಿ ಗಂಗಾಧರಯ್ಯ

೪

ಸಾಧನೆಯ ಹಾದಿಯಲ್ಲಿ ಗಂಗಾಧರಯ್ಯ

ಮೈಸೂರು ಸಂಸ್ಥಾನವು ೧೩೩೪ರಲ್ಲಿ ಸ್ಥಾಪನೆಯಾಗಿ ಭಾರತಕ್ಕೆ ಬ್ರಿಟಿಷರಿಂದ ಸ್ವಾತಂತ್ರ್ಯ ಬರುವವರೆಗೂ ಆಳ್ವಿಕೆ ನಡೆಸಿದರೂ ಸಹ ಸಾಮಾಜಿಕ ಬೆಳವಣಿಗೆಯ ಹಿತದೃಷ್ಟಿಯಿಂದ ೧೮೯೪ರಿಂದ ೧೯೪೦ರವರೆಗೆ ಸುಮಾರು ೪೬ ವರ್ಷಗಳ ಸುದೀರ್ಘ ಆಡಳಿತ ನಡೆಸಿದ ದಲಿತರ ಬಂಧು ಎಂದೇ ಹೆಸರಾಗಿರುವ ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆ ಕಾಲವನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡುವ ಕಾಲವೆಂದೇ ಹೇಳಬಹುದು. ಶತಶತಮಾನಗಳಿಂದಲೂ ಪಶುಗಳಿಗಿಂತ ಹೀನಾಯವಾಗಿ ಕಡೆಗಣಿಸಲಾಗಿದ್ದಂತಹ ದಲಿತರ ಪುನಶ್ಚೇತನದ ದೃಷ್ಟಿಯಿಂದ ಇದು ತುಂಬ ಮಹತ್ವದ ಕಾಲವಾಗಿದೆ. ಅಸ್ಪೃಶ್ಯರ ಸಮಸ್ಯೆಯನ್ನು ಬಗೆಹರಿಸುವ ದಿಶೆಯಲ್ಲಿ ಸರ್ಕಾರ ಕೆಲವು ಕ್ರಮಗಳನ್ನು ಕೈಗೊಂಡಿದ್ದನ್ನು ಕಾಣಬಹುದಾಗಿದೆ. ಸರ್ಕಾರದ ವಿರುದ್ಧ ಎಲ್ಲ ಬಲಾಢ್ಯ ಜಾತಿಯವರು ನಿಂತ ಸನ್ನಿವೇಶದಲ್ಲಿ ಸರ್ಕಾರವು ಕೆಲವು ಕ್ರಮಗಳನ್ನು ಕೈಗೊಂಡು ಅಸ್ಪೃಶ್ಯರನ್ನು ಬಹು ವಿಧದ ಶೋಷಣೆಯಿಂದ ಪಾರು ಮಾಡಲು ಪ್ರಯತ್ನಿಸಿತು. ಏಕೆಂದರೆ ದಲಿತರ ಸಮಸ್ಯೆ ಎಲ್ಲ ಸಮಸ್ಯೆಗಳಿಗಿಂತಲೂ ಅತ್ಯಂತ ಕಠಿಣವಾದ ಸಮಸ್ಯೆಯಾಗಿತ್ತು. ಅಧಿಕಾರಶಾಹಿಗಳ ದಬ್ಬಾಳಿಕೆ ಹಾಗೂ ಕುತಂತ್ರದ ವಿರುದ್ಧ ಅವರು ಪ್ರಶ್ನಿಸುವ ಪ್ರಯತ್ನದಲ್ಲಿದ್ದರು. ಸಹಸ್ರಾರು ವರ್ಷಗಳಿಂದ ತಮ್ಮ ಕೀಳು ವ್ಯಕ್ತಿತ್ವಗಳನ್ನು ಮೂಕವಾಗಿ ಪಾಲಿಸಿಕೊಂಡು ಬರುತ್ತಿದ್ದಂತಹ ಲಕ್ಷಾಂತರ ಜನರ ಧ್ವನಿ ಮೆಲ್ಲ ಮೆಲ್ಲಗೆ ಪುಟಿಯತೊಡಗಿತು. ನಾಲ್ವಡಿ ಕೃಷ್ಣರಾಜ ಒಡೆಯರ ಕೆಲವು ಸುಧಾರಣಾ ಕ್ರಮಗಳು ದಲಿತರನ್ನು ಸವರ್ಣೀಯರ ಕ್ರೂರ ಮತ್ತು ಅಸಮರ್ಥನೀಯ ರೂಢಿ ಪರಂಪರೆಗಳಿಂದ ಎದ್ದು ಬರಲು ಪ್ರಯತ್ನಿಸುವಂತೆ ಮಾಡಿತು. ಆದರೆ ಈ ನತದೃಷ್ಟ ಪ್ರಾಣಿಗಳಿಗೆ ಅದು ಯಾವಾಗಲೂ ನಿರಾಶೆಯ ಕರಾಳ ಸನ್ನಿವೇಶ ಆಗಿರುತ್ತಿತ್ತು. ಏಕೆಂದರೆ ಅವರ ಕೂಗಿಗೆ ಸರ್ಕಾರ ಸ್ಪಂದಿಸಿದರೂ ಸಹ ಸವರ್ಣೀಯರ ದಬ್ಬಾಳಿಕೆಯನ್ನು ಸವಲಾಗಿ ತೆಗೆದುಕೊಂಡು ಸರ್ಕಾರ ಈ ಜನರ ಅಭಿವೃದ್ಧಿ ಕಾರ್ಯ ಮಾಡುವ ಧೈರ್ಯ ಮಾಡುತ್ತಿರಲಿಲ್ಲ. ಗಂಗಾಧರಯ್ಯ ಅವರ ಕಾಲದಲ್ಲೂ ದಲಿತರ ಸ್ಥಿತಿಗತಿಗಳು ಹೀಗೆ ಮುಂದುವರಿದವು. ಅವರು ವಿವಿಧ ಸ್ಥಳಗಳಲ್ಲಿ ವ್ಯಾಸಂಗ ಮಾಡಿದ್ದರಿಂದಾಗಿ ಮತ್ತು ಕಲಾಶಿಕ್ಷಕ ಹುದ್ದೆಯಲ್ಲಿ

ಕಾರ್ಯನಿರ್ವಹಿಸಿದ್ದರಿಂದಾಗಿ ದಲಿತರ ಸ್ಥಿತಿಗತಿಗಳು ಅರಿವಾಗಿದ್ದವು. ಹಾಗಾಗಿ ತಾನು ಕಲಾಶಿಕ್ಷಕ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿದರೆ, ರಾಜಕೀಯದಲ್ಲಿ ಮುಂದುವರೆದರೆ ದಲಿತರನ್ನು ಅಜ್ಞಾನ, ಮೂಢನಂಬಿಕೆಗಳಿಂದ ಹೊರತರುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ತಿಳಿದ ಅವರು ತಮ್ಮ ಹುದ್ದೆಗೆ ರಾಜೀನಾಮೆಯನ್ನು ನೀಡಿದರು. ದಲಿತರಿಗಷ್ಟೇ ಅಲ್ಲದೆ ಎಲ್ಲ ವರ್ಗದವರಿಗೂ ಶಿಕ್ಷಣದ ಸೌಲಭ್ಯಗಳನ್ನು ಒದಗಿಸಿಕೊಡುವುದರ ಮೂಲಕ ಸಮಾಜ ಸೇವೆಯನ್ನು ಮಾಡಲು ಪ್ರಾರಂಭಿಸಿದರು.

೪.೧. ಸಮಾಜ ಸುಧಾರಣೆ

ಗಂಗಾಧರಯ್ಯ ಅವರು ಡಿಪ್ಲೊಮೊ ಪದವಿಯನ್ನು ಮುಗಿಸಿದ ಸಂದರ್ಭದಲ್ಲಿಯೇ ಸಮಾಜ ಸುಧಾರಣೆ ಕಾರ್ಯದಲ್ಲಿ ತೊಡಗಿದ್ದರು. ಅಂದು ಕರ್ನಾಟಕದ ಬೀದರ್ ಮತ್ತು ಕಲ್ಬುರ್ಗಿ ಜಿಲ್ಲೆಗಳು ಹೈದರಾಬಾದಿನ ನಿಜಾಂ ಸಂಸ್ಥಾನಕ್ಕೆ ಸೇರಿದ್ದವು. ಈ ಜಿಲ್ಲಾ ಪ್ರದೇಶದಲ್ಲಿದ್ದ ಕೋಡ್ಲಾ ಸಂಸ್ಥಾನದ ಉರಿಲಿಂಗಪೆದ್ದಿ ಮಠದ ಆಗಿನ ಪೀಠಾಧಿಕಾರಿಯಾಗಿದ್ದ ಶ್ರೀ ಶಿವಯೋಗಿ ಸ್ವಾಮೀಜಿಗಳು ಮೈಸೂರಿನ ಗಾಂಧಿನಗರದಲ್ಲಿ ವಾಸವಾಗಿದ್ದರು.[೧]

ಗಂಗಾಧರಯ್ಯ ಅವರು ಮೈಸೂರಿನಲ್ಲಿದ್ದ ಶಿವಯೋಗಿ ಸ್ವಾಮೀಜಿಗಳನ್ನು ಭೇಟಿಯಾದರು. ಅವರು ತಮ್ಮ ಜನಾಂಗದಲ್ಲಿರುವ ಮೂಢನಂಬಿಕೆ, ಕೀಳರಿಮೆ, ಮಾಂಸವನ್ನು ತಿನ್ನುವುದು, ಮದ್ಯಪಾನ ಮಾಡುವುದು ಮತ್ತಿತರ ದುಶ್ಚಟಗಳನ್ನು ಶಿವಯೋಗಿ ಸ್ವಾಮೀಜಿಗಳಿಗೆ ತಿಳಿಸಿದರು. ಇಂತಹ ದುಶ್ಚಟಗಳಿಂದ ತಮ್ಮ ಜನಾಂಗ ಹೊರಬರುವಂತೆ ಮಾಡಲು ತಮ್ಮ ಅಗತ್ಯವಿದೆ ಎಂದು ತಿಳಿಸಿದರು.[೨] ಗಂಗಾಧರಯ್ಯ ಅವರ ಕೋರಿಕೆಯಂತೆಯೇ ಶಿವಯೋಗಿ ಸ್ವಾಮೀಜಿ ಅವರು ಮಂಡ್ಯ, ಮೈಸೂರು ಮತ್ತು ತುಮಕೂರು ಜಿಲ್ಲೆಗಳ ಹಳ್ಳಿಗಳಲ್ಲಿ ಗಂಗಾಧರಯ್ಯ ಅವರೊಂದಿಗೆ ಸಂಚರಿಸಿ ಜನರನ್ನುದ್ದೇಶಿಸಿ ಉಪನ್ಯಾಸಗಳನ್ನು ನೀಡಿದರು. ಈ ಸಂದರ್ಭದಲ್ಲಿ ಶಿವಯೋಗಿ ಸ್ವಾಮೀಜಿ ಮತ್ತು ಗಂಗಾಧರಯ್ಯ ಅವರೊಂದಿಗೆ ಅನೇಕ ಜನ ಸ್ಥಳೀಯ ಮುಖಂಡರು ಸಹಕರಿಸಿದರು. ಸ್ವಾಮೀಜಿ ಅವರು ಮಾಂಸ ತಿನ್ನುವ, ಮದ್ಯಪಾನ ಮಾಡುವ ದುಶ್ಚಟಗಳನ್ನು ಬಿಡುವಂತೆ ದಲಿತರಲ್ಲಿ ವಿನಂತಿಸಿಕೊಂಡರು. ಅಲ್ಲದೆ ಮೂಢನಂಬಿಕೆಗಳ ವಿರುದ್ಧ ತಿಳುವಳಿಕೆ ಬೆಳೆಸಿಕೊಳ್ಳಲು ಕರೆ ನೀಡಿದರು. ಈ ರೀತಿ ದಲಿತರಿಗೆ ತಿಳುವಳಿಕೆ ನೀಡುವುದರಿಂದ, ಅವರನ್ನು ಸ್ವಲ್ಪ ಪ್ರಮಾಣದಲ್ಲಿಯಾದರೂ ದುಶ್ಚಟಗಳಿಂದ ಮತ್ತು ಮೂಢನಂಬಿಕೆಗಳಿಂದ ಹೊರತರಬಹುದೆಂಬುದು ಗಂಗಾಧರಯ್ಯ ಅವರ ಚಿಂತನೆಯಾಗಿತ್ತು.

ಗಂಗಾಧರಯ್ಯ ಅವರು ಮೈಸೂರಿನ ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿಯೇ 'ಯುವಕ ಸಂಘ'ವನ್ನು ಸ್ಥಾಪಿಸಿದರು. ಈ ಯುವಕ ಸಂಘದ ಕಛೇರಿ ಮೈಸೂರಿನ ಜಲಪುರಿಯಲ್ಲಿತ್ತು.[೩] ಈ ಸಂಘದ ಮುಖ್ಯ ಹೊಣೆಗಾರಿಕೆಗಳನ್ನು ಗಂಗಾಧರಯ್ಯ ಅವರೇ ನಿರ್ವಹಿಸುತ್ತಿದ್ದರು. ಅನೇಕ

ಯುವಕರು ಈ ಸಂಘದ ಸದಸ್ಯರಾಗಿದ್ದರು. ಅಸ್ಪೃಶ್ಯತೆ ಮತ್ತು ಮೂಢನಂಬಿಕೆಗಳ ವಿರುದ್ಧ ಹೋರಾಟ, ಅಕ್ಷರ ಕಲಿಸುವ ಮತ್ತು ದುರ್ಬಲರನ್ನು ರಕ್ಷಿಸುವಂತಹ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಯುವಕ ಸಂಘ ಸಮಾಜಸುಧಾರಣೆಯ ಕಾರ್ಯದಲ್ಲಿ ತೊಡಗಿತು. ಶಿವಯೋಗಿ ಸ್ವಾಮೀಜಿಗಳವರ ಆದರ್ಶ ಮತ್ತು ಮಾರ್ಗದರ್ಶನದಂತೆಯೇ ಉಪನ್ಯಾಸ ಏರ್ಪಡಿಸುತ್ತ ಮದುವೆಯ ಸಂದರ್ಭಗಳಲ್ಲಿನ ಪ್ರಾಣಿಬಲಿಯನ್ನು ತೊಡೆದುಹಾಕುವಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾದರೆಂದು ಹೇಳಬಹುದು.

ಯುವಕ ಸಂಘದ ಕಾರ್ಯಕ್ರಮಗಳು ಕ್ರಮೇಣ ವ್ಯಾಪಕವಾಗಿ ಗಮನ ಸೆಳೆಯಿತು. ಮೈಸೂರಿನ ಒಡೆಯರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಗಮನಕ್ಕೂ ಸಂಘದ ಚಟುವಟಿಕೆಗಳು ಬರತೊಡಗಿದವು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಈ ಯುವಕ ಸಂಘಕ್ಕೆ ಸಹಾಯ ಮಾಡುವ ಮುನ್ನವೇ ಮರಣ ಹೊಂದಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುಣ್ಯತಿಥಿಯ ಆಚರಣೆ ಸಂದರ್ಭದಲ್ಲಿ ಬಡವರಿಗೆಲ್ಲ ಅನ್ನಸಂತರ್ಪಣೆ ಏರ್ಪಡಿಸಬೇಕಾದಾಗ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸೋದರ ಮಾವನವರಾದ, ಮೈಸೂರು ಮುನಿಸಿಪಾಲಿಟಿಯ ಅಧ್ಯಕ್ಷ ಎಫ್.ಸಿ.ದೇವರಾಜ ಅರಸರು ಈ ಯುವಕ ಸಂಘಕ್ಕೆ ಅನ್ನ ಸಂತರ್ಪಣೆಯ ಜವಾಬ್ದಾರಿಯನ್ನು ವಹಿಸಿದರು.[೪] ಅನ್ನಸಂತರ್ಪಣೆಯ ಖರ್ಚಿಗಾಗಿ ಇಪ್ಪತ್ತೈದು ಸಾವಿರ ರೂ.ಗಳನ್ನು ದೇವರಾಜ ಅರಸರು ಈ ಯುವಕ ಸಂಘಕ್ಕೆ ಮಂಜೂರು ಮಾಡಿಸಿದರು. ಅನ್ನಸಂತರ್ಪಣೆಯ ಕಾರ್ಯ ಮುಗಿದ ನಂತರ ಉಳಿದ ಎರಡೂವರೆ ಸಾವಿರ ರೂಪಾಯಿಗಳನ್ನು ಗಂಗಾಧರಯ್ಯ ಅವರು ಅರಮನೆಯ ಅಧಿಕಾರಿಗಳಿಗೆ ವಾಪಸ್ಸು ನೀಡಿದರು. ಈ ಒಂದು ನಿರ್ದಶನದಿಂದ ಹಣಕಾಸಿನ ವಿಷಯದಲ್ಲಿ ಅವರ ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ಗುರುತಿಸಬಹುದಾಗಿದೆ.

ಯುವಕಸಂಘದಲ್ಲೂ ಗಂಗಾಧರಯ್ಯ ಅವರು ಹೆಚ್ಚು ದಿನ ದುಡಿಯಲು ಸಾಧ್ಯವಾಗಲಿಲ್ಲ. ಕಾರಣ ಅವರು ಕಲಾಶಿಕ್ಷಕರಾಗಿ ನೇಮಕವಾದದ್ದು. ಅವರಿಗೆ ಕಲಾಶಿಕ್ಷಕ ಹುದ್ದೆ ಬಹಳ ಇಷ್ಟದ ಕೆಲಸವಾಗಿತ್ತು. ಯಾಕೆಂದರೆ ಅವರು ಕಲಿತದ್ದು ಮತ್ತು ಕಲಿಸಬೇಕಿರುವುದು ಎರಡೂ ಒಂದೇ ವಿಷಯವಾಗಿತ್ತು. ಹೀಗಾಗಿ ಯುವಕ ಸಂಘ ಮನಸ್ಸಿಲ್ಲದ ಮನಸ್ಸಿನಿಂದ ಗಂಗಾಧರಯ್ಯ ಅವರನ್ನು ಬೀಳ್ಕೊಟ್ಟಿತು. ಮುಂದೆ ಅವರು ಕಲಾಶಿಕ್ಷಕ ಹುದ್ದೆಯಲ್ಲಿಯೂ ಕೂಡ ಮುಂದುವರೆಯಲು ಸಾಧ್ಯವಾಗಲಿಲ್ಲ. ಹಾಗಾಗಿ ೧೯೪೨ರಲ್ಲಿ ಗಂಗಾಧರಯ್ಯ ಅವರು ತಮ್ಮ ಕಲಾಶಿಕ್ಷಕ ಹುದ್ದೆಗೆ ರಾಜೀನಾಮೆ ನೀಡಿದ ವರ್ಷದಿಂದಲೇ ಅವರು ಪೂರ್ಣ ಪ್ರಮಾಣದ ಸಮಾಜ ಸೇವಕರಾದರು. ತುಮಕೂರು ಜಿಲ್ಲೆಯ ಗೊಲ್ಲಹಳ್ಳಿ ಅವರ ಸಮಾಜ ಸೇವೆಯ ಕೇಂದ್ರ ಕಾರ್ಯಕ್ಷೇತ್ರವಾಯಿತು. ಅವರು ಮಹಾತ್ಮಗಾಂಧೀಜಿ, ಡಾ.ಅಂಬೇಡ್ಕರ್ ಅವರ ಕೃತಿಗಳನ್ನು ಅಧ್ಯಯನ ಮಾಡತೊಡಗಿದರು. ಆ ಮೂಲಕ ಶ್ರಮಜೀವಿಗಳನ್ನು,

ಮುಗ್ಧ ಜನರನ್ನು ಸಾಕ್ಷರರನ್ನಾಗಿಸುವ ಮತ್ತು ಮುಖ್ಯವಾಗಿ ಸಾಕ್ಷರ ಜನಾಂಗವೊಂದನ್ನು ನಿರ್ಮಿಸುವ ಅವರ ಸಾತ್ವಿಕ ಹೋರಾಟ ಪ್ರಾರಂಭವಾಯಿತು. ಅಕ್ಷರ ಚಳವಳಿಯನ್ನು ಹೀಗೆ ಸದ್ದಿಲ್ಲದೆ ಪ್ರಾರಂಭಿಸಿದ್ದರು.

೧೯೪೨ರಲ್ಲಿ ಗಂಗಾಧರಯ್ಯ ಅವರು ದಲಿತ ವಿದ್ಯಾರ್ಥಿಗಳಿಗಾಗಿ, ಅವರ ಶಿಕ್ಷಣಕ್ಕೆ ಸಹಾಯಕ ವಾಗಲು 'ದಲಿತ ವಿದ್ಯಾರ್ಥಿನಿಲಯ' ಒಂದನ್ನು ಪ್ರಾರಂಭಿಸಿದರು. ಅವರು ಯಾವುದೇ ಸರ್ಕಾರಿ ಅನುದಾನಗಳಿಲ್ಲದೆ, ಶ್ರೀಮಂತರ ಕೃಪಾಶ್ರಯಗಳಿಲ್ಲದೆ ಕೇವಲ ಸಾಮಾಜಿಕ ಬದ್ಧತೆಯೊಂದನ್ನೇ ಆದರ್ಶವಾಗಿಟ್ಟುಕೊಂಡು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದರು. ಹಳ್ಳಿಹಳ್ಳಿಗೂ ಹೋಗಿ ತಮ್ಮ ಉದ್ದೇಶಗಳನ್ನು ಜನರಿಗೆ ತಿಳಿಸುತ್ತಾ, ಆ ಮೂಲಕ ಧವಸ ಧಾನ್ಯಗಳನ್ನು ಸಂಗ್ರಹಿಸಿ ವಿದ್ಯಾರ್ಥಿ ನಿಲಯದ ಅಗತ್ಯಗಳನ್ನು ಪೂರೈಸತೊಡಗಿದರೆಂದು ಸೌಭಾಗ್ಯಮ್ಮ ಅವರು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ತಿಳಿಸಿದ್ದಾರೆ.

ದಲಿತರ ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸುವುದಕ್ಕಿಂತ ಅದನ್ನು ನಿರಂತರವಾಗಿ ನಡೆಸಿಕೊಂಡು ಹೋಗುವುದೇ ಅವರಿಗೆ ಸವಾಲಾಗಿತ್ತು. ಆದ್ದರಿಂದಾಗಿ ಅವರು ತಾವು ಪ್ರಾರಂಭಿಸಿದ ವಿದ್ಯಾರ್ಥಿನಿಲಯಗಳನ್ನು ನಡೆಸಲು ಸಾವಿರಾರು ಹಳ್ಳಿಗಳಿಗೆ, ನೂರಾರು ಮೈಲಿಗಳ ಪಾದಯಾತ್ರೆ ನಡೆಸಿದರು. ಧವಸ, ಧಾನ್ಯ ಇತ್ಯಾದಿಗಳನ್ನು ಹಳ್ಳಿಗಳಲ್ಲಿ ಸಂಗ್ರಹಿಸಿ, ವಿದ್ಯಾರ್ಥಿನಿಲಯದ ಅಗತ್ಯಗಳನ್ನು ಪೂರೈಸುವುದರ ಮೂಲಕ ವಿದ್ಯಾರ್ಥಿಗಳನ್ನು ವಿದ್ಯಾವಂತರನ್ನಾಗಿಸಲು ಶ್ರಮಿಸಿದ್ದಾರೆಂದು ವೈಯಕ್ತಿಕ ದಾಖಲೆಗಳು ತಿಳಿಸುತ್ತವೆ.

ಗಂಗಾಧರಯ್ಯ ಅವರು ಸ್ಥಾಪಿಸಿದ ಮೊದಲನೆಯ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಾಗಿದ್ದವರಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ವ್ಯವಸಾಯ ಮಂತ್ರಿಗಳಾಗಿ ಸೇವೆ ಸಲ್ಲಿಸಿದ ಕೆ.ಹೆಚ್.ರಂಗನಾಥ್ ಅವರೂ ಒಬ್ಬರು. ವಿದ್ಯಾರ್ಥಿನಿಲಯ ಗಟ್ಟಿ ನೆಲೆ ಪಡೆಯುತ್ತಿರುವಂತೆಯೇ ಸರ್ಕಾರದ ನೆರವಿನೊಂದಿಗೆ ತಿಪಟೂರು, ಮಧುಗಿರಿ ಮತ್ತು ಕುಣಿಗಲ್‌ಗಳಲ್ಲೂ ದಲಿತ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ, ಶಿಸ್ತುಬದ್ಧವಾಗಿ ನಡೆಸತೊಡಗಿದರು. ಈ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದಕ್ಕೆ ಮೊದಲೇ ೧೯೪೦ರಲ್ಲಿ ದಾವಣಗೆರೆಯಲ್ಲಿ ದಲಿತ ವಿದ್ಯಾರ್ಥಿಗಳಿಗಾಗಿ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದ್ದರು ಎಂಬುವುದು ಉಲ್ಲೇಖಾರ್ಹವಾಗಿದೆ.

ಹೀಗೆ ಸಮಾಜಸೇವಾ ಕಾರ್ಯ ಪ್ರಗತಿಪಥದಲ್ಲಿ ಸಾಗಿತು. ಅವರು ಮೂಢನಂಬಿಕೆ, ಅಂಧಾನುಕರಣೆ, ಅಜ್ಞಾನ, ಅನಕ್ಷರತೆ, ಮದ್ಯಪಾನ ಮುಂತಾದವುಗಳ ವಿರುದ್ಧ ಹೋರಾಡಿ ಸಾಕಷ್ಟು ಯಶಸ್ವಿಯಾದರು. ಹಾಗೆ ನೋಡಿದರೆ ಗಂಗಾಧರಯ್ಯ ಅವರು ಇದ್ದಾಗಲೂ, ಇಲ್ಲದಿದ್ದಾಗಲೂ ಸಮಾಜದಲ್ಲಿನ ಅನಿಷ್ಟ ಪದ್ಧತಿಗಳು ಇದ್ದೇ ಇವೆ. ಆದರೆ ಸಮಸ್ಯೆಗಳ ಮುಖಗಳು ಮತ್ತು ಪರಿಣಾಮಗಳು ಮಾತ್ರ

ಬೇರೆಯಾಗಿವೆ. ಇಷ್ಟಾದರೂ ಅವರು ಸಾಮಾನ್ಯ ಜನರ ಪಾಲಿಗೆ ನೈತಿಕ ಶಕ್ತಿಯಾಗಿದ್ದರು ಎಂಬುದನ್ನು ಒಪ್ಪಲೇಬೇಕು.

೪.೨. ರಾಜಕೀಯ ಪ್ರವೇಶ

ಸಮಾಜ ಸೇವಕರಾಗಿದ್ದ ಗಂಗಾಧರಯ್ಯ ಅವರು ರಾಜಕೀಯ ಕ್ಷೇತ್ರಕ್ಕೂ ಕಾಲಿರಿಸಿದರು. ಪ್ರಜಾಪಕ್ಷಕ್ಕೆ ಸೇರಿದ್ದ ಪ್ರಮುಖ ನಾಯಕರಾಗಿದ್ದಂತಹ ಹುಚ್ಚೇಗೌಡರು ನೀಡಿದ ಪ್ರೋತ್ಸಾಹವೇ ರಾಜಕೀಯ ಪ್ರವೇಶಿಸಲು ಪ್ರಮುಖ ಕಾರಣವಾಯಿತು. ಅವರು ರಾಜಕೀಯದಲ್ಲೂ ಒಂದೊಂದೆ ಮೆಟ್ಟಿಲನ್ನು ಏರುತ್ತಾ ಹೋದರು. ತಮ್ಮ ಕಲಾಶಿಕ್ಷಕ ಹುದ್ದೆಗೆ ರಾಜೀನಾಮೆ ನೀಡಿದ ಸಂದರ್ಭದಲ್ಲೇ ಮಾರ್ಕೋನಹಳ್ಳಿ ಜಲಾಶಯದ ಹಿಂಭಾಗದ ವಿದ್ಯಾವಂತ ನಿರುದ್ಯೋಗಿಗಳ ವ್ಯವಸಾಯದ ಕಾಲೋನಿಯಿಂದ ಚುನಾಯಿತರಾದರು. ತುಮಕೂರು ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿದ್ದ ಬಾಣಸಂದ್ರದ ಹುಚ್ಚೇಗೌಡರು ಗಂಗಾಧರಯ್ಯ ಅವರನ್ನು ಜಿಲ್ಲಾ ಬೋರ್ಡಿಗೆ ರೆವಿನ್ಯೂ ಸಚಿವರಾಗಿದ್ದ ಅಪ್ಪಾಜಿಗೌಡರಿಂದ ನಾಮಕರಣ ಮಾಡಿಸಿದರು.[೫] ಜಿಲ್ಲಾ ಬೋರ್ಡು ಸದಸ್ಯರಾಗಿ ಗಂಗಾಧರಯ್ಯ ಅವರು ಉತ್ತಮ ಸೇವೆ ಸಲ್ಲಿಸಿದರು.

೧೯೪೫ರಲ್ಲಿ ರಾಜ್ಯಾದ್ಯಂತ ನ್ಯಾಯವಿಧಾಯಕ ಸಭೆಗೆ ಚುನಾವಣೆಗಳು ನಡೆದವು. ಆ ಸಂದರ್ಭದಲ್ಲಿ ಮೈಸೂರಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರು ಕೆಲವು ರಾಜಕೀಯ ಸುಧಾರಣೆಗಳನ್ನು ಜಾರಿಗೆ ತಂದಿದ್ದರು. ಆ ರಾಜಕೀಯ ಸುಧಾರಣೆಗಳ ಪ್ರಕಾರ ನಾಲ್ಕು ನ್ಯಾಯ ವಿಧಾಯಕ ಸಭೆಯ ಸ್ಥಾನಗಳನ್ನು ಮೀಸಲು ಸ್ಥಾನಗಳನ್ನಾಗಿಸಿದ್ದರು. ಆ ನಾಲ್ಕರಲ್ಲಿ ಒಂದನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ಗುರುತಿಸಿದ್ದರು. ಚಿಕ್ಕಮಗಳೂರಿನ ಮೀಸಲು ಕ್ಷೇತ್ರದಿಂದ ಅವರು ಬಾಣಸಂದ್ರದ ಹುಚ್ಚೇಗೌಡರ ಹಾಗೂ ಪ್ರಜಾಪಕ್ಷದ ಬೆಂಬಲಿತ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧಿಸಿ, ಶಾಸನಸಭೆಗೆ ಆರಿಸಿ ಬಂದರು.[೬] ಕಾನೂನಿನ ಪ್ರಕಾರ ಆಯ್ಕೆಯಾದವರಿಗೆ ನಿಮ್ನ ವರ್ಗದವರ ಓಟುಗಳು ೧೦೦ಕ್ಕೆ ೨೫ರಂತೆಯೂ ಮತ್ತು ಸಾರ್ವಜನಿಕ ಓಟುಗಳು ೧೦೦ಕ್ಕೆ ೧೫ರಂತೆಯೂ ಬಂದಿರಲೇಬೇಕಿತ್ತು. ಗಂಗಾಧರಯ್ಯ ಅವರಿಗೆ ನಿಮ್ನ ವರ್ಗಗಳಿಂದ ೧೦೦ಕ್ಕೆ ೩೫ ಮತಗಳು, ಸಾರ್ವಜನಿಕ ವರ್ಗದಿಂದ ೧೦೦ಕ್ಕೆ ೨೫ ಮತಗಳು ಬಂದಿದ್ದವು. ಆದ್ದರಿಂದಾಗಿ ಗಂಗಾಧರಯ್ಯ ಅವರೇ ಆಯ್ಕೆಯಾದವರೆಂದು ಜಿಲ್ಲಾಧಿಕಾರಿಗಳು ಘೋಷಿಸಿದರು. ಅವರ ಪ್ರತಿಸ್ಪರ್ಧಿಗೆ ಸಾರ್ವಜನಿಕ ಮತಗಳು ೧೦೦ಕ್ಕೆ ೬೫ರಂತೆ ಬಂದಿದ್ದವಾದರೂ ನಿಮ್ನ ವರ್ಗದ ಮತಗಳೇ ಅತ್ಯಂತ ಕಡಿಮೆಯಾಗಿದ್ದವು. ಹೀಗಾಗಿ ಮೀಸಲು ಕ್ಷೇತ್ರದಿಂದ ಗಂಗಾಧರಯ್ಯ ಆಯ್ಕೆಯಾದರು.

ನ್ಯಾಯ ವಿಧಾಯಕ ಸಭೆಯ ಚುನಾವಣೆ ನಂತರ ನಡೆದ ಘಟನೆಯೊಂದು ಗಂಗಾಧರಯ್ಯ ಅವರಿಗೆ ಅಪಾರ ನೋವನ್ನು ಉಂಟುಮಾಡಿತು. ಚುನಾವಣೆ ನಡೆದು ಮೂರು ತಿಂಗಳಾದ ನಂತರ ಜಿಲ್ಲಾ

ಅಭಿವೃದ್ಧಿ ಸಮಿತಿಯ ಸಭೆಯನ್ನು ಶೃಂಗೇರಿಯಲ್ಲಿ ಕರೆಯಲಾಗಿತ್ತು. ತಮ್ಮ ಸ್ನೇಹಿತರಾದ ಬಾಣೂರು ಲಿಂಗಣ್ಣ ಅವರೊಂದಿಗೆ ಶೃಂಗೇರಿಗೆ ಹೋದರು. ಅವರಿಗೆ ಅತಿಥಿಗೃಹದಲ್ಲಿ ಸ್ಥಳ ಕಾದಿರಿಸಲಾಗಿದೆ ಎಂದು ತಿಳಿಸಲಾಗಿತ್ತು. ಆದರಂತೆ ಅತಿಥಿಗೃಹಕ್ಕೆ ಹೋದ ಸಂದರ್ಭದಲ್ಲಿ, ಅತಿಥಿಗೃಹದಲ್ಲಿ ಸ್ಥಳವಿಲ್ಲವೆಂದೂ, ನಿಮಗೆ ತಾಲ್ಲೂಕು ಕಚೇರಿಯಲ್ಲಿ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು. ಇದು ದಲಿತರಿಗೆ ಪ್ರತ್ಯೇಕವಾಗಿ ಕಾಯ್ದಿರಿಸಿದ ಸ್ಥಳವಾಗಿತ್ತು. ವಿಧಿಯಿಲ್ಲದೆ ತಾಲ್ಲೂಕು ಕಚೇರಿಯಲ್ಲಿ ಉಳಿಯಬೇಕಾಯಿತು.

ಮಾರನೆಯ ದಿನ ತುಂಗಾ ನದಿಯ ಆಚೆ ದಡದಲ್ಲಿ ಸಭೆ ನಡೆಯಿತು. ಆ ದಿನದ ಜಿಲ್ಲಾ ಅಭಿವೃದ್ಧಿ ಸಮಿತಿಯ ಮೊದಲನೆಯ ಸಭೆಯ ಅಧ್ಯಕ್ಷತೆಯನ್ನು ಆಲೂರು ಬಸಪ್ಪಶೆಟ್ಟರು ವಹಿಸಿದ್ದರು. ಅವರು ಚಿಕ್ಕಮಗಳೂರು ಜಿಲ್ಲೆಯ ಲೋಕಸಭಾ ಸದಸ್ಯರಾಗಿದ್ದರು.[೭] ಸಭೆಯಲ್ಲಿ ಗಂಗಾಧರಯ್ಯ ಎನ್ನುವವರೊಬ್ಬರು ಅಲ್ಲಿ ಇಲ್ಲವೇನೊ ಎಂಬಂತೆ ನಡೆಯಿತು. ಎಲ್ಲ ಶಾಸಕರನ್ನು ಅಲ್ಲಿ ಪರಿಚಯಿಸಲಾಯಿತಾದರೂ ಗಂಗಾಧರಯ್ಯ ಅವರ ಪ್ರಸ್ತಾಪವೇ ಬರಲಿಲ್ಲ. ಅವರನ್ನು ಮಾತನಾಡುವುದಕ್ಕೆ ಸಹ ಆಹ್ವಾನಿಸಲಿಲ್ಲ. ವಿಧಿಯಿಲ್ಲದೆ ಅವರನ್ನು ಆ ಸಭೆಗೆ ಕರೆದಂತಿತ್ತು. ಶಾಸಕನಾಗಿ ಆರಿಸಿ ಬಂದು, ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಲ್ಲಿ ಪಾಲ್ಗೊಳ್ಳಲು ತನಗೂ ಅಧಿಕಾರ, ಹಕ್ಕು ಮತ್ತು ಮುಖ್ಯವಾಗಿ ಕಾಳಜಿ ಇದ್ದರೂ ಸಭೆ ತನ್ನನ್ನು ಸೋಕಿಸಿಕೊಳ್ಳದೆಯೇ ನಡೆಯಿತಲ್ಲ ಎಂಬುದು ಗಂಗಾಧರಯ್ಯ ಅವರಲ್ಲಿ ಅತೀವ ನೋವನ್ನು ಉಂಟುಮಾಡಿತ್ತು.

ಸಭೆ ಮುಕ್ತಾಯವಾಗುತ್ತಾ ಬಂದಂತೆ ಗಂಗಾಧರಯ್ಯ ಅವರ ಸ್ನೇಹಿತರಾದ ಲಿಂಗಣ್ಣ ಅವರ ಮನವಿಯಂತೆ ಅಧ್ಯಕ್ಷರು ಅವರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟರು. ಗಂಗಾಧರಯ್ಯ ವೇದಿಕೆಯ ಬಳಿ ಬಂದು ಮಾತನಾಡುತ್ತಾ "ನಾನು ಈ ಕ್ಷೇತ್ರ ಆದಿಶಂಕರರು ಸ್ಥಾಪಿಸಿದ್ದು ಎಂದು ಕೇಳಿ ಬಂದೆ. ಈಗ ಕಾರ್ಯಕ್ರಮದ ಪಟ್ಟಿಯ ಪ್ರಕಾರ ಎಲ್ಲವೂ ಮುಗಿದಿದೆ. ಆದರೂ ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿರುವುದರಿಂದ ಎರಡು ಮಾತನಾಡುತ್ತೇನೆ. ಈ ಕ್ಷೇತ್ರ ಋಷ್ಯಶೃಂಗರ ಆಶ್ರಮವಾಗಿದ್ದು ಇಲ್ಲಿ ವೈರಮೃಗಗಳು ಸ್ನೇಹದಿಂದ ಜೀವಿಸುತ್ತಿದ್ದುದನ್ನು ಕಂಡು ಆದಿಶಂಕರರು ತಮ್ಮ ಶಾರದಾ ಪೀಠವನ್ನು ಇಲ್ಲಿ ಸ್ಥಾಪಿಸಿದರೆಂದು ಪುರಾಣಗಳ ಮೂಲಕ ಓದಿ ಬಲ್ಲೆ. ಆದರೆ ಆದಿಶಂಕರರು ಇಂದು ಇಲ್ಲಿ ಇದ್ದಿದ್ದರೆ ನಾನು ಅವರಿಗೆ ಇಂತಹ ನರಕಗಳನ್ನು ದಯವಿಟ್ಟು ಸ್ಥಾಪಿಸಬೇಡಿ ಎಂದು ಪ್ರಾರ್ಥಿಸುತ್ತಿದ್ದೆ. ಯಾಕೆಂದರೆ ನರಕಯಾತನೆಯನ್ನು ನಾನು ಇಂದಿಲ್ಲಿ ಅನುಭವಿಸಿಬಿಟ್ಟೆ, ನಾನಿಂದು ಆದಿಶಂಕರರನ್ನು ಮನುಷ್ಯ ಮಾತ್ರರಾದವರೆಲ್ಲರಿಗೂ ಆತ್ಮಗಳಿದೆಯೋ ಇಲ್ಲವೋ, ಇದ್ದರೆ ಅಸ್ಪೃಶ್ಯತೆಯ ನರಕಗಳನ್ನು ಸ್ಥಾಪಿಸಬೇಡಿ ಎಂದೂ ಹೇಳಲೇ ಬೇಕಿತ್ತು"[೮] ಎಂದು ಹೇಳುತ್ತಾ ತಮ್ಮ ಪ್ರತಿಭಟನೆಯನ್ನು ಸಮರ್ಥವಾಗಿ ಸಭಿಕರೆದುರೇ ಅವರು ವ್ಯಕ್ತಪಡಿಸಿದರು. ಈ ಒಂದು ಘಟನೆ ಗಂಗಾಧರಯ್ಯ ಅವರಿಗೆ ಆಳವಾದ ನೋವನ್ನು ಉಂಟುಮಾಡಿತ್ತು.

ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್‌ನ ಸದಸ್ಯರಾಗಿ ಗಂಗಾಧರಯ್ಯ ಮೂರು ವರ್ಷಗಳ ಕಾಲ ದುಡಿದರು. ಈ ಅವಧಿಯಲ್ಲಿ ಅವರು ಕೆಲವು ಕೃಷಿ ಕಾಲೊನಿಗಳನ್ನು ಸ್ಥಾಪಿಸಿದರು. ಮಾಗಡಿ ತಾಲ್ಲೂಕು ಹುಲುವೇನಹಳ್ಳಿಯ ದಲಿತರ ಏಳಿಗೆಗಾಗಿ ಜಮೀನು ಮಂಜೂರು ಮಾಡಿಸಿ, ಅದರಲ್ಲಿ ಕಾಲೊನಿ ಮಾಡಲಾಯಿತು. ಹಾಗೆಯೆ ಶಿರಾ ತಾಲ್ಲೂಕಿನ ಮೇಕರಳ್ಳಿ ಗ್ರಾಮದ ದಲಿತರಿಗೆ ಅಮೃತ ಮಹಲ್ ಕಾಲೊನಿಯಲ್ಲಿ ಜಮೀನು ಕೊಡಿಸಲಾಯಿತು. ಕುಣಿಗಲ್ ತಾಲ್ಲೂಕು ಗೌಡಗೆರೆಯ ದಲಿತರಿಗೆ ಹೆಚ್ಚು ಆಹಾರ ಬೆಳೆಯುವ ಯೋಜನೆಯಡಿಯಲ್ಲಿ ಜಮೀನು ಕೊಡಿಸಲಾಯಿತು. ಕುಣಿಗಲ್ ತಾಲ್ಲೂಕು ಬೆನವಾರ ಗ್ರಾಮದಲ್ಲಿ ಮನೆ ನಿವೇಶನಗಳಿಗಾಗಿ ಜಮೀನು ಅಕ್ವೈರ್ ಮಾಡಿಸಿ ನಿವೇಶನಗಳನ್ನು ಹಂಚಲಾಯಿತು. ಅಲ್ಲದೆ ಅಲ್ಲಿನ ದಲಿತರಿಗೆ ಮನೆ ಕಟ್ಟಿಕೊಳ್ಳಲು ಬೇಕಾದ ಸೌಲಭ್ಯವನ್ನು ಒದಗಿಸಿಕೊಡಲಾಯಿತು. ಈ ಸಂದರ್ಭದಲ್ಲಿ ತುಮಕೂರು ಸಬ್ ಡಿವಿಜನ್‌ಗೆ ಸೋಸಲೆ ಬಿ.ರಾಚಪ್ಪ ಅವರು ಅಸಿಸ್ಟೆಂಟ್ ಕಮೀಷನರ್ ಆಗಿದ್ದರು.[೯]

೧೯೫೬ರಲ್ಲಿ ಗಂಗಾಧರಯ್ಯ ಅವರು ಶಾಸಕರಾಗಿ ಒಂದು ವರ್ಷವಷ್ಟೇ ಕಳೆದಿತ್ತು. ಆ ವರ್ಷವೇ ಅವರ ತಂದೆ ಮರಿಯಪ್ಪ ಮರಣ ಹೊಂದಿದರು. ತಂದೆಯ ಮರಣದ ದುಃಖದ ನಡುವೆಯೂ ತಮ್ಮ ಸಮಾಜ ಸೇವೆಯನ್ನು ಮುಂದುವರೆಸಿದರು. ತುಮಕೂರಿನ ಸಬ್ ಡಿವಿಜನ್‌ಗೆ ಸೋಸಲೆ ಬಿ.ರಾಚಪ್ಪ ಅವರ ಬದಲಿಗೆ ಅಸಿಸ್ಟೆಂಟ್ ಕಮೀಷನರ್ ಆಗಿ ತಿಪ್ಪಯ್ಯ ಅವರು ಬಂದರು. ಅವರು ಬಂದ ನಂತರ ತುಮಕೂರು ತಾಲ್ಲೂಕಿನ ಕೊತ್ತಿಹಳ್ಳಿಯ ದಲಿತರಿಗೆ ನಿವೇಶನ, ಸಿದ್ಧಾರ್ಥನಗರದ ದಲಿತರಿಗೆ ಮನೆಗಳನ್ನು ಕಟ್ಟಿಸಿಕೊಟ್ಟರು. ಕೆಲವರಿಗೆ ಜಮೀನು ಮಂಜೂರು ಮಾಡಿಸಿದರು. ಎಡೆಯೂರು ಹೋಬಳಿ ಕೊಪ್ಪ ಗ್ರಾಮದ ದಲಿತರಿಗೆ ವಜಾ ಆಗಿದ್ದ ಜಮೀನನ್ನು ರೆವಿನ್ಯೂ ಸಚಿವರ ಮೂಲಕ ಉಳಿಸಿಕೊಟ್ಟರು. ತುಮಕೂರು ತಾಲ್ಲೂಕು ಮಲ್ಲಸಂದ್ರದ ದಲಿತರಿಗೆ ಅರಣ್ಯ ಇಲಾಖೆಯಿಂದ ಜಮೀನನ್ನು ಬಿಡುಗಡೆ ಮಾಡಿಸಿ ವ್ಯವಸಾಯಕ್ಕೆ ಹಂಚಿದರು.[೧೦] ಹೀಗೆ ಗಂಗಾಧರಯ್ಯ ಅವರು ನಿರ್ಗತಿಕರಾಗಿದ್ದ ದಲಿತರಿಗೆ ಭೂಮಿಯನ್ನು ಕೊಡಿಸುವುದರ ಮೂಲಕ ಒಂದು ಹೊಸ ಬದುಕನ್ನು ಕಲ್ಪಿಸಿಕೊಟ್ಟರು. ಈ ರೀತಿಯಾಗಿ ಗಂಗಾಧರಯ್ಯ ಅವರು ದಲಿತರನ್ನು ಆರ್ಥಿಕವಾಗಿ ಚೈತನ್ಯಗೊಳಿಸಲು ಪ್ರಯತ್ನಿಸಿದ್ದು ಗಮನಾರ್ಹವಾದ ಸಂಗತಿಯಾಗಿದೆ.

ಗಂಗಾಧರಯ್ಯ ಅವರ ರಾಜಕೀಯ ಗುರುಗಳಾದ ಹುಚ್ಚೇಗೌಡರು ಗಂಗಾಧರಯ್ಯ ಅವರನ್ನು ಆಗಿನ ಮೈಸೂರು ಸಂಸ್ಥಾನದ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕೆಂಗಲ್ ಹನುಮಂತಯ್ಯ ಅವರಿಗೆ ಪರಿಚಯಿಸಿದರು. ಗಂಗಾಧರಯ್ಯ ಅವರ ನಿಸ್ವಾರ್ಥಪರತೆ ಮತ್ತು ಸಮಾಜ ಸೇವೆಯಲ್ಲಿನ ಕಾಳಜಿಯನ್ನು ಗುರುತಿಸಿದ ಕೆಂಗಲ್ ಹನುಮಂತಯ್ಯ ಅವರು ೧೯೫೮ರಲ್ಲಿ ವಿಧಾನಪರಿಷತ್ತಿಗೆ ನಾಮಕರಣ ಮಾಡಿದರು.[೧೧] ಚಿಕ್ಕಮಗಳೂರಿನಿಂದ ಶಾಸನಸಭೆಗೆ ಆರಿಸಿಬಂದದ್ದು ಮತ್ತು ವಿಧಾನಪರಿಷತ್ತಿಗೆ ಮುಖ್ಯಮಂತ್ರಿ ಕೆಂಗಲ್

ಹನುಮಂತಯ್ಯ ಅವರ ಮೂಲಕ ನಾಮಕರಣಗೊಂಡಿದ್ದು ಸೇರಿ ಒಟ್ಟು ೯ ವರ್ಷಗಳ ಕಾಲ ಗಂಗಾಧರಯ್ಯ ಅವರು ಶಾಸಕರಾಗಿ ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿದರೆಂದು ಹೇಳಬಹುದಾಗಿದೆ.

ಗಂಗಾಧರಯ್ಯ ಅವರು ಶಾಸಕರಾಗಿದ್ದ ಅವಧಿ ೧೯೪೫ರಿಂದ ೧೯೫೪. ಶಾಸಕರಾಗಿ ಆಯ್ಕೆಯಾದಾಗ ಅವರ ವಯಸ್ಸು ಕೇವಲ ಮೂವ್ವತ್ತು ವರ್ಷ. ೧೯೫೧ರಲ್ಲಿ ಅವರು ಮೈಸೂರು ವಿಶ್ವವಿದ್ಯಾನಿಲಯದ ಕೌನ್ಸಿಲ್ ಸದಸ್ಯರಾಗಿಯೂ ನಾಮಕರಣಗೊಂಡರು.[೧೨] ಎಂದೂ ವಿಶ್ವವಿದ್ಯಾನಿಲಯದ ಪದವಿ, ಮನ್ನಣೆ ಗಳಿಸದಿದ್ದ ವ್ಯಕ್ತಿ ವಿಶ್ವವಿದ್ಯಾನಿಲಯದ ಕೌನ್ಸಿಲ್ ಸದಸ್ಯರಾದರು. ಇದು ಅವರ ಪ್ರಾಮಾಣಿಕತೆ ಮತ್ತು ನಿಸ್ವಾರ್ಥ ಸೇವೆಗೆ ಸಂದ ಗೌರವವಾಗಿತ್ತೆಂದು ತಿಳಿಯಬಹುದಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿಯೂ ಗಂಗಾಧರಯ್ಯ ಅವರು ಸಾಕಷ್ಟು ಉತ್ತಮ ಕೆಲಸಗಳನ್ನು ನಿರ್ವಹಿಸಿದರು. ನಿರ್ಲಕ್ಷ್ಯಕ್ಕೊಳಗಾಗಿದ್ದ ಅನ್ಯಾಯಗಳನ್ನು ಸರಿಪಡಿಸಲು ಪ್ರಯತ್ನಿಸಿದರು. ಆರು ದಲಿತ ಉಪನ್ಯಾಸಕರನ್ನು ಅಸಿಸ್ಟೆಂಟ್ ಪ್ರೊಫೆಸರುಗಳನ್ನಾಗಿಸಿ ಬಡ್ತಿ ಸಿಗುವಂತೆ ಮಾಡಿದರು. ಒಬ್ಬ ಕೆಮಿಸ್ಟ್ರಿ ಅಸಿಸ್ಟೆಂಟ್ ಪ್ರೊಫೆಸರಿಗೆ ಬಡ್ತಿ ಸಿಗುವಂತೆ ಮಾಡಿ ಅವರನ್ನು ಪ್ರೊಫೆಸರನ್ನಾಗಿಸಿದರು. ಅದೇ ಸಂದರ್ಭದಲ್ಲಿ ಕಾಲೇಜು ವಿದ್ಯಾರ್ಥಿಗಳಿಗಾಗಿ ತುಮಕೂರು ಮತ್ತು ಹಾಸನಗಳಲ್ಲಿ ಎರಡು ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸುವಂತೆ ನೋಡಿಕೊಂಡರು. ಬೆಂಗಳೂರು ಮತ್ತು ಮೈಸೂರುಗಳಲ್ಲಿ ಸ್ಥಳಾವಕಾಶವಿಲ್ಲದಿರಲು ಎರಡು ಅಡಿಶನಲ್ ವಿದ್ಯಾರ್ಥಿನಿಲಯಗಳನ್ನು ತೆರೆಯುವಂತೆ ಒತ್ತಾಯಿಸಿ ಯಶಸ್ವಿಯಾದರು.[೧೩]

೧೯೫೧ರಲ್ಲಿ ಕೆ.ಜಿ.ಎಫ್. ಚಿನ್ನದ ಗಣಿಯಲ್ಲಿ ಚಿನ್ನದ ಅದಿರು ಕಡಿಮೆ ಪ್ರಮಾಣದಲ್ಲಿ ಸಿಗುತ್ತಿದ್ದು, ಸರ್ಕಾರ ರಾಯಲ್ಟಿಯನ್ನು ಕಡಿಮೆ ಮಾಡುವಂತೆ ಚಿನ್ನ ತೆಗೆಯುತ್ತಿದ್ದ ಜಾನ್ ಟೈಲರ್ ಅಂಡ್ ಕಂಪನಿ ಅವರು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದರು. ಆ ಮನವಿಯ ಆಧಾರದ ಮೇಲೆ ಕೆ.ಜಿ.ಎಫ್ ಚಿನ್ನದ ಗಣಿಯ ಅದಿರಿನ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಒಂದು ಸಮಿತಿಯನ್ನು ನೇಮಿಸಲಾಯಿತು. ಗಂಗಾಧರಯ್ಯ ಅವರು ಸಹ ಈ ಸಮಿತಿಯ ಸದಸ್ಯರಾಗಿದ್ದರು.[೧೪] ಆಗಿನ ಚಿನ್ನದ ಗಣಿಯ ಆರು ಸಾವಿರ ಅಡಿಯವರೆಗಿನ ಲಭ್ಯ ಅದಿರು ಪ್ರಮಾಣವನ್ನು ಪರಿಶೀಲಿಸಿದ ತಂಡ ನಂತರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರ ಮೇರೆಗೆ ರಾಯಲ್ಟಿಯನ್ನು ಕಡಿಮೆ ಮಾಡಲಾಯಿತು.

ಗಂಗಾಧರಯ್ಯ ಅವರು ಸಾಗಿ ಬಂದ ಮಾರ್ಗ ಅನುಸರಣೀಯವಾದುದು. ಅವರು ಯಾವುದೇ ಕ್ಷೇತ್ರದಲ್ಲಿ ದಿಡೀರೆಂದು ಮೇಲೆ ಬಂದವರಲ್ಲ. ಸಾಕಷ್ಟು ಕಷ್ಟಸಹಿಷ್ಣುತೆಯಿಂದ ಬೇರೆಯವರ ನೋವನ್ನು ನಿವಾರಿಸಿ ಸಾಧನೆಯ ಹಾದಿಯಲ್ಲಿ ನಡೆದಿದ್ದಾರೆ. ಸಾಮಾನ್ಯ ವ್ಯಕ್ತಿ ಈ ಮಟ್ಟಕ್ಕೆ ಬರಲು ಮುಖ್ಯ ಕಾರಣ ನಿಸ್ವಾರ್ಥತೆ ಮತ್ತು ಶಾಂತಿಮಾರ್ಗ. ಅಚಲವಾದ ಆತ್ಮವಿಶ್ವಾಸದೊಂದಿಗೆ ಹಿಡಿದ ಕಾರ್ಯಸಾಧಿಸುವ ದೃಢಸಂಕಲ್ಪ ಅವರದು.

೪.೩. ಬೌದ್ಧ ಧರ್ಮದ ಪ್ರವರ್ತಕ

ಗಂಗಾಧರಯ್ಯ ಅವರು ಬಾಲ್ಯದಿಂದಲೂ ಅಧ್ಯಯನದಲ್ಲಿ ಬಹಳ ಆಸಕ್ತಿಯನ್ನು ಹೊಂದಿದವರಾಗಿದ್ದರು. ಬಾಲ್ಯದಲ್ಲೇ ಅವರು ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳಿಂದ ಸಾಕಷ್ಟು ಪ್ರಭಾವಿತರಾಗಿದ್ದರು. ಮಹಾತ್ಮ ಗಾಂಧೀಜಿ ಅವರ ಪ್ರಭಾವಕ್ಕೆ ಒಳಗಾದ ಮೇಲೆ ಅವರಿಗೆ ಭಗವದ್ಗೀತೆಯ ಮೇಲೆ ವಿಶೇಷ ಆಸಕ್ತಿ ಉಂಟಾಯಿತು. ಆದ್ದರಿಂದಲೇ ಅವರು ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ಜಾತಿಯ ಬಗ್ಗೆ ಸುಳ್ಳು ಹೇಳಿ ಭಗವದ್ಗೀತೆಯ ಪ್ರತಿಯೊಂದನ್ನು ಪಡೆದಿದ್ದರು. ಭಗವದ್ಗೀತೆಯು ತಿಳಿಸುವಂತೆ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯ ಆಚರಣೆಗೆ ಅವಕಾಶವೇ ಇಲ್ಲ. ಹಾಗಿರುವುದರಿಂದಲೇ ಗಾಂಧೀಜಿ ಅವರು ಭಗವದ್ಗೀತೆಯನ್ನು ಸಾಮಾಜಿಕವಾಗಿ ಎತ್ತರದಲ್ಲಿರಿಸಿದ್ದುದು" ಎಂಬುದು ಭಗವದ್ಗೀತೆಯ ಬಗ್ಗೆ ಗಂಗಾಧರಯ್ಯ ಅವರು ಹೊಂದಿದ್ದ ಅಭಿಪ್ರಾಯವಾಗಿದೆ. ಆದರೆ ಅವರಿಗೆ ಭಗವದ್ಗೀತೆಯ ಪ್ರತಿಯೊಂದನ್ನು ಪಡೆಯಲು ಜಾತಿಯ ಬಗ್ಗೆ ಸುಳ್ಳು ಹೇಳಬೇಕಾದಂತಹ ಸಂದರ್ಭ ಒದಗಿ ಬಂದದ್ದು ವಿಷಾದನೀಯ ಸಂಗತಿ.

ಗಂಗಾಧರಯ್ಯ ಅವರು ಗಾಂಧೀಜಿ ಅವರ ಸರ್ವೋದಯ ಬರಹಗಳ ಜೊತೆಗೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ 'Buddha and his Dhamma' ಪುಸ್ತಕವನ್ನೂ ಅಧ್ಯಯನ ಮಾಡಿದರು. ಇಂತಹ ಪುಸ್ತಕಗಳ ಅಧ್ಯಯನದಿಂದಲೇ ಅವರ ಬದುಕು ಒಂದು ಹೊಸ ರೂಪ ಪಡೆಯಿತು. ಅವರು ಬಾಲ್ಯದಲ್ಲಿದ್ದಾಗಲೇ ಕನ್ನಡದ ಮೊದಲ ದಲಿತ ಲೇಖಕ ಜಿ.ವೆಂಕಟಯ್ಯ ಅವರು ಬರೆದಿದ್ದ 'ಗೌತಮ ಬುದ್ಧ' ಎಂಬ ಕಿರುಪುಸ್ತಕದಿಂದ ಅವರು ಸಾಕಷ್ಟು ಪ್ರಭಾವಿತರಾಗಿದ್ದರೆಂದು ಹೇಳಬಹುದಾಗಿದೆ. ೧೯೫೭ರಲ್ಲಿ ಗಂಗಾಧರಯ್ಯ ಅವರು ಥಿಯೋಸಾಫಿಕಲ್ ಸೊಸೈಟಿಯ ಸದಸ್ಯರಾಗಿದ್ದರಿಂದ ವಾರಣಾಸಿಗೆ ಹೋಗಬೇಕಾಯಿತು. ಆ ಸಂದರ್ಭದಲ್ಲಿ ಅವರು ಬುದ್ಧನಿಗೆ ಸಂಬಂಧಿಸಿದ ಸ್ಥಳಗಳಾದ ಸಾರಾನಾಥ, ಬುದ್ಧನಿಗೆ ಜ್ಞಾನೋದಯವಾದ ಸ್ಥಳವಾದ ಬುದ್ಧಗಯೆ, ಅಶೋಕ ಚಕ್ರವರ್ತಿ ಕಟ್ಟಿಸಿದ ಬೌದ್ಧವಿಹಾರಗಳನ್ನು ಸಂದರ್ಶಿಸಿದರು. ಅಲ್ಲದೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ಬೌದ್ಧಧರ್ಮ ಸ್ವೀಕರಿಸಿದ ನಾಗಪುರಕ್ಕೆ ಭೇಟಿ ನೀಡಿದರು. ಬುದ್ಧನಿಗೆ ಸಂಬಂಧಿಸಿದಂತೆ ಹೆಚ್ಚು ವಿಚಾರಗಳು ತಿಳಿದಂತೆಲ್ಲ ಅವರಿಗೆ ಬೌದ್ಧಧರ್ಮದಲ್ಲಿ ಆಸಕ್ತಿ ಉಂಟಾಯಿತು. ಹಾಗಾಗಿ ಅವರು ಬುದ್ಧನಿಗೆ ಸಂಬಂಧಿಸಿದ ಸ್ಥಳಗಳಿಗೆ ಭೇಟಿ ನೀಡಿದರು

ಮಹಾತ್ಮ ಗಾಂಧೀಜಿ, ವಿನೋಬಾ ಭಾವೆ, ರಾಮಕೃಷ್ಣ ಪರಮಹಂಸರಂತಹ ಚೇತನಗಳು ನೋಡುವ ನೋಟದಲ್ಲೇ ಗಂಗಾಧರಯ್ಯ ಅವರೂ ಹಿಂದೂ ಧರ್ಮವನ್ನು ನೋಡುತ್ತಾರಾದರೂ ಶ್ರೇಣೀಕೃತ ವ್ಯವಸ್ಥೆಯ ಮಾತು ಬಂದಾಗ ಅವರು ಅನಿವಾರ್ಯವಾಗಿ ಬೌದ್ಧ ಧರ್ಮದ ಪರ ನಿಲ್ಲುತ್ತಾರೆ. ಖ್ಯಾತ ದಲಿತ ಸಾಹಿತಿಯೊಬ್ಬರು ಹೇಳಿದಂತೆ ಹಿಂದೂ ಧರ್ಮ ತನ್ನ ಸೆರಗಿಗೆ ಜಾತಿಪದ್ಧತಿ ಎಂಬ ಸಾವನ್ನು

ಗಂಟು ಹಾಕಿಕೊಂಡು ಹುಟ್ಟಿದೆಯೆಂಬ ಮಾತು ಇಂತಹ ಹಿರಿಯರ ಅನುಭವದ ಸಂದರ್ಭದಲ್ಲಿ ಬಹುದೊಡ್ಡ ನಿಜವಾಗಿ ಪರಿಣಮಿಸುವುದನ್ನು ನಾವು ಗಮನಿಸಬಹುದಾಗಿದೆ.[೧೯] ಗಂಗಾಧರಯ್ಯ ಅವರು ಎಲ್ಲ ಧರ್ಮಗಳನ್ನು ಗೌರವಿಸುತ್ತಿದ್ದರು. ಆದರೆ ಅವರು ಯಾವ ಧರ್ಮಕ್ಕೂ ಮತಾಂತರವಾದವರಲ್ಲ. ಅಸ್ಪೃಶ್ಯತೆಗೆ ಮತಾಂತರವೇ ಮದ್ದಲ್ಲವೆಂಬುದು ಗಂಗಾಧರಯ್ಯ ಅವರ ಚಿಂತನೆಯಾಗಿತ್ತು. ಆದರೂ ಅವರ ಅಂತಃಕರಣವನ್ನು ತಟ್ಟಿದ್ದು ಮಾತ್ರ ಒಬ್ಬ ಬುದ್ಧನೇ ಎಂಬುದು ಗಮನಾರ್ಹ.

೪.೪. ಶೈಕ್ಷಣಿಕ ಅಭಿವೃದ್ಧಿ

೧೯೫೮ನೇ ವರ್ಷದಲ್ಲಿ ಸರ್ವೋದಯದ ನೇತಾರರಾದ ವಿನೋಬಾ ಭಾವೆ ಅವರು ತಮ್ಮ ಭೂದಾನ ಚಳವಳಿಯನ್ನು ತೀವ್ರಗೊಳಿಸುವ ಸಲುವಾಗಿ ಸರ್ವೋದಯ ಕಾರ್ಯಕರ್ತರೊಂದಿಗೆ ಪಾದಯಾತ್ರೆಯ ಮೂಲಕ ದೇಶವನ್ನು ಸುತ್ತತೊಡಗಿದರು. ಪಾದಯಾತ್ರೆ ಮಾಡುವಾಗ ತುಮಕೂರು ಜಿಲ್ಲೆಯ ಗೊಲ್ಲಹಳ್ಳಿಯಲ್ಲಿನ ಗಂಗಾಧರಯ್ಯ ಅವರ ಮನೆಯಲ್ಲಿ ಒಂದು ರಾತ್ರಿ ತಂಗಿದ್ದರು. ಆ ಸಂದರ್ಭದಲ್ಲೆ ವಿನೋಬಾ ಭಾವೆ ಅವರು ಗಂಗಾಧರಯ್ಯ ಅವರೊಂದಿಗೆ ಮಾತನಾಡುತ್ತಾ-

'may you be a staunch social worker and may this gollahalli be a Shantinikethan. let your honesty be a beacon for your efforts'[೨೦] ಎಂದು ಗಂಗಾಧರಯ್ಯ ಅವರನ್ನು ಆಶೀರ್ವದಿಸಿದರು. ವಿನೋಬಾ ಭಾವೆ ಅವರ ಮಾತಿನಂತೆ ಅವರು ಗೊಲ್ಲಹಳ್ಳಿಯನ್ನು ಶಾಂತಿನಿಕೇತನವಾಗಿ ಪರಿವರ್ತಿಸಲು ನಿರ್ಧರಿಸಿದರು. ವಿದ್ಯೆಯಿಂದ ವಂಚಿತವಾಗಿರುವ ದುರ್ಬಲ ವರ್ಗಗಳ ಜನಾಂಗದವರಿಗೆ ವಿದ್ಯೆಯ ಎಲ್ಲ ಸೌಲಭ್ಯಗಳು ದೊರೆಯುವಂತೆ ಮಾಡಬೇಕೆಂದು ಗಂಗಾಧರಯ್ಯ ಅವರು ಚಿಂತಿಸಿದರು.

ಈ ಮೊದಲು ಗಂಗಾಧರಯ್ಯ ಅವರು ವಿದ್ಯಾರ್ಥಿ ನಿಲಯಗಳನ್ನಷ್ಟೇ ಸ್ಥಾಪನೆ ಮಾಡಿದ್ದರು. ಈ ಎಲ್ಲ ವಿದ್ಯಾರ್ಥಿನಿಲಯಗಳನ್ನು ಒಳಗೊಂಡಂತೆ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದರು. ೧೯೫೯ರ ಜೂನ್ ತಿಂಗಳಲ್ಲಿ ಗೊಲ್ಲಹಳ್ಳಿಯಲ್ಲೇ ಶ್ರೀ ಸಿದ್ಧಾರ್ಥ ಪ್ರೌಢಶಾಲೆ ಪ್ರಾರಂಭವಾಯಿತು. ಸಿದ್ಧಗಂಗಾ ಕ್ಷೇತ್ರದ ಡಾ.ಶಿವಕುಮಾರ ಸ್ವಾಮಿಗಳವರೇ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಮೊದಲನೆಯ ಪ್ರೌಢಶಾಲೆಯನ್ನು ಉದ್ಘಾಟಿಸಿದರು.[೧೨] ಚಿಕ್ಕಬಳ್ಳಾಪುರದಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಹಾಗೂ ಪರಿಚಿತರಾಗಿದ್ದ ವೀರರಾಘವಾಚಾರ್ ಈ ಪ್ರೌಢಶಾಲೆಯ ಮೊದಲನೆಯ ಮುಖ್ಯೋಪಾಧ್ಯಾಯರು. ಅನೇಕ ಸಾರ್ವಜನಿಕರು ಧವಸ, ಧಾನ್ಯ, ಭೂಮಿ, ಹಣ ಮುಂತಾದವುಗಳನ್ನು ಸಿದ್ಧಾರ್ಥ ಶಿಕ್ಷಣ ಸಂಸ್ಥೆಗೆ ನೀಡುವುದರ ಮೂಲಕ ಅದರ ಅಭಿವೃದ್ಧಿಯಲ್ಲಿ ಸಹಕರಿಸಿದ್ದನ್ನು ಮರೆಯುವ ಆಗಿಲ್ಲ.

೧೯೫೯ ಜೂನ್ ಒಂದರಂದು ಡಾ.ಟಿ.ಎಸ್.ಮಲ್ಲಿಕಾರ್ಜುನಯ್ಯ ಅವರ ಅಧ್ಯಕ್ಷತೆಯಲ್ಲಿ ಸಿದ್ಧಾರ್ಥ ವಿದ್ಯಾಸಂಸ್ಥೆ ಪ್ರಾರಂಭವಾಯಿತು. ಸಂಸ್ಥೆಯ ಕೆಲಸ ಕಾರ್ಯಗಳನ್ನು ನಿರ್ವಹಿಸುವ ದೃಷ್ಟಿಯಿಂದ ಹೆಚ್.ಎಂ.ಗಂಗಾಧರಯ್ಯ ಅವರು ಪ್ರಥಮ ಕಾರ್ಯದರ್ಶಿಗಳಾದರು.[೧೮] ಗೊಲ್ಲಹಳ್ಳಿಯಲ್ಲಿನ ಪ್ರೌಢಶಾಲೆಯ ಸಮೀಪದಲ್ಲೇ ಉಚಿತ ವಿದ್ಯಾರ್ಥಿನಿಲಯವನ್ನು ಸ್ಥಾಪನೆ ಮಾಡಲಾಯಿತು. ಮುಂದೆ ಅಲ್ಲಿನ ಬೋಧಕ ವರ್ಗಕ್ಕೆ ವಸತಿಗೃಹಗಳನ್ನು ಸಹ ಕಟ್ಟಿಸಿಕೊಡಲಾಯಿತು. ಈ ಎಲ್ಲ ಸೌಲಭ್ಯಗಳನ್ನು ಹೊಂದಿರುವುದರಿಂದ ಇಂದಿಗೂ ಶ್ರೀ ಸಿದ್ಧಾರ್ಥ ಪ್ರೌಢಶಾಲೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಪ್ರಮುಖ ವಿದ್ಯಾಕೇಂದ್ರವಾಗಿ ಪರಿವರ್ತನೆಗೊಂಡಿತ್ತು. ಹೀಗೆ ಗಂಗಾಧರಯ್ಯ ಅವರು ಗೊಲ್ಲಹಳ್ಳಿಯಲ್ಲಿ ಒಂದು ಪುಟ್ಟ ಶಾಂತಿನಿಕೇತನವೇ ತಲೆಯೆತ್ತುವಂತೆ ಶ್ರಮಿಸಿದರು.

ಗಂಗಾಧರಯ್ಯ ಅವರು ಗೊಲ್ಲಹಳ್ಳಿಯಲ್ಲಿಯೇ ಒಂದು ಶಿಕ್ಷಕರ ತರಬೇತಿ ಕೇಂದ್ರವನ್ನು ಆರಂಭಿಸಲು ನಿರ್ಧರಿಸಿದರು. ಆದರೆ ಅದು ಅಷ್ಟೊಂದು ಸುಲಭದ ಕೆಲಸವಾಗಿರಲಿಲ್ಲ. ಆದ್ದರಿಂದಾಗಿ ಅವರು ಬೆಂಗಳೂರು ಮತ್ತು ಗೊಲ್ಲಹಳ್ಳಿಯ ನಡುವೆ ನಿರಂತರ ಯಾತ್ರೆಯನ್ನೇ ಮಾಡಬೇಕಾಯಿತು. ಈ ಸಂದರ್ಭದಲ್ಲಿ ಎಸ್.ಆರ್.ಕಂಠಿ ಅವರು ವಿದ್ಯಾಮಂತ್ರಿಗಳಾಗಿದ್ದರು. ಗಂಗಾಧರಯ್ಯ ಅವರ ಶ್ರದ್ಧೆ, ದಕ್ಷತೆ, ಮಹತ್ವಾಕಾಂಕ್ಷೆಯನ್ನು ಗಮನಿಸಿದ ವಿದ್ಯಾ ಇಲಾಖೆ ಅವರು ತರಬೇತಿ ಶಾಲೆಯನ್ನು ತೆರೆಯಲು ಸಿದ್ಧಾರ್ಥ ಶಿಕ್ಷಣ ಸಂಸ್ಥೆಗೆ ಅನುಮತಿಯನ್ನು ನೀಡಿದರು.[೧೯] ಗಂಗಾಧರಯ್ಯ ಅವರು ಎರಡು ಬಾರಿ ವಿಧಾನ ಸಭೆಯನ್ನು ಪ್ರವೇಶಿಸಿದ್ದರು. ಅವರು ತಮ್ಮ ಮುಂದಿನ ದಿನಗಳಲ್ಲಿ ಪ್ರಮುಖ ರಾಜಕಾರಣಿಯೆ ಆಗಬಹುದಿತ್ತು. ಆದರೆ ತಾವು ವಿದ್ಯಾದಾನದ ಮೂಲಕವೇ ಸಮಾಜಸೇವೆ ಮಾಡಬೇಕೆಂಬ ನಿರ್ಧಾರವನ್ನು ಹೊಂದಿದ್ದರು. ಹಾಗಾಗಿ ಅವರು ತಮ್ಮ ನಲ್ವತ್ತನಾಲ್ಕನೆಯ ವಯಸ್ಸಿನಲ್ಲಿಯೇ ರಾಜಕೀಯ ಸನ್ಯಾಸವನ್ನು ಸ್ವೀಕರಿಸಿದರು. ವಿದ್ಯಾದಾನದ ಮೂಲಕವೇ ಸಮಾಜಸೇವೆ ಮಾಡಬೇಕೆಂಬ ನಿರ್ಧಾರವನ್ನು ಹೊಂದಿದ್ದರಿಂದಲೇ ತಮ್ಮ ರಾಜಕೀಯ ಭವಿಷ್ಯವನ್ನು, ಚಿತ್ರಕಲೆಯ ಬಗ್ಗೆ ಇದ್ದ ವ್ಯಾಮೋಹ ಮತ್ತು ಪ್ರತಿಭೆಯನ್ನು ಕಡೆಗಣಿಸಿದರು. ಅವರ ಸಮಾಜಸೇವೆಯು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಕೇಂದ್ರೀಕೃತಗೊಂಡಿತು. ಅವರ ಸತತ ಪ್ರಯತ್ನದ ಫಲವಾಗಿ ಕೊನೆಗೂ ಶ್ರೀ ಸಿದ್ಧಾರ್ಥ ಶಿಕ್ಷಕರ ತರಬೇತಿ ಶಾಲೆ ಗೊಲ್ಲಹಳ್ಳಿಯಲ್ಲಿ ಪ್ರಾರಂಭವಾಯಿತು. ತರಬೇತಿ ಪಡೆಯಲೆಂದು ಬರುವ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗತೊಡಗಿತು. ವಿದ್ಯಾರ್ಥಿನಿಲಯದ ಸೌಕರ್ಯವೂ ಇಲ್ಲಿ ಲಭ್ಯವಿದ್ದುದರಿಂದ ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಯಿತು.

ವಿದ್ಯಾಮಂತ್ರಿಗಳಾಗಿದ್ದ ಎಂ.ಮಲ್ಲಿಕಾರ್ಜುನಸ್ವಾಮಿ ಅವರು ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಸಂಸ್ಥೆಯನ್ನು ಕಟ್ಟುವಲ್ಲಿ ಅವರು ಗಂಗಾಧರಯ್ಯ ಅವರೊಂದಿಗೆ ಸಹಕರಿಸಿ ಅದು ಈಗಿನ ಉನ್ನತ ಸ್ಥಾಯಿಯನ್ನು ಪಡೆಯಲು ಪರೋಕ್ಷವಾಗಿ ನೆರವಾದರು.[೨೦] ೧೯೫೯ರಲ್ಲಿ ಪ್ರಾರಂಭವಾದ

ಸಿದ್ಧಾರ್ಥ ಶಿಕ್ಷಣ ಸಂಸ್ಥೆ ಬಹುಬೇಗನೆ ತುಮಕೂರು ಜಿಲ್ಲೆಯನ್ನು ವ್ಯಾಪಿಸಿಕೊಳ್ಳತೊಡಗಿತು. ಈ ಸಂಸ್ಥೆಯ ವಿಶೇಷತೆಯೇನೆಂದರೆ ಎಲ್ಲೆಲ್ಲಿ ಶಾಲೆಗಳನ್ನು ತೆರೆಯುತ್ತಿತ್ತೋ ಅಲ್ಲಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುತ್ತಿದ್ದರಿಂದ ಗ್ರಾಮೀಣ ವಿದ್ಯಾರ್ಥಿಗಳ ಜೊತೆಗೆ ದಲಿತ ಹಾಗೂ ಎಲ್ಲ ವರ್ಗದ ವಿದ್ಯಾರ್ಥಿಗಳಿಗೂ ಹೆಚ್ಚು ಅನುಕೂಲವಾಗುತ್ತಿತ್ತು. ಹೀಗೆ ಗೊಲ್ಲಹಳ್ಳಿಯಲ್ಲಿ ಪ್ರಾರಂಭವಾದ ಶಿಕ್ಷಣ ಚಳವಳಿ ತುಮಕೂರು ಜಿಲ್ಲೆಯಾದ್ಯಂತ ವ್ಯಾಪಿಸಿದ್ದಲ್ಲದೆ ಬಹುಬೇಗನೆ ತನ್ನ ಕಾರ್ಯಕ್ಷೇತ್ರವನ್ನು ನೆರೆಹೊರೆಯ ಜಿಲ್ಲೆಗಳಿಗೂ ಹಬ್ಬಿಸತೊಡಗಿತು. ಬೆಂಗಳೂರು, ಮೈಸೂರು, ಮಂಡ್ಯ, ಹಾಸನ, ಕೋಲಾರ ಮೊದಲಾದ ಜಿಲ್ಲೆಗಳಲ್ಲಿ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ ತನ್ನ ಶಾಖೆಗಳನ್ನು ಸ್ಥಾಪಿಸಿತು.[೨೧]

ಗಂಗಾಧರಯ್ಯ ಅವರು ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ಅವರಿಗೆ ಸಂಸ್ಕೃತವನ್ನು ಕಲಿಯಲೇಬೇಕೆಂಬ ವಿಶೇಷವಾದ ಛಲವಿತ್ತು. ಆದರೆ ದುರಂತವೆಂದರೆ ಬ್ರಿಟಿಷರು ನಡೆಸುತ್ತಿದ್ದ ಶಾಲೆಗಳಲ್ಲಿ ವೇದಭಾಷೆಯಾದ ಸಂಸ್ಕೃತವನ್ನು ಕಲಿಸುವ ಅಥವಾ ಅದನ್ನೊಂದು ಭಾಷಾಶಾಸ್ತ್ರವನ್ನಾಗಿ ಅಭ್ಯಸಿಸಲು ಅವಕಾಶ ಇರಲಿಲ್ಲ. ಸಂಸ್ಕೃತ ಭಾಷೆ ಕಲಿಯಬೇಕಾದರೆ ಸವರ್ಣೀಯ ಜಾತಿಗಳ ಹಿಡಿತದಲ್ಲಿರುತ್ತಿದ್ದ ಖಾಸಗಿ ಸಂಸ್ಕೃತ ಭಾಷಾ ಅಧ್ಯಯನ, ವೇದಾಧ್ಯಯನ ಕಲಿಕಾ ಕೇಂದ್ರಗಳಿಗೆ ಹೋಗಬೇಕಿತ್ತು ಅಥವಾ ಮಠಗಳಿಗೆ ಹೋಗಿ ಕಲಿಯಬಹುದಿತ್ತು. ಈ ಎರಡೂ ಅವಕಾಶಗಳು ಅಸ್ಪೃಶ್ಯ ಹಿನ್ನೆಲೆಯ ಅವರಿಗೆ ಊಹೆಗೆ ಕೂಡ ನಿಲುಕದಂತಿದ್ದವು. ಆದರೆ ಅವರಿಗೆ ಸಂಸ್ಕೃತವನ್ನು ಕಲಿಯಬೇಕು, ಆ ಮೂಲಕ ಸಂಸ್ಕೃತದಲ್ಲಿರುವ ಮಹಾಕಾವ್ಯಗಳನ್ನೆಲ್ಲ ಓದಿ ತಿಳುವಳಿಕೆ ಪಡೆಯಬೇಕೆಂಬ ಹಂಬಲ ಮಾತ್ರ ಕಡಿಮೆಯಾಗಲಿಲ್ಲ. ತಾವು ವ್ಯಾಸಂಗ ಮಾಡುವಾಗ ಅನುಭವಿಸಿದ ತೊಂದರೆಗಳನ್ನು ತಮ್ಮ ನಂತರದ ಪೀಳಿಗೆಯವರು ಅನುಭವಿಸಬಾರದೆಂಬ ಉದ್ದೇಶದಿಂದ ಅವರು ತಮ್ಮ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯಿಂದ ಒಂಬತ್ತು ಸಂಸ್ಕೃತ ಪಾಠಶಾಲೆಗಳನ್ನು ತೆರೆದರು.[೨೨] ಆ ಮೂಲಕ ಎಲ್ಲ ವರ್ಗದ ವಿದ್ಯಾರ್ಥಿಗಳು ಈ ಶಾಲೆಗಳಲ್ಲಿ ಸಂಸ್ಕೃತವನ್ನು ಕಲಿಯುವ ಅವಕಾಶವನ್ನು ಕಲ್ಪಿಸಿಕೊಟ್ಟರು. ಇವು ಇಂದಿಗೂ ತುಮಕೂರು ಜಿಲ್ಲೆಯಲ್ಲಿ ಮಾತ್ರವಲ್ಲದೆ ಮಂಡ್ಯ, ಹಾಸನ, ಬೆಂಗಳೂರು, ಮೈಸೂರು ಜಿಲ್ಲೆಗಳಲ್ಲೂ ಯಶಸ್ವಿಯಾಗಿ ನಡೆಯುತ್ತಿವೆ.

ಸಂಸ್ಕೃತ ಪಾಠಶಾಲೆಗಳ ಜೊತೆಗೆ ಪಾಲಿ ಭಾಷೆಯನ್ನು ಕಲಿಸುವ ಪಾಲಿ ಪಾಠಶಾಲೆಗಳನ್ನು ಸ್ಥಾಪಿಸಿದರು. ಗಂಗಾಧರಯ್ಯ ಅವರಿಗೆ ಬುದ್ಧನ ವಿಚಾರಗಳು ತಿಳಿದಂತೆಲ್ಲ ಬೌದ್ಧಧರ್ಮದಲ್ಲಿ ಹೆಚ್ಚಿನ ಆಸಕ್ತಿ ಉಂಟಾಯಿತು. ಹಾಗಾಗಿ ಬೌದ್ಧಗ್ರಂಥಗಳಲ್ಲಿರುವ ಬುದ್ಧನ ಮೂಲ ವಿಚಾರಧಾರೆಯನ್ನು ತಿಳಿಯಲು, ಬೌದ್ಧಗ್ರಂಥಗಳನ್ನು ಯಾರಾದರೂ ಅಧ್ಯಯನ ಮಾಡಲು ಅಥವಾ ಸಂಶೋಧನೆಗೆ ಬಳಸಿಕೊಳ್ಳಲು ಸಹಾಯವಾಗಲೆಂಬ ಉದ್ದೇಶದಿಂದ ಪಾಲಿ ಪಾಠಶಾಲೆಗಳನ್ನು ಸ್ಥಾಪಿಸಿದರೆನ್ನಬಹುದಾಗಿದೆ. ಅವರು ಪ್ರಾರಂಭಿಸಿದ ಪಾಲಿ ಪಾಠಶಾಲೆಗಳಲ್ಲಿ ಬೌದ್ಧಧರ್ಮಕ್ಕೆ ಸಂಬಂಧಿಸಿದ ನೀತಿ ಬೋಧನೆಗಳನ್ನು

ಮಾಡಲು ಅವಶ್ಯಕವಾದಂತಹ ಬೌದ್ಧ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಸಿದ್ಧಾರ್ಥ ಶಿಕ್ಷಣ ಸಂಸ್ಥೆ, ಶ್ರೀಲಂಕಾ ಸರ್ಕಾರದ ಸಾಂಸ್ಕೃತಿಕ ಮಂತ್ರಿಮಂಡಲಕ್ಕೆ ಒಂದು ಪತ್ರವನ್ನು ಕಳುಹಿಸಿತ್ತು. ಆ ಪತ್ರದಲ್ಲಿ-

'The management of this society dicided to install one Buddhist monk to each institution to guide the students on the principles of Buddha Dharma to mould their charecter and culture to make then virtuous when they enter in to life. it is learnt that there are ೨೦,೦೦೦ manks in sri lanka, out of them to select 25 English knowing monks may not be difficult.' ಎಂದು ಉಲ್ಲೇಖಿತವಾಗಿದೆ. ಬೌದ್ಧಧರ್ಮದ ತತ್ವಾದರ್ಶಗಳಿಗೆ ಗಂಗಾಧರಯ್ಯ ಅವರು ಎಷ್ಟರಮಟ್ಟಿಗೆ ಒಳಗಾಗಿದ್ದರೆಂದು ಮೇಲಿನ ಅಂಶದಿಂದ ತಿಳಿಯುತ್ತದೆ. ಅವರು ಪಾಲಿ ಪಾಠಶಾಲೆಗಳನ್ನು ತೆರೆದಿರುವುದು ಮಾತ್ರವಲ್ಲದೆ ಬೌದ್ಧ ಶಿಕ್ಷಕರನ್ನು ಶ್ರೀಲಂಕಾದಿಂದ ಬರಮಾಡಿಕೊಂಡು ಅವರಿಂದ ಪಾಲಿ ಭಾಷೆಯ ಕಲಿಕೆಗೆ ವ್ಯವಸ್ಥೆ ಮಾಡಿದ್ದಾರೆಂದು ದಾಖಲೆಗಳಿಂದ ತಿಳಿದುಬರುತ್ತದೆ.

ಗಂಗಾಧರಯ್ಯ ಅವರ ತಂದೆ ಮರಿಯಪ್ಪ ಅವರು ಸಣ್ಣಪುಟ್ಟ ರೋಗಗಳಿಗೆ ಉಚಿತ ವೈದ್ಯ ನೀಡುತ್ತಿದ್ದರು. ತಂದೆ ಅವರ ಪ್ರಭಾವದಿಂದ ಗಂಗಾಧರಯ್ಯ ಅವರು ವೈದ್ಯಕೀಯ ಕಾಲೇಜನ್ನು ಸ್ಥಾಪಿಸಬೇಕೆಂಬ ಉದ್ದೇಶವನ್ನು ಹೊಂದಿದ್ದರೆನ್ನಬಹುದು. ಆದರೆ ವೈದ್ಯಕೀಯ ಕಾಲೇಜೊಂದನ್ನು ಸ್ಥಾಪನೆ ಮಾಡುವುದು ಸುಲಭದ ಕೆಲಸವಾಗಿರಲಿಲ್ಲ. ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಪರವಾಗಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ಕುರಿತು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಆ ಸಂದರ್ಭದಲ್ಲಿ ರಾಮಕೃಷ್ಣ ಹೆಗಡೆ ಅವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಹೆಗಡೆ ಅವರು ಗಂಗಾಧರಯ್ಯ ಅವರಿಗೆ ಭರವಸೆಗಳ ಮೇಲೆ ಭರವಸೆಯನ್ನು ನೀಡುತ್ತ ಹೋದರು. ಈ ಭರವಸೆಗಳ ನಡುವೆ ತಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳಿಗೆ ಹಿಂದುಳಿದ ವರ್ಗಗಳ ಹೆಸರಿನಲ್ಲಿ ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡಿದರು. ಹೆಗಡೆ ಅವರ ಧೋರಣೆಯನ್ನು ಅರ್ಥಮಾಡಿಕೊಂಡ ಗಂಗಾಧರಯ್ಯ ಅವರು ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ತಮ್ಮ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗೇಕೆ ಅನುಮತಿ ನೀಡಬಾರದೆಂದು ಸುಪ್ರೀಂ ಕೋರ್ಟಿನಲ್ಲಿ ದೂರು ಸಲ್ಲಿಸಿದರು. ಈಗಾಗಲೆ ದಲಿತ ವರ್ಗಗಳಿಗಾಗಿ ಡಾ.ಅಂಬೇಡ್ಕರ್ ಮೆಡಿಕಲ್ ಕಾಲೇಜು ಇದೆಯೆಂಬುದು ಕರ್ನಾಟಕ ಸರ್ಕಾರದ ವಾದವಾಗಿತ್ತು. ಆದರೆ ಈ ವಾದವನ್ನು ಪರಿಶೀಲಿಸಿದ ಆಗಿನ ಮುಖ್ಯ ನ್ಯಾಯಾಧೀಶರಾಗಿದ್ದ ವೈ.ವಿ.ಚಂದ್ರಚೂಡ್ ಅವರು ದೂರನ್ನು ದಾಖಲು ಮಾಡಿಕೊಂಡರು. ನಂತರ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯದೂರನ್ನು ಪರಿಶೀಲಿಸಿದ ನ್ಯಾಯಾಧೀಶರಾದ ಶ್ರೀಯುತ ಠಕ್ಕರ್ ಅವರು ಹದಿನೈದು ದಿನಗಳೊಳಗಾಗಿ ಸಿದ್ಧಾರ್ಥ ಶಿಕ್ಷಣಸಂಸ್ಥೆಗೆ ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡಬೇಕೆಂದು ಕರ್ನಾಟಕ ಸರ್ಕಾರಕ್ಕೆ ಆದೇಶಿಸಿದರು. ಅಲ್ಲದೆ ಮಂಜೂರು

ಮಾಡಿದ್ದರ ಬಗ್ಗೆ ತಮಗೆ ವರದಿ ಸಲ್ಲಿಸಬೇಕೆಂದೂ ಸಹ ತಿಳಿಸಿದರು.[೨೩] ಆಗ ಅನಿವಾರ್ಯವಾಗಿ ಕರ್ನಾಟಕ ಸರ್ಕಾರ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗೆ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಅನುಮತಿಯನ್ನು ನೀಡಿತು. ಗಂಗಾಧರಯ್ಯ ಅವರು ಸುಪ್ರೀಂಕೋರ್ಟಿಗೆ ಹೋಗಿ ದೂರನ್ನು ಸಲ್ಲಿಸದೆ ಇದ್ದಿದ್ದರೆ, ಸಿದ್ಧಾರ್ಥ ಶಿಕ್ಷಣ ಸಂಸ್ಥೆಗೆ ಕರ್ನಾಟಕ ಸರ್ಕಾರ ವೈದ್ಯಕೀಯ ಕಾಲೇಜು ನಡೆಸಲು ಅನುಮತಿ ನೀಡುತ್ತಿರಲಿಲ್ಲ ವೆನ್ನಬಹುದನ್ನು ಪ್ರತ್ಯೇಕವಾಗಿ ಚರ್ಚಿಸುವ ಅವಶ್ಯಕತೆ ಇಲ್ಲ.

೧೯೯೪ರಲ್ಲಿಯೇ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯು ವೈದ್ಯಕೀಯ ಕಾಲೇಜು, ಎಂಜಿನಿಯರಿಂಗ್ ಕಾಲೇಜು, ಪ್ರಥಮ ದರ್ಜೆ ಕಾಲೇಜು, ಬಿ.ಎಡ್. ಕಾಲೇಜು, ಜೂನಿಯರ್ ಕಾಲೇಜು, ನರ್ಸರಿ ಶಿಕ್ಷಕ ತರಬೇತಿ ಶಾಲೆ, ಪೌಢಶಾಲೆ, ಪಾಲಿಭಾಷಾ ಬೋಧನಾಕೇಂದ್ರ, ಸಂಸ್ಕೃತ ಪಾಠಶಾಲಾ, ದಂತ ವೈದ್ಯ ಮಹಾವಿದ್ಯಾಲಯ, ದಾದಿಯರ ತರಬೇತಿ ಕೇಂದ್ರ ಹೀಗೆ ಎಲ್ಲ ವಿಧದ ವ್ಯಾಸಂಗದ ಅವಕಾಶವನ್ನು ಕಲ್ಪಿಸಿಕೊಟ್ಟಿತ್ತು. ಈ ಸಂದರ್ಭದಲ್ಲಿ ಇಪ್ಪತ್ತೆರಡು ಪೌಢಶಾಲೆಗಳು, ಐದು ಪದವಿಪೂರ್ವ ಕಾಲೇಜುಗಳು, ಒಂದು ಪ್ರಥಮದರ್ಜೆ ಕಾಲೇಜು, ಒಂದು ಬಿ.ಎಡ್.ಕಾಲೇಜು, ಒಂಬತ್ತು ಸಂಸ್ಕೃತ ಪಾಠಶಾಲೆಗಳು, ಐದು ಐ.ಟಿ.ಐ ತರಬೇತಿ ಸಂಸ್ಥೆಗಳು, ಒಂದು ಪಾಲಿಭಾಷಾ ಶಾಲೆ, ಒಂದು ಮಾಧ್ಯಮಿಕ ಶಾಲೆ, ದಾದಿಯರ ತರಬೇತಿ ಶಾಲೆ, ಇಂಜಿನಿಯರಿಂಗ್ ಕಾಲೇಜು, ದಂತ ವೈದ್ಯ ಮಹಾವಿದ್ಯಾಲಯ ಮತ್ತು ವೈದ್ಯಕೀಯ ಮಹಾವಿದ್ಯಾಲಯ ಮಾತ್ರವಲ್ಲದೆ ಇಪ್ಪತ್ತು ವಿದ್ಯಾರ್ಥಿನಿಲಯಗಳನ್ನು ಯಶಸ್ವಿಯಾಗಿ ನಡೆಸುತ್ತಿತ್ತು. ನರ್ಸರಿಯಿಂದ ಹಿಡಿದು ವೈದ್ಯಕೀಯ ಶಿಕ್ಷಣದವರೆಗೂ ಹಬ್ಬಿರುವ ಸಂಸ್ಥೆಯಲ್ಲಿ ಅರವತ್ತಾರು ವಿವಿಧ ಶಿಕ್ಷಣ ವಿಭಾಗಗಳಿದ್ದು, ಹೆಚ್ಚು ಕಡಿಮೆ ಇಪ್ಪತ್ತು ಸಾವಿರಕ್ಕಿಂತಲೂ ಹೆಚ್ಚಿನ ಶಿಕ್ಷಣಾರ್ಥಿಗಳು ಪ್ರತಿವರ್ಷ ಇಲ್ಲಿ ಅಧ್ಯಯನ ನಡೆಸುತ್ತಿದ್ದರು. ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ಬದುಕುತ್ತಿರುವ ಉದ್ಯೋಗಿಗಳ ಸಂಖ್ಯೆ ಮೂರುವರೆ ಸಾವಿರದಷ್ಟು, ಸಿದ್ಧಾರ್ಥ ಶಿಕ್ಷಣ ಸಂಸ್ಥೆಗಳೆಲ್ಲದರ ಒಟ್ಟು ಬಂಡವಾಳ ಇಪ್ಪತ್ತು ಕೋಟಿಯಾದರೆ, ವೈದ್ಯಕೀಯ ಮಹಾವಿದ್ಯಾಲಯದ ಬಂಡವಾಳ ಮೂವತ್ತೈದು ಕೋಟಿಯಾಗಿದೆ. ಸಿದ್ಧಾರ್ಥ ವೈದ್ಯಕೀಯ ಕಾಲೇಜನ್ನು ಗೊಲ್ಲಹಳ್ಳಿಯ ಸಮೀಪದಲ್ಲಿ ಸ್ಥಾಪಿಸಲಾಗಿದೆ. ಸಿದ್ದಾರ್ಥ ವೈದ್ಯಕೀಯ ಕಾಲೇಜಿನ ಆಸ್ಪತ್ರೆ ಸಾವಿರದ ಮುನ್ನೂರು ಒಳರೋಗಿಗಳಿಗೆ ಅನುಕೂಲವಾಗುವಂತೆ ಹಾಸಿಗೆಗಳೊಂದಿಗೆ ಎಲ್ಲ ವೈದ್ಯಕೀಯ ಸಲಕರಣೆಗಳ ಸಮೇತ ಸುಸಜ್ಜಿತವಾಗಿದೆ. ಆದ್ದರಿಂದಾಗಿ ಸಿದ್ಧಾರ್ಥ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ನಾಡಿನ ಬಹುಮುಖ್ಯ ಆಸ್ತಿಯಾಗಿದೆಯೆಂಬುದನ್ನು ಒಪ್ಪಲೇಬೇಕು.

ವಿನೋಬಾ ಅವರ ಆಶೀರ್ವಚನದ ಮೇರೆಗೆ ೧೯೫೯ರಲ್ಲಿ ಗೊಲ್ಲಹಳ್ಳಿಯಲ್ಲಿ ಪ್ರಾರಂಭವಾದ ಸಿದ್ಧಾರ್ಥ ಶಿಕ್ಷಣ ಸಂಸ್ಥೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಶಾಲಾ ಶಾಖೆಗಳನ್ನು ಹೊಂದುವುದರ ಮೂಲಕ ಯಶಸ್ವಿಯಾಗಿ ಮುನ್ನಡೆಯುತ್ತಿತ್ತು. ೧೯೮೪ನೇ ವರ್ಷಕ್ಕೆ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯು ಸ್ಥಾಪನೆಗೊಂಡು

೨೫ ವರ್ಷಗಳು ಕಳೆದವು. ಆದ್ದರಿಂದ ೨೫ ವರ್ಷಗಳನ್ನು ಕಳೆದಿರುವ ಸವಿನೆನಪಿಗಾಗಿ ಸಿದ್ಧಾರ್ಥ ಶಿಕ್ಷಣ ಸಂಸ್ಥೆ ೧೯೮೪ರಲ್ಲಿ ಬೆಳ್ಳಿಹಬ್ಬವನ್ನು ಆಚರಿಸಿತು. ಈ ಬೆಳ್ಳಿ ಹಬ್ಬದ ಮಹೋತ್ಸವಕ್ಕೆ ರಾಷ್ಟ್ರಪತಿ ಅವರಾದ ಗ್ಯಾನಿ ಜೇಲ್‌ಸಿಂಗ್ ಅವರನ್ನು ಆಹ್ವಾನಿಸಿದ್ದು ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಮಹತ್ವದ ಸಂಗತಿಯಾಗಿದೆ. ತುಮಕೂರಿನ ಶ್ರೀ ಸಿದ್ಧಾರ್ಥ ತಾಂತ್ರಿಕ ಶಿಕ್ಷಣ ಮಹಾವಿದ್ಯಾಲಯದ ಆವರಣದಲ್ಲಿ ಬೆಳ್ಳಿಹಬ್ಬದ ವೇದಿಕೆಯನ್ನು ನಿರ್ಮಿಸಲಾಗಿತ್ತು. ಈ ಬೆಳ್ಳಿಹಬ್ಬದ ಸಮಾರಂಭದಲ್ಲಿ ಬಿ.ಡಿ.ಜತ್ತಿ, ಕರ್ನಾಟಕದ ಆಗಿನ ರಾಜ್ಯಪಾಲ ಅಶೋಕನಾಥ ಬ್ಯಾನರ್ಜಿ, ರೈಲ್ವೆ ಸಚಿವರಾದ ಜಾಫರ್ ಶರೀಫ್, ಲೋಕಸಭಾ ಸದಸ್ಯ ಕೆ.ಲಕ್ಕಪ್ಪ, ರಾಜ್ಯ ಸಚಿವೆ ಶ್ರೀಮತಿ ಚಂದ್ರಪ್ರಭಾ ಅರಸ್, ಅಜೀಜ್‌ಸೇಠ್ ಮುಂತಾದವರು ಭಾಗವಹಿಸಿದ್ದರು. ಬೆಳ್ಳಿಹಬ್ಬದ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ರಾಷ್ಟ್ರಪತಿ ಗ್ಯಾನಿ ಜೇಲ್‌ಸಿಂಗ್ ಅವರು ಬೆಳ್ಳಿಹಬ್ಬ ಸ್ಮಾರಕ ಭವನದ ಶಂಕುಸ್ಥಾಪನೆಯನ್ನು ನೆರವೇರಿಸಿದರು.[೨೪] ಗ್ಯಾನಿ ಜೇಲ್‌ಸಿಂಗ್ ಅವರು ಬೆಳ್ಳಿ ಹಬ್ಬದ ಸಮಾರಂಭದಲ್ಲಿ ಮಾತನಾಡುತ್ತಾ ದುರ್ಬಲ ವರ್ಗಗಳ ನಿಜವಾದ ಪ್ರಗತಿಗೆ ಪೂರಕವಾದ ಶಿಕ್ಷಣವನ್ನು ಧಾರೆಯೆರೆಯುತ್ತಿರುವ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗೆ ಉಚಿತ ನೆರವನ್ನು ಸರ್ಕಾರ ನೀಡುವುದರ ಮೂಲಕ ಪ್ರೋತ್ಸಾಹಿಸಬೇಕೆಂದು ತಿಳಿಸಿದರು.[೨೫] ಗ್ಯಾನಿ ಜೇಲ್ ಸಿಂಗ್ ಅವರ ಮಾತುಗಳು ಗಂಗಾಧರಯ್ಯ ಅವರಿಗೆ ಮತ್ತಷ್ಟು ಪ್ರೋತ್ಸಾಹ ನೀಡಿದವೆನ್ನಬಹುದಾಗಿದೆ.

ಬೆಳ್ಳಿಹಬ್ಬದ ಸಂದರ್ಭದಲ್ಲಿ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯು ಪರಿಶಿಷ್ಟ ಹಾಗೂ ಹಿಂದುಳಿದ ವರ್ಗಗಳ ಮಹಿಳೆಯರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಬೆಳ್ಳಿಹಬ್ಬದ ಸವಿನೆನಪಿಗಾಗಿಯೆ ಸಿದ್ಧಾರ್ಥಶಿಕ್ಷಣ ಸಂಸ್ಥೆಯು Sri Siddhartha girls junior college & Sri Siddhartha higher girls school ಅನ್ನು ಬೆಂಗಳೂರಿನ ವಿಜಯನಗರದಲ್ಲಿ ಸ್ಥಾಪಿಸುವುದರ ಮೂಲಕ ಮಹಿಳೆಯರ ಶೈಕ್ಷಣಿಕ ಪ್ರಗತಿಗೆ ಶ್ರಮಿಸಿತೆಂದು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಡಾ.ಜಿ.ಪರಮೇಶ್ವರ ಅವರು ತಿಳಿಸಿದ್ದಾರೆ. ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಬೆಳ್ಳಿ ಹಬ್ಬ ಗಂಗಾಧರಯ್ಯ ಅವರ ಬದುಕಿನ ಹೋರಾಟ ಹಾಗೂ ಸಾಧನೆಗಳ ಒಂದು ಮಹತ್ವದ ಘಟ್ಟವೆಂದು ಉಲ್ಲೇಖಿಸಬಹುದಾಗಿದೆ. ಬೆಳ್ಳಿಹಬ್ಬದ ಸಂಭ್ರಮ ಮುಗಿದ ಐದೇ ವರ್ಷಗಳಲ್ಲಿ ಅಂದರೆ ೧೮ನೇ ಆಗಸ್ಟ್ ೧೯೮೯ರಲ್ಲಿ ಶ್ರೀ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದ ಆಡಳಿತ ವಿಭಾಗದ ಕಟ್ಟಡವನ್ನು ಉದ್ಘಾಟಿಸಲು ಹಾಗೂ ಶ್ರೀ ಸಿದ್ಧಾರ್ಥ ವೈದ್ಯಕೀಯ ಮಹಾವಿದ್ಯಾಲಯದ ಕಟ್ಟಡ ಶಂಕುಸ್ಥಾಪನೆಯನ್ನು ನೆರವೇರಿಸಲು ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ರಾಜೀವ್ ಗಾಂಧಿ ಅವರು ಆಗಮಿಸಿದರು.

ಈ ಸಮಾರಂಭದಲ್ಲಿ ಶ್ರೀ ಶಂಕರಾನಂದ, ಶ್ರೀ ಜಾಫರ್ ಷರೀಫ್, ಶ್ರೀಮತಿ ಮೊಹ್ಸಿನಾ ಕಿದ್ವಾಯಿ, ಶ್ರೀ ಬಿ.ಜನಾರ್ದನ ಪೂಜಾರಿ, ಶ್ರೀಮತಿ ಮಾರ್ಗರೇಟ್ ಆಳ್ವ, ಅಂದಿನ ಕೆ.ಪಿ.ಸಿ.ಸಿ.(ಐ) ಅಧ್ಯಕ್ಷರಾಗಿದ್ದ ಶ್ರೀ ವೀರೇಂದ್ರ ಪಾಟೀಲ್ ಹಾಗೂ ಅಂದಿನ ಸಂಸತ್ ಸದಸ್ಯರುಗಳಾಗಿದ್ದ ಶ್ರೀ ಜಿ.ಎಸ್.

ಬಸವರಾಜು, ಶ್ರೀ ಕೆ.ಹೆಚ್.ರಂಗನಾಥ್, ಶ್ರೀ ವಿ.ಕೃಷ್ಣರಾವ್ ಅವರು ಭಾಗವಹಿಸಿದ್ದರು.[೨೬] ಆ ಸಂದರ್ಭದಲ್ಲಿ ಇಂದಿನ ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಿಗಳಾಗಿರುವ ಹಾಗೂ ಕರ್ನಾಟಕದ ಹಿರಿಯ ದಲಿತ ರಾಜಕಾರಣಿಯಾಗಿರುವ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ ಅವರು ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಶ್ರೀ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದ ಆಡಳಿತ ವಿಭಾಗವನ್ನು ಉದ್ಘಾಟಿಸಲು ಹಾಗೂ ಶ್ರೀ ಸಿದ್ಧಾರ್ಥ ವೈದ್ಯಕೀಯ ಮಹಾವಿದ್ಯಾಲಯದ ಕಟ್ಟಡ ಶಂಕುಸ್ಥಾಪನೆಯನ್ನು ನೆರವೇರಿಸಲು ರಾಜೀವ್ ಗಾಂಧಿ ಅವರು ಆಗಮಿಸಿದ್ದು ತುಮಕೂರಿನ ಇತಿಹಾಸದ ಪುಟಗಳಲ್ಲಿ ಬರೆದಿಡಬೇಕಾದ ಒಂದು ಮಹತ್ವದ ದಾಖಲೆಯಾಗಿದೆ. ೧೯೭೫ರಲ್ಲಿ ಕರ್ನಾಟಕ ಸರ್ಕಾರ ಗಂಗಾಧರಯ್ಯ ಅವರು ಶಿಕ್ಷಣ ಕ್ಷೇತ್ರದ ಮೂಲಕ ನಡೆಸುತ್ತಿರುವ ಸಮಾಜ ಸೇವೆಯನ್ನು ಗುರುತಿಸಿ ಆ ವರ್ಷದ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ'ಯನ್ನು ಅವರಿಗೆ ನೀಡಿ ಗೌರವಿಸಿತು. ಪ್ರಶಸ್ತಿ ಪತ್ರದಲ್ಲೂ ಅವರ ಸೇವೆಯ ಕ್ರಮವನ್ನು ಹೀಗೆ ಗುರುತಿಸಿದೆ.

'ಶ್ರೀ ಹೆಚ್.ಎಂ.ಗಂಗಾಧರಯ್ಯ ಅವರು ಕಲಾಪ್ರೇಮಿಗಳು. ಹೆಸರಾಂತ ತುಮಕೂರಿನ ಶ್ರೀ ಸಿದ್ಧಲಿಂಗಯ್ಯ ಮತ್ತು ಮೈಸೂರಿನ ಶ್ರೀ ಪಾವಂಜೆ ಅವರಲ್ಲಿ ಶಿಷ್ಯ ವೃತ್ತಿ ಮಾಡಿ ಕಲಾಪ್ರವೀಣರಾದರು. ಶಾಲೆಯಲ್ಲಿ ಕಲಾ ಶಿಕ್ಷಕರಾದರು. ಆದರೆ ದಲಿತ ಬಾಲಕರ ಸೇವೆಗೆ ಅವರ ಮನವೊಲಿದು ತಮ್ಮ ವೃತ್ತಿಗೆ ರಾಜೀನಾಮೆ ಕೊಟ್ಟರು; ದಲಿತ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ಶಾಸಕರಾಗಿ ಸೇವೆ ಸಲ್ಲಿಸಿದರು. ಅಸ್ಪೃಶ್ಯತೆಯ ನಿವಾರಣೆಗೆ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳ ಸ್ಥಾಪನೆಯೇ ಸುಗಮ ಹಾದಿಯೆಂದು ಇವರಿಗೆ ಮನವರಿಕೆಯಾಯಿತು. ಹಾಗೆಯೇ ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು ಕಟ್ಟಿದರು. ಪ್ರೌಢಶಾಲೆಗಳು, ಮೂಲ ಶಿಕ್ಷಣ ತರಬೇತಿ ಕೇಂದ್ರಗಳು, ಕಿರಿಯ ಕಾಲೇಜುಗಳು, ಸಂಸ್ಕೃತ ಶಾಲೆಗಳು, ಮಾಧ್ಯಮಿಕ ಶಾಲಾ ಶಿಕ್ಷಕರ ತರಬೇತಿ ಕೇಂದ್ರ ಇವುಗಳು ಇವರ ಸತತ ಪರಿಶ್ರಮದ ಪೂರ್ಣಫಲವಾಗಿ ತುಮಕೂರು, ಗೊಲ್ಲಹಳ್ಳಿ ಮತ್ತು ಕುಣಿಗಲ್‌ನಲ್ಲಿ ಸ್ಥಾಪಿತವಾಗಿ ಸಾಮಾನ್ಯವಾಗಿ ಎಲ್ಲ ಬಾಲಕರ, ವಿಶೇಷವಾಗಿ ದಲಿತ ಬಾಲಕರ ಪುರೋಭಿವೃದ್ಧಿಯನ್ನು ಸಾಧಿಸುತ್ತಿವೆ. ಸಂತ ವಿನೋಬಾಜಿ ಅವರು ಇವರ ಸೇವೆಯನ್ನು ಮೆಚ್ಚಿ ಹರಸಿದ್ದಾರೆ. ಸರಳ ಜೀವನವನ್ನು ನಡೆಸುತ್ತಿರುವ ಇವರು ಒಬ್ಬ ಕೃಷಿಕರು.[೨೭]

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯಷ್ಟೇ ಅಲ್ಲದೆ ಗಂಗಾಧರಯ್ಯ ಅವರಿಗೆ ಹುಟ್ಟೂರಾದ ಅಮೃತೂರು ಪೌರ ಸಮಿತಿ ಅವರು ಸನ್ಮಾನಿಸಿ, ಭಿನ್ನ ವತ್ತಳೆಯನ್ನು ಅರ್ಪಿಸಿದ್ದಾರೆ. ಹಾಗೆಯೇ ಅರಿಯೂರಿನ ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತ್ಯುತ್ಸವ ಸಮಿತಿ ಅವರು, ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಸಿಬ್ಬಂದಿ ವರ್ಗ, ಕೊತ್ತನೂರು ಗ್ರಾಮಸ್ಥರು ಮತ್ತು ಹಿತೈಷಿಗಳು, ಶ್ರೀ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ, ಗದಗದವರು, ಶ್ರೀ ಆದಿಚುಂಚನಗಿರಿ ಮಠದವರು, ಶ್ರೀ ಸಿದ್ಧಗಂಗಾ ಮಠದವರು, ನಂಜನಗೂಡಿನ ಸುತ್ತೂರು ಮಠದವರು ಮುಂತಾದವರು ಗಂಗಾಧರಯ್ಯ

ಅವರ ಬಹುಮುಖಸೇವೆ ಹಾಗೂ ನಿಸ್ವಾರ್ಥಪರತೆಯನ್ನು ಗುರುತಿಸಿ ಸನ್ಮಾನಿಸಿದ್ದಾರೆ. ಇದರೊಂದಿಗೆ ಲಯನ್ಸ್, ರೋಟರಿ ಮತ್ತು ಇನ್ನಿತರ ಸಂಘ-ಸಂಸ್ಥೆಗಳು ಕೂಡ ಗೌರವಿಸಿವೆ.

ಗಂಗಾಧರಯ್ಯ ಅವರು ಬರೀ ಮಾತಿನ ಮನುಷ್ಯರಾಗಿ ಎಂದೂ ಉಳಿದಿಲ್ಲ. ಅವರು ತಮಗನಿಸಿದ್ದರ ಬಗ್ಗೆ ಏನೂ ಹೇಳದೆಯೇ ಕ್ರಿಯಾರೂಪದಲ್ಲಿ ತೋರಿಸಿಬಿಡುವ ಅಪರೂಪದ ವ್ಯಕ್ತಿತ್ವದವರಾಗಿದ್ದರು. ೧೯೯೧ರಲ್ಲಿ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮಶತಮಾನೋತ್ಸವ ವನ್ನು ಆಚರಿಸಲಾಯಿತು. ಅದೇ ಸಂದರ್ಭದಲ್ಲಿ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ 'ಶತಮಾನದ ಅಂಬೇಡ್ಕರ್' ಎಂಬ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿತು. ಈ ಗ್ರಂಥದ ಹಿಂದಿನ ಮುಖ್ಯ ರೂವಾರಿ ಗಂಗಾಧರಯ್ಯ ಅವರೇ ಆಗಿದ್ದರು. 'ಶತಮಾನದ ಅಂಬೇಡ್ಕರ್' ಗ್ರಂಥವನ್ನು ಸಿದ್ಧಾರ್ಥ ಶಿಕ್ಷಣ ಸಂಸ್ಥೆ ಪ್ರಕಟಿಸಿದ್ದರ ಪ್ರಸ್ತುತತೆಗೆ ಅದೇ ಗ್ರಂಥದಲ್ಲಿನ ಕೆಲವು ಮಾತುಗಳು ಸಾಕ್ಷಿಯಾಗಿವೆ. ಆ ಮಾತುಗಳು ಈ ರೀತಿ ಇವೆ : 'ಹೃದಯವನ್ನು ವಿಸ್ತಾರಗೊಳಿಸುವ ಶಿಕ್ಷಣದ ಬಗ್ಗೆ, ಅಂಬೇಡ್ಕರ್ ಕನಸು ಕಂಡಿದ್ದರು. ಅವರ ಅಂತಹ ಕನಸಿನ ಮೂರ್ತರೂಪವೇ ಅವರು ಸ್ಥಾಪಿಸಿದ ಮುಂಬೈನ ಸಿದ್ಧಾರ್ಥ ಶಿಕ್ಷಣ ಸಂಸ್ಥೆ. ಶಿಕ್ಷಣದ ಮೂಲಕ ಸಿಗುವ ಅರಿವು ಸ್ವಾಭಿಮಾನದ ವ್ಯಕ್ತಿತ್ವವನ್ನು ರೂಪಿಸಬಲ್ಲದೆಂದು ಬಾಬಾ ಸಾಹೇಬರು ತಿಳಿದಿದ್ದರು. ಶಿಕ್ಷಣ ಕೊಡುವ ಅಂತಹ ಅರಿವು ಒಂದು ಸಮಷ್ಟಿ ವಿವೇಕವಾಗಿ ರೂಪುಗೊಂಡು ಚಳವಳಿಯ ಅಂತರಂಗದ ನಿಜವಾದ ಸತ್ವವಾಗಬಲ್ಲದು. ಡಾ.ಅಂಬೇಡ್ಕರ್ ಅವರ ಈ ಅಕ್ಷರದ ಅರಿವನ್ನು ಮಾದರಿ ಮತ್ತು ಆದರ್ಶವನ್ನಾಗಿ ಭಾವಿಸಿಕೊಂಡಿರುವ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯೂ ಕಳೆದ ವರ್ಷಗಳಿಂದಲೂ ತನ್ನ ಎಲ್ಲ ಮಿತಿಗಳ ಒಳಗೆ ಇಂತಹ 'ಅರಿವಿನ ಸ್ಫೋಟ'ದಲ್ಲಿ ತನ್ನದೆ ಕಾಣಿಕೆಯನ್ನು ಸಲ್ಲಿಸುತ್ತ ಬಂದಿದೆ. ಬಾಬಾಸಾಹೇಬ್ ಅವರ ಶಿಕ್ಷಣದ ಕನಸನ್ನು ಮುಂದುವರೆಸುವುದರಲ್ಲಿ ನಮ್ಮ ಹೊಣೆಗಾರಿಕೆಯೂ ಇದೆಯಾದ್ದರಿಂದ ಅಂಬೇಡ್ಕರ್ ನೆನಪಿನ ಜೊತೆಯಲ್ಲಿ ನಮ್ಮ ಹೊಣೆಗಾರಿಕೆಗಳನ್ನು ನೆನಪಿಸಿಕೊಳ್ಳುತ್ತಿದ್ದೇವೆ.

ಈ ಮೇಲಿನ ಮಾತುಗಳಲ್ಲಿ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಮೂಲಕ ಗಂಗಾಧರಯ್ಯ ಅವರ ಬದುಕಿನ ಗುರಿ ಏನೆಂಬುದನ್ನು ತಿಳಿಯಬಹುದಾಗಿದೆ. ಅಲ್ಲದೆ ಅಂಬೇಡ್ಕರ್, ಬುದ್ಧ ಮತ್ತು ಶಿಕ್ಷಣದ ಜೊತೆಗೆ ಗಂಗಾಧರಯ್ಯ ಅವರು ಏರ್ಪಡಿಸಿಕೊಂಡಿರುವ ಸಂಬಂಧಗಳು ಮನವರಿಕೆಯಾಗುತ್ತವೆ. ಬುದ್ಧ, ಅಂಬೇಡ್ಕರ್ ಮೊದಲಾದವರ ಜಾಡಿನಲ್ಲಿ ಹೆಚ್.ಎಂ.ಗಂಗಾಧರಯ್ಯ ಅವರು ಹೆಜ್ಜೆ ಇಟ್ಟಿದ್ದಾರೆಂಬ ಸಂಗತಿಯನ್ನು ತಿಳಿಯಬಹುದಾಗಿದೆ.

೧೯೯೦ರಲ್ಲಿ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯದಲ್ಲಿ ಚಿತ್ರಬಿಡಿಸುವ ಸ್ಪರ್ಧೆಯನ್ನು ಗಂಗಾಧರಯ್ಯ ಅವರ ನೇತೃತ್ವದಲ್ಲಿ ಪ್ರಾರಂಭಿಸಲಾಯಿತು.[೨೮] ನೂರು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಸ್ಪರ್ಧೆಯಲ್ಲಿ ಸುಮಾರು ಮೂರು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ

ಕಲಾವಂತಿಕೆಯನ್ನು ಪ್ರದರ್ಶನಕ್ಕಿಡುತ್ತಾರೆ. ಈ ಚಿತ್ರ ಬಿಡಿಸುವ ಸ್ಪರ್ಧೆಯು ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯದ ಲಾಂಛನವಾಗಿದೆ. ಗಂಗಾಧರಯ್ಯ ಅವರಿಗೆ ೨೪-೦೩-೨೦೦೮ ರಂದು ತುಮಕೂರು ವಿಶ್ವವಿದ್ಯಾಲಯ ಮರಣೋತ್ತರ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ. ಪ್ರಗತಿಪರ ಬೆಳವಣಿಗೆಗೆ ಕಾರಣರಾದ ಗಂಗಾಧರಯ್ಯ ಅವರು ಅನೇಕ ಸಂದರ್ಭಗಳಲ್ಲಿ ಎಲೆ ಮರೆಯ ಕಾಯಿಯಂತೆ ಇದ್ದರು. ಸಮಾಜ ಸೇವೆಗಾಗಿಯೇ ತಮ್ಮ ಬದುಕನ್ನು ಮೀಸಲಾಗಿರಿಸಿದ್ದರೆಂಬುದು ಗಮನಾರ್ಹ.

ಕೊನೆ ಟಿಪ್ಪಣಿಗಳು

೧. ಮಾದೇವ್ ಭರಣಿ, ಶಿಕ್ಷಣ ಭೀಷ್ಮ, ೧೯೯೪, ಪು.೪೭

೨. ಅದೇ, ಪು.೪೭

೩. ಕವಿತಾಕೃಷ್ಣ, ಸಾಧನೆಯ ಶಿಲ್ಪಿ, ೧೯೮೬, ಪು.೪೯

೪. ಮಾದೇವ್ ಭರಣಿ, ಶಿಕ್ಷಣ ಭೀಷ್ಮ, ೧೯೯೪, ಪು.೪೮

೫. ಅದೇ, ಪು.೬೪

೬. ಅದೇ, ಪು.೬೪

೭. ಅದೇ, ಪು.೬೫

೮. ಅದೇ, ಪು.೬೬

೯. ಅದೇ, ಪು.೬೬

೧೦. ಅದೇ, ಪು.೬೭

೧೧. ಅದೇ, ಪು.೬೮

೧೨. ಅದೇ, ಪು.೬೮

೧೩. ಅದೇ, ಪು.೬೯

೧೪. ಅದೇ, ಪು.೬೯

೧೫. ಮಾದೇವ್ ಭರಣಿ, ಶಿಕ್ಷಣ ಭೀಷ್ಮ, ೧೯೯೪, ಪು.೧೦೦

೧೬. ಅದೇ, ಪು.೭೫

೧೭. ಅದೇ, ಪು.೭೫

೧೮. ಅದೇ, ಪು.೭೬

೧೯. ಕವಿತಾಕೃಷ್ಣ, ಸಾಧನೆಯ ಶಿಲ್ಪಿ, ೧೯೮೬, ಪು.೭೧

೨೦. ಅದೇ, ಪು.೭೧

೨೧. ಲಕ್ಷ್ಮಣ ಸಿ.ಎಂ., ತುಮಕೂರು ಜಿಲ್ಲೆಯ ಭೌಗೋಳಿಕ ಪರಿಸರ ಮತ್ತು ಅಭಿವೃದ್ಧಿ, ೨೦೦೦, ಪು.೧೧೭

೨೨. ಲಕ್ಷ್ಮಣ ಸಿ.ಎಂ., ತುಮಕೂರು ಜಿಲ್ಲೆಯ ಭೌಗೋಳಿಕ ಪರಿಸರ ಮತ್ತು ಅಭಿವೃದ್ಧಿ, ೨೦೦೦, ಪು.೧೧೭

೨೩. ಮಾದೇವ್ ಭರಣಿ, ಶಿಕ್ಷಣ ಭೀಷ್ಮ, ೧೯೯೪, ಪು.೮೪

೨೪. ಅದೇ, ಪು.೮೭

೨೫. ಅದೇ, ಪು.೮೭

೨೬. ಅದೇ, ಪು.೮೯

೨೭. ಅದೇ, ಪು.೯೪

೨೮. Odyssey college magzine, Sri Siddhartha institute of technology, 2009, p.48

ಅಧ್ಯಾಯ ಐದು

ಸಮಾರೋಪ

೫.೧. ಅಧ್ಯಯನದ ಫಲಿತಗಳು

೫.೨. ಸಂಶೋಧನೆಯ ಅನಿಸಿಕೆಗಳು

೫

ಸಮಾರೋಪ

೫.೧. ಅಧ್ಯಯನದ ಫಲಿತಗಳು

'ಶಿಕ್ಷಣತಜ್ಞ ಡಾ.ಹೆಚ್.ಎಂ. ಗಂಗಾಧರಯ್ಯ ಅವರ ಜೀವನ ಮತ್ತ ಸಾಧನೆ' ಎಂಬ ವಿಷಯವನ್ನು ನಿಬಂಧಕ್ಕೆ ಆಯ್ಕೆ ಮಾಡಿ ಅದರ ಅಧ್ಯಯನದಲ್ಲಿ ತೊಡಗಿದ್ದರಿಂದ ಕೆಲವು ಫಲಿತಗಳನ್ನು ಕಂಡುಕೊಳ್ಳಲಾಯಿತು. ಚರಿತ್ರೆಯ ವೈಧಾನಿಕತೆಯನ್ನು ಈ ಅಧ್ಯಯನದಲ್ಲಿ ಅಳವಡಿಸಿ ಆಂತರಿಕ ಮತ್ತು ಬಾಹ್ಯ ವಿಮರ್ಶೆಯನ್ನು ಮಾಡಲಾಗಿದೆ. ಗಂಗಾಧರಯ್ಯ ಅವರನ್ನು ಕುರಿತಂತೆ ಇದುವರೆಗೆ ಯಾರ‍್ಯಾರು ಅಧ್ಯಯನ ಮಾಡಿದ್ದಾರೆ, ಅವರ ಆಸಕ್ತಿಯ ವಿಚಾರಗಳೇನು ಎಂಬುದರ ಬಗ್ಗೆ ಸಮೀಕ್ಷೆಯನ್ನು ಮಾಡಲು ಸಾಧ್ಯವಾಯಿತು. ಗಂಗಾಧರಯ್ಯ ಅವರ ಬದುಕು-ಮೆಲುಕನ್ನು ಈ ಅಧ್ಯಯನದ ಮೂಲಕ ಪರಿಚಯಿಸಿ ಗಂಗಾಧರಯ್ಯ ಅವರ ಕೌಟುಂಬಿಕ ಪರಿಸರದ ಸ್ಥಿತಿಗತಿ ಅವರ ಮೇಲೆ ಸೈದ್ಧಾಂತಿಕ ಪ್ರಭಾವ ಯಾವ ರೀತಿ ಆಯಿತು ಮತ್ತು ಗಂಗಾಧರಯ್ಯ ಅವರ ಅಂತಿಮ ದಿನಗಳ ಬಗೆಗಿನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ತಿಳಿದುಕೊಳ್ಳಲಾಯಿತು.

ಗಂಗಾಧರಯ್ಯ ಅವರ ಸಮಕಾಲೀನ ಸಂದರ್ಭದಲ್ಲಿ ಸಮಾಜದ ದಲಿತರ ಸ್ಥಿತಿಗತಿಯ ಬಗ್ಗೆ ಒಂದು ಅವಲೋಕನ ಮಾಡಲಾಗಿದೆ. ಆ ಸಂದರ್ಭದಲ್ಲಿ ಮೈಸೂರು ಸಂಸ್ಥಾನ ದಲಿತರನ್ನು ಸ್ವಾವಲಂಭಿಗಳನ್ನಾಗಿ ಮಾಡುವಲ್ಲಿ ಹೇಗೆ ಶ್ರಮಿಸಿತು. ಅಂದಿನ ಸಮಾಜದಲ್ಲಿದ್ದ ಅನಿಷ್ಟಪದ್ಧತಿಗಳನ್ನು ನಿರ್ಮೂಲನೆ ಮಾಡುವಲ್ಲಿ ಮೈಸೂರು ಸಂಸ್ಥಾನ ಯಾವ ಯಾವ ಕಾನೂನುಗಳನ್ನು ಜಾರಿಗೆ ತಂದಿತು ಎಂಬ ವಿಷಯದ ಬಗ್ಗೆ ಬೆಳಕು ಚೆಲ್ಲಲಾಗಿದೆ. ದಲಿತರನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕಾಗಿಯೇ ತಮ್ಮ ಜೀವನವನ್ನು ಮೀಸಲಾಗಿಟ್ಟಂತಹ ಪಂಚಮರ ಆರ್.ಗೋಪಾಲಸ್ವಾಮಿ ಅಯ್ಯರ್ ಅವರ ಕಾಲದಲ್ಲಿ ದಲಿತ ಶಿಕ್ಷಣ ಹೇಗೆ ಪ್ರಗತಿ ಪಥದಲ್ಲಿತ್ತು ಎಂಬ ವಿಷಯಗಳು ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಗಂಗಾಧರಯ್ಯ ಅವರ ಸಾಧನೆಯ ವಿಷಯಕ್ಕೆ ಬಂದರೆ ಇಲ್ಲಿ ಕೆಲವು ಹೊಸ ವಿಷಯಗಳ ಬಗ್ಗೆ ಫಲಿತಗಳನ್ನು ಕಂಡುಕೊಳ್ಳಲಾಗಿದೆ. ಗಂಗಾಧರಯ್ಯ ಅವರು ತಮ್ಮ ಕಲಾಶಿಕ್ಷಕ ಹುದ್ದೆಗೆ ರಾಜೀನಾಮೆ ನೀಡಿ ಸಮಾಜ ಸುಧಾರಣೆಗಾಗಿ ಹೇಗೆ ಹೋರಾಟವನ್ನು ಮಾಡಿದರು. ರಾಜಕೀಯದಲ್ಲಿದ್ದ ಸಂದರ್ಭದಲ್ಲಿ ಅವರು ಅನುಭವಿಸಿದ ನೋವು, ಸಮಾಜ ಸುಧಾರಣೆಗಾಗಿ ಕೈಗೊಂಡಂತಹ ಕ್ರಮಗಳ ಬಗ್ಗೆ, ಅವರು ಬೌದ್ಧಧರ್ಮದ ಕಡೆ ಒಲವನ್ನು ತೋರಿದ ಕಾರಣಗಳ ಬಗ್ಗೆ ಚಿತ್ರಕಲೆಯ ಬಗ್ಗೆ ಹೊಂದಿದ್ದ ಆಸಕ್ತಿಯ ಬಗ್ಗೆ ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದರಿಂದ ಕೆಲವು ಫಲಿತಗಳು ಹೊರಬಂದಿವೆ. ಗಂಗಾಧರಯ್ಯ ಅವರು ಸಿದ್ಧಾರ್ಥ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸುವುದರ ಮೂಲಕ ಸಮಾಜ ಸೇವೆ ಮಾಡಿದ್ದರ ಬಗ್ಗೆ ವಿಶ್ಲೇಷಣೆ ಮಾಡಲು ಸಾಧ್ಯವಾಗಿದೆ.

ಇಷ್ಟು ಅಂಶಗಳ ಫಲಿತಗಳನ್ನು ಅಧ್ಯಯನ ಮಾಡಿದ್ದರಿಂದ ಕಂಡುಕೊಂಡಿದ್ದು ಇನ್ನೂ ಹಲವು ವಿಷಯಗಳು ಅಧ್ಯಯನಕ್ಕೊಳಗಾಗದೆ ಹಾಗೆಯೇ ಬಾಕಿ ಉಳಿದಿದೆ. ಅವು ಮುಂದಿನ ಸಂಶೋಧಕರಿಗೆ ಸವಾಲಾಗಿ ಈ ನಿಬಂಧವು ಕಿರು ಮಾಹಿತಿಯ ಅಂಶವಾಗಿ ಗೋಚರಿಸಿದರೆ ಆಶ್ಚರ್ಯವೇನಲ್ಲ.

೫.೨. ಸಂಶೋಧನೆಯ ಅನಿಸಿಕೆಗಳು

ಸಾಮಾಜಿಕ ವಿಜ್ಞಾನಗಳಿಗೆ ಸಂಬಂಧಿಸಿದ ವಿಷಯಗಳ ಸಂಶೋಧನೆಯಲ್ಲಿ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸುವುದಕ್ಕೆ ಕೆಲವೊಂದು ಇತಿಮಿತಿಗಳು ಎದುರಾಗುತ್ತವೆ. ಇಲ್ಲಿ ಮಾನವ ಮಾನವನನ್ನೇ ಅಧ್ಯಯನ ಮಾಡುವುದರಿಂದ ಮಿತಿಗೊಳಪಟ್ಟು ಖಚಿತವಾದ ತೀರ್ಮಾನಗಳನ್ನು ಹೇಳಲು ಬರುವುದಿಲ್ಲ. ಕಾರಣ ಬದಲಾಗುತ್ತಾ ಸಾಗುವ ಮಾನವ ಸ್ವಭಾವ ಮತ್ತು ಚಲನಾತ್ಮಕ ಸಮಾಜ ಇವು ಒಂದು ನಿರ್ದಿಷ್ಟ ನಿರ್ಣಯಕ್ಕೆ ಬರಲು ಅಡ್ಡಿಯಾಗುತ್ತವೆ. ಅಲ್ಲದೆ ಯಾವುದೇ ಪ್ರಯೋಗ ಸನ್ನಿವೇಶ ಘಟನೆಗಳಿಂದ ಹೊರಬೀಳುವ ಫಲಿತಾಂಶಗಳು ಸಾರ್ವತ್ರಿಕವಾಗಿರುವುದಿಲ್ಲ. ಹಾಗೆಯೇ ಭವಿಷ್ಯವನ್ನು ನುಡಿಯಲು ಸಾಧ್ಯವಿರುವುದಿಲ್ಲ. ಈ ಕಾರಣಗಳಿಂದಾಗಿ ಕೈಗೊಂಡಿರುವ ಅಧ್ಯಯನ ವ್ಯಕ್ತಿಗೆ ಸಂಬಂಧಿಸಿರುವುದರಿಂದ ಇಲ್ಲಿ ಗಮನಿಸಲಾಗಿರುವ ವಿಚಾರಗಳು ಖಚಿತತೆಯಿಂದ ಕೂಡಿವೆ ಎಂದು ವ್ಯಕ್ತಪಡಿಸಲಾಗದಿದ್ದರೂ ಸತ್ಯಕ್ಕೆ ಹತ್ತಿರವಾಗಿವೆ. ಆದರೆ 'ಹಿಸ್ಟರಿ ರಿಪೀಟ್ಸ್' ಎಂಬ ಮಾತಿನಂತೆ ಇತಿಹಾಸ ಮರೆತವರು ಇತಿಹಾಸ ಸೃಷ್ಟಿಸಲಾರರು ಎಂಬ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೇಳಿಕೆ ಸತ್ಯವೆಂದು ಗೋಚರಿಸುತ್ತದೆ. ಈ ಹಿನ್ನೆಲೆಯಲ್ಲಿ ಭಾರತೀಯರು ಪರಕೀಯರ ದಾಸ್ಯದಿಂದ ಮುಕ್ತರಾಗಲು ಹೋರಾಡಿದ ವಿಧಾನ ಮತ್ತು ನಾಡು ಕಟ್ಟುವ ನಿಟ್ಟಿನಲ್ಲಿ ಅಂದು ಹಲವಾರು ಮಹನೀಯರು ಎದುರಿಸಿದ ಸಮಸ್ಯೆಗಳು ನಿಭಾಯಿಸಿದ ರೀತಿ ಇವುಗಳಿಂದ ಸಮಾಜದ ಮೇಲಾದ ಪರಿಣಾಮ ಇವೆಲ್ಲ ಪ್ರಸ್ತುತ ಜನತೆಗೆ ಮಾರ್ಗದರ್ಶಕಗಳಾಗುತ್ತವೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಗಂಗಾಧರಯ್ಯ ಅವರು ಒಂದು ಸಾಮಾನ್ಯ ದಲಿತ ಕುಟುಂಬದಲ್ಲಿ ಹುಟ್ಟಿದವರು. ಹಾಗಾಗಿ ಅವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ, ಕಲಾಶಿಕ್ಷಕರಾಗಿದ್ದಂತಹ ಸಂದರ್ಭದಲ್ಲಿ, ರಾಜಕೀಯದಲ್ಲಿದ್ದಂತಹ ಸಂದರ್ಭದಲ್ಲಿ ಅಸ್ಪೃಶ್ಯತೆಯ ಕ್ರೂರ ಅವಮಾನ, ಹಿಂಸೆ, ದೌರ್ಜನ್ಯಗಳಿಗೆ ಒಳಗಾಗಿದ್ದಾರೆ. ಅಂತಹ ಸಂದರ್ಭದಲ್ಲೆಲ್ಲ ಸೌಮ್ಯವಾಗಿಯೇ ಚುರುಕು ಮುಟ್ಟಿಸುವಂತೆ ಪ್ರತಿಕ್ರಿಯಿಸಿದ್ದಾರೆ. ಆ ಸಮಯದಿಂದಲೇ ಅವರು ತಾನು ಒಬ್ಬ ಉದ್ಯೋಗದಲ್ಲಿದ್ದು ನೆಮ್ಮದಿಯ ಜೀವನ ನಡೆಸುವುದಕ್ಕಿಂತ ಹಿಂದೂ ಸಮಾಜದಲ್ಲಿರುವ ಅಸ್ಪೃಶ್ಯತೆಯ ಘೋರ ಶಿಕ್ಷೆಗೊಳಗಾಗಿರುವ ದಲಿತರ ಪರ, ಅವರ ಏಳಿಗೆಗಾಗಿ ದುಡಿಯುವುದೇ ನನ್ನ ಮುಂದಿನ ಉದ್ದೇಶ ಎಂದು ನಂಬಿ ಅವರನ್ನು ಮೂಢನಂಬಿಕೆಗಳಿಂದ, ದುಶ್ಚಟಗಳಿಂದ ಹೊರತರುವುದೇ ತನ್ನ ಮುಖ್ಯಗುರಿ ಎಂದು ನಿರ್ಧರಿಸಿದರು. ದಲಿತರಿಗಷ್ಟೇ ಅವರು ಸೀಮಿತವಾಗಿರಲಿಲ್ಲ. ಸಮಾಜದ ಎಲ್ಲ ವರ್ಗದವರ ಏಳಿಗೆಗಾಗಿ ದುಡಿದರು. ಸಮಾಜ ಸೇವೆಯನ್ನೇ ತಮ್ಮ ಬದುಕನ್ನಾಗಿಸಿಕೊಂಡ ಗಂಗಾಧರಯ್ಯ ಅವರ ಬಗ್ಗೆ ಸಂಶೋಧನೆಯನ್ನು ಕೈಗೊಂಡಿದ್ದು ನಿಜಕ್ಕೂ ಒಂದು ಸವಾಲಿನ ವಿಷಯ.

ಗಂಗಾಧರಯ್ಯ ಅವರು ಕಲಾಶಿಕ್ಷಕ ಹುದ್ದೆಯಲ್ಲಿಯೇ ಮುಂದುವರೆದಿದ್ದರೆ, ನೆಮ್ಮದಿಯ ಜೀವನವನ್ನು ನಡೆಸುವುದಕ್ಕೆ ಯಾವ ತೊಂದರೆಯೂ ಇರಲಿಲ್ಲ. ಚಿತ್ರಕಲೆಯ ಕ್ಷೇತ್ರದಲ್ಲಿಯೇ ಮುಂದುವರಿದಿದ್ದರೆ ಅವರು ಅಪಾರ ಹಣ, ಕೀರ್ತಿ ಗಳಿಸುವುದರಲ್ಲಿ ಯಾವ ಸಂದೇಹವೂ ಇರಲಿಲ್ಲವೆನ್ನಬಹುದಾಗಿದೆ. ಅಲ್ಲದೆ ೧೯೪೫ರಿಂದ ೧೯೫೪ರ ಅವಧಿಯಲ್ಲಿ ಎರಡು ಬಾರಿ ವಿಧಾನ ಸಭೆಯನ್ನು ಪ್ರವೇಶಿಸಿದ್ದರು. ಹಾಗಾಗಿ ಅವರು ಭವಿಷ್ಯದ ದಿನಗಳಲ್ಲಿ ಪ್ರಮುಖ ರಾಜಕಾರಣಿಯೇ ಆಗಬಹುದಿತ್ತು. ಅವರಿಗೆ ಬಹಳ ಆಸಕ್ತಿ ಇದ್ದಂತಹ ಚಿತ್ರಕಲೆಯ ಕ್ಷೇತ್ರವನ್ನು ಕಡೆಗಣಿಸಿ, ರಾಜಕೀಯಕ್ಕೂ ವಿಧಾಯ ಹೇಳಿದರು. ಕಲಾಶಿಕ್ಷಕ ಹುದ್ದೆಯಲ್ಲಿಯೇ ಮುಂದುವರೆದರೆ, ರಾಜಕೀಯದಲ್ಲೇ ಮುಂದುವರೆದರೆ ಸಮಾಜ ಸೇವೆಯನ್ನು ಮಾಡಲು ಸಾಧ್ಯವಿಲ್ಲ. ಸಮಾಜ ಸೇವೆಯನ್ನು ಮಾಡುತ್ತಲೇ ತಮ್ಮ ಹುದ್ದೆಗಳಿಗೆ ನಿರ್ದಿಷ್ಟವಾದ, ನಿಷ್ಪಕ್ಷಪಾತವಾದ ನ್ಯಾಯವನ್ನು ಸಲ್ಲಿಸಲು ಸಾಧ್ಯವಿಲ್ಲವೆಂಬುದನ್ನು ಅರಿತ ಗಂಗಾಧರಯ್ಯ ಅವರು ತಮ್ಮ ಕಲಾಶಿಕ್ಷಕ ಹುದ್ದೆಗೆ ರಾಜೀನಾಮೆಯನ್ನು ನೀಡಿದರು.

ಗಂಗಾಧರಯ್ಯ ಅವರು ದಲಿತರಲ್ಲಿರುವ ಅಜ್ಞಾನ, ಮೂಢನಂಬಿಕೆ, ದುಶ್ಚಟಗಳನ್ನು ಹೋಗಲಾಡಿಸು ವುದಕ್ಕಾಗಿ ಹೋರಾಟವನ್ನೇ ಮಾಡಿದರು. ಆದರೆ ಆ ಹೋರಾಟ ಎಷ್ಟರ ಮಟ್ಟಿಗೆ ಯಶಸ್ವಿಯಾಯಿತೆಂಬುದು ಚರ್ಚಿಸಲೇ ಬೇಕಾದ ಸಂಗತಿ. ಆದರೆ ಇಂದಿಗೂ ಆ ಜನಾಂಗ ಮೂಢನಂಬಿಕೆ, ಅಜ್ಞಾನ, ದುಶ್ಚಟಗಳಿಂದ ಹೊರಬರಲಾಗುತ್ತಿಲ್ಲವೆಂಬುದು ವಿಷಾದನೀಯ ಸಂಗತಿ. ಅವರು ೧೯೫೦ರ ದಶಕದಲ್ಲೇ ಇಂತಹ ಹೋರಾಟವನ್ನು ಆರಂಭಿಸುವುದರ ಮೂಲಕ ದಲಿತರನ್ನು ಮೇಲೆತ್ತಲು ಪ್ರಯತ್ನಿಸಿದ್ದು ಒಂದು ಮಹತ್ವ

ಪೂರ್ಣವಾದ ಸಂಗತಿಯಾಗಿದೆ ಇದಕ್ಕೆ ದಲಿತರಿಗೆ ಶಿಕ್ಷಣ ಮುಖ್ಯ. ಅದಕ್ಕಾಗಿ ಅವರು ಹಲವಾರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದರು.

ದಲಿತರಿಗಾಗಿ ಉಚಿತ ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆ ಮಾಡುವುದು ಗಂಗಾಧರಯ್ಯ ಅವರಿಗೆ ಬಹುದೊಡ್ಡ ವಿಷಯವಾಗಿರಲಿಲ್ಲ. ಆದರೆ ವಿದ್ಯಾರ್ಥಿ ನಿಲಯಗಳನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗುವುದೇ ಅವರಿಗೆ ಸವಾಲಿನ ವಿಷಯವಾಗಿತ್ತು. ತಾವು ಪ್ರಾರಂಭಿಸಿದ ಉಚಿತ ವಿದ್ಯಾರ್ಥಿನಿಲಯಗಳನ್ನು ಮುನ್ನಡೆಸಿಕೊಂಡು ಹೋಗುವುದಕ್ಕಾಗಿ ಹಳ್ಳಿಹಳ್ಳಿಗೆ ಪಾದಯಾತ್ರೆ ಮಾಡುತ್ತಾ ಜನಸಾಮಾನ್ಯರಿಂದ ಧವಸ, ಧಾನ್ಯ ಮೊದಲಾದವುಗಳನ್ನು ಸಂಗ್ರಹಿಸುವುದರ ಮೂಲಕ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದ್ದರು. ಈಗಿನ ಶಿಕ್ಷಣ ಸಂಸ್ಥೆಗಳ ಹಿನ್ನೆಲೆಯಲ್ಲಿ ನಾವು ಸಾಧಾರಣವಾಗಿ ಮಠಾಧಿಪತಿಗಳು, ಇಲ್ಲವೆ ಪ್ರಭಾವಿ ರಾಜಕಾರಣಿಗಳ ನಾಯಕತ್ವವನ್ನೇ ಕಾಣುತ್ತೇವೆ. ಅವಿಲ್ಲದಿದ್ದರೂ ಈ ಎರಡರ ಬೆಂಬಲ ಪಡೆದ ಮುಂದುವರಿದ ಜನಾಂಗಗಳ ನೇತೃತ್ವದ ಸಂಸ್ಥೆಗಳನ್ನೇ ಕಾಣುತ್ತೇವೆ. ಬೇರೇನಿಲ್ಲದಿದ್ದರೂ ಅತ್ಯಂತ ಶ್ರೀಮಂತ ಹಿನ್ನೆಲೆಯಾದರೂ ಇರಲೇಬೇಕು. ಇವೇನಿಲ್ಲದಿದ್ದರೂ ಪ್ರಾಮಾಣಿಕತೆ ಮತ್ತು ಸಮಾಜ ಬದ್ಧತೆಗಳಿಂದಲೇ ಏನೆಲ್ಲವನ್ನು ಸಾಧಿಸಿದ ಗಂಗಾಧರಯ್ಯ ಅವರ ಬಗ್ಗೆ ಪ್ರಶಂಸೆಯ ಮಾತುಗಳಾಡುವುದು ಅತಿಶಯೋಕ್ತಿಯೇನಲ್ಲವೆನಿಸುತ್ತದೆ.

ಸರ್ವೋದಯ ನೇತಾರರಾದ ವಿನೋಬಾ ಭಾವೆ ಅವರಿಂದ ಪ್ರಭಾವಿತರಾದ ಗಂಗಾಧರಯ್ಯ ಅವರು ೧೯೫೯ರಲ್ಲಿ ಗೊಲ್ಲಹಳ್ಳಿಯಲ್ಲಿ ಶ್ರೀ ಸಿದ್ಧಾರ್ಥ ಪ್ರೌಢಶಾಲೆಯನ್ನು ಪ್ರಾರಂಭಿಸುವುದರ ಮೂಲಕ ಶಿಕ್ಷಣ ಚಳವಳಿಗೆ ನಾಂದಿ ಹಾಡಿದರು. ಹೀಗೆ ಗೊಲ್ಲಹಳ್ಳಿಯಲ್ಲಿ ಪ್ರಾರಂಭವಾದ ಶಿಕ್ಷಣ ಚಳವಳಿ ಜಿಲ್ಲೆಯನ್ನಿಡಿ ವ್ಯಾಪಿಸಿದ್ದಲ್ಲದೆ ನೆರೆಹೊರೆಯ ಜಿಲ್ಲೆಯಾದ್ಯಂತ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿತು. ಬೆಂಗಳೂರು, ಮೈಸೂರು, ಮಂಡ್ಯ, ಹಾಸನ ಮತ್ತು ಕೋಲಾರಗಳಲ್ಲಿ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ ತನ್ನ ನೆಲೆಗಳನ್ನು ಸ್ಥಾಪಿಸಿದ್ದು ಗಮನಾರ್ಹ.

ಗಂಗಾಧರಯ್ಯ ಅವರು ಕನಸುಗಾರರು ಮಾತ್ರವಲ್ಲ. ತಾವು ಕನಸು ಕಂಡಿದ್ದನ್ನು ನನಸಾಗಿಸಿಕೊಳ್ಳ ಬಲ್ಲಂತಹ ವ್ಯಕ್ತಿಯಾಗಿದ್ದರು. ದೇಶದಲ್ಲಿಯೇ ಅಸ್ಪೃಶ್ಯ ಹಿನ್ನೆಲೆಯಿಂದ ಬಂದ ವ್ಯಕ್ತಿಯೊಬ್ಬ ಗಂಗಾಧರಯ್ಯ ಅವರಷ್ಟು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆಂಬ ಉದಾಹರಣೆಗಳು ಬಹಳ ವಿರಳ. ಅಲ್ಲದೆ ಗಂಗಾಧರಯ್ಯ ಅವರಂತೆ ಬಡತನ ಹಿನ್ನೆಲೆಯಿಂದ ಬಂದ ವ್ಯಕ್ತಿಯೊಬ್ಬರು ಇವರಷ್ಟು ಸಾಧನೆಗಳನ್ನು ಹೊಂದಿರುವುದು ಸಹ ವಿರಳವೆಂದೇ ಹೇಳಬಹುದು. ಸ್ವಾಭಿಮಾನದ ಬದುಕಿಗೆ, ಪ್ರತಿಯೊಬ್ಬರ ವಿಮೋಚನೆಗೆ ಅಂಬೇಡ್ಕರ್ ನೀಡಿದ ಮೂಲಮಂತ್ರವು ಶಿಕ್ಷಣವೇ ಆಗಿದ್ದರಿಂದ ಶಿಕ್ಷಣ ಕ್ಷೇತ್ರದಲ್ಲಿಯೇ ತಮ್ಮ ಸದ್ದಿಲ್ಲದ ಹೋರಾಟವನ್ನು ಮುಂದುವರೆಸಿದರು.

ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜನ್ನು ಸ್ಥಾಪನೆ ಮಾಡಿದ್ದು ಗಂಗಾಧರಯ್ಯ ಅವರ ಬದುಕಿನ ಬಹುಮುಖ್ಯ ಸಾಧನೆಯಾಗಿದೆ. ಅವರು ವೈದ್ಯಕೀಯ ಕಾಲೇಜನ್ನು ತೆರೆಯುವ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಅನುಮತಿಯನ್ನು ಪಡೆಯುವುದಕ್ಕಾಗಿ ಸುಪ್ರೀಂ ಕೋರ್ಟಿಗೆ ದೂರನ್ನು ಸಲ್ಲಿಸದೆ ಇದ್ದಿದ್ದರೆ ವೈದ್ಯಕೀಯ ಕಾಲೇಜು ಪ್ರಾರಂಭಿಸುವುದು ಇನ್ನೂ ಸಾಧ್ಯವಾಗುತ್ತಿರಲಿಲ್ಲವೇನೋ? ವೈದ್ಯಕೀಯ ಕಾಲೇಜು ಸ್ಥಾಪನೆ ವಿಷಯಕ್ಕೆ ಸಂಬಂಧಿಸಿದಂತೆ ಆ ಸಂದರ್ಭದಲ್ಲಿದ್ದಂತಹ ಆಗಿನ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿದ್ದಂತಹ ಮಲ್ಲಿಕಾರ್ಜುನ ಖರ್ಗೆ, ಜಿ.ಪರಮೇಶ್ವರ್, ಜಿ.ಶಿವಪ್ರಸಾದ್, ರಾಮಕೃಷ್ಣಹೆಗಡೆ ಮೊದಲಾದವರನ್ನು ವಿಮರ್ಶೆಗೆ ಒಳಪಡಿಸುವ ಅಧ್ಯಯನ ಆಗಬೇಕಿದೆ. ದಲಿತರ ಮುಂದಾಳುಗಳಿಂದಾದ ಶಿಕ್ಷಣ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಇತಿಹಾಸವನ್ನೇನಾದರೂ ಬರೆಯಬೇಕಾದರೆ ಹೆಚ್.ಎಂ.ಗಂಗಾಧರಯ್ಯ ಅವರ ಹೆಸರನ್ನು ಪ್ರಸ್ತಾಪಿಸದೆ ಯಾರೂ ಮುಂದೆ ಹೋಗುವಂತೆಯೇ ಇಲ್ಲ ಎಂಬುದು ಉಲ್ಲೇಖಾರ್ಹ.

ಗಂಗಾಧರಯ್ಯ ಅವರ ಬಗ್ಗೆ ಇದು ಮೊದಲ ಸಂಶೋಧನಾ ನಿಬಂಧವಾಗಿದ್ದು, ಇದರಲ್ಲಿ ಕೆಲವು ವಿಷಯಗಳ ಹುಡುಕಾಟ ಮಾಡಿರುವುದಂತೂ ಸತ್ಯ. ಇದು ಸಂಶೋಧನೆಯಲ್ಲಿ ಅಂಬೆಗಾಲಿಡುವ ಪ್ರಯತ್ನವಾಗಿದ್ದು, ಮುಂದಿನ ಸಂಶೋಧಕರು ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಸಂಶೋಧನೆಯನ್ನು ಮಾಡಲು ಒಲವನ್ನು ತೋರಬೇಕಾಗಿದೆ. ಆಗ ಮಾತ್ರ ಗಂಗಾಧರಯ್ಯ ಅವರ ಸಾಧನೆಗೆ ನ್ಯಾಯ ಒದಗಿಸಲು ಸಾಧ್ಯ.

ಅನುಬಂಧಗಳು

೧. ಆಕರ ಗ್ರಂಥಗಳು

೨. ಬದುಕಿನ ಮುಖ್ಯ ಘಟನೆಗಳು

೩. ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ವಿವಿಧ ವಿದ್ಯಾಕೇಂದ್ರಗಳು

೪. ಛಾಯಾಚಿತ್ರಗಳು

೧

ಗ್ರಂಥಋಣ

೧. ಪ್ರಾಥಮಿಕ ಆಕರಗಳು

ಅ. ಸಂದರ್ಶನಗಳು

೧. ಕವಿತಾಕೃಷ್ಣ

೨. ತಿಮ್ಮಣ್ಣಪ್ಪ

೩. ನಂಜುಂಡಪ್ಪ

೪. ಪರಮೇಶ್ವರ ಜಿ.

೫. ಸೌಭಾಗ್ಯಮ್ಮ

೨. ಅನುಷಂಗಿಕ ಆಕರಗಳು

೧. ಕರೀಗೌಡ ಬೀಚನಹಳ್ಳಿ, ವ್ಯಷ್ಟಿ ಮತ್ತು ಸಮಷ್ಟಿ, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು, ೨೦೦೩.

೨. ಕವಿತಾ ಕೃಷ್ಣ, ಸಾಧನೆಯ ಶಿಲ್ಪಿ, ಶ್ರೀ ಸಿದ್ಧಾರ್ಥ ಪ್ರಕಾಶನ, ತುಮಕೂರು ತಾಲ್ಲೂಕು, ೧೯೮೬.

೩. ಗೋವಿಂದರಾಜು ಸಿ.ಆರ್.(ಸಂ), ಇತಿಹಾಸ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೪. ಗೋವಿಂದರಾಜು ಸಿ.ಆರ್.(ಸಂ), ಚರಿತ್ರೆ ಅಧ್ಯಯನ, ಸಂಪುಟ ೩, ಸಂಚಿಕೆ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೫. ಚಿನ್ನಸ್ವಾಮಿ ಸೋಸಲೆ ಎನ್., ಭಾರತೀಯ ಸಮಾಜ ಮತ್ತು ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೬. ಚಂದ್ರಶೇಖರ ಎಸ್., ದಕ್ಷಿಣ ಭಾರತ : ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೭. ಚಿನ್ನಸ್ವಾಮಿ ಸೋಸಲೆ ಎನ್., ಭಾರತೀಯ ಸಮಾಜ ಮತ್ತು ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೮. ಚಿನ್ನಸ್ವಾಮಿ ಸೋಸಲೆ ಎನ್., ಪ್ರಭುತ್ವ ಮತ್ತು ದಲಿತರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೬.

೯. ಚಿನ್ನಸ್ವಾಮಿ ಸೋಸಲೆ ಎನ್., ನಾಲ್ವಡಿ ಕೃಷ್ಣನ ಮೈಸೂರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೧೦. ಜವರಯ್ಯ ಮ.ನ., ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು, ೧೯೯೫.

೧೧. ಜಗಜೀವನರಾಮ್(ಮೂಲ), ಜಾತಿ ವ್ಯವಸ್ಥೆ, ಸಮಸ್ಯೆ ಸವಾಲುಗಳು, ರಾ.ಹು.(ಅನು), ಅನುವಾದ ಪ್ರಕಾಶನ, ಗುಲಬರ್ಗಾ, ೧೯೯೧.

೧೨. ಜೋಗನ್ ಶಂಕರ್, ದೇವದಾಸಿ ಸಂಪ್ರದಾಯ, ವಿವೇಚನಾ ಪ್ರಕಾಶನ, ಅಥಣಿ, ೧೯೯೩.

೧೩. ತಾಳ್ತಜೆ ವಸಂತಕುಮಾರ, ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ, ವಿನಯ ಪ್ರಕಾಶನ, ಬೆಂಗಳೂರು, ೧೯೯೮.

೧೪ ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ, ಮೈಸೂರು ನಂದೀಮಠ ಸಿ.ಎಸ್., ಕರ್ನಾಟಕ ಧರ್ಮಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೩.

೧೫. ಧರ್ಮ ರಕ್ಷಿತ ಮರಿಸ್ವಾಮಿ ಎಂ., ಬೆಳಕಿನ ಧರ್ಮ, ರೂಪ ಪ್ರಕಾಶನ, ಮೈಸೂರು, ೨೦೦೩.

೧೬. ದುರ್ಗಾದಾಸ್ ಕೆ.ಆರ್.(ಸಂ), ಆನಂದಮೂರ್ತಿ ಜಿ.ವಿ., ಮೂರು ದಲಿತ ಕಮ್ಮಟಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೨

೧೭. ನರೇಂದ್ರ ಕುಮಾರ್, ಹೊಸ ಸಮಾಜ ಮತ್ತು ಅಂಬೇಡ್ಕರ್, ಈಶ್ವರೀ ಪ್ರಕಾಶನ, ಮೈಸೂರು, ೨೦೦೨.

೧೮. ನರೇಂದ್ರ ಜಾಧವ್(ಮೂಲ), ಸಮುದ್ರಾರಕನಾಥ(ಅನು), ಬಹಿಷ್ಕೃತರು : ಒಂದು ನೆನಪು, ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೫.

೧೯. ನಾಯಕ ಜಿ.ಎಚ್., ನಿರಪೇಕ್ಷ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೪.

೨೦. ನಾಗರಾಜ ಡಿ.ಆರ್., ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೯.

೨೧. ಪುರುಷೋತ್ತಮ ಬಿಳಿಮಲೆ, ದಲಿತ ಜಗತ್ತು, ಹೊಸ ದಿಕ್ಕು ಪ್ರಕಾಶನ, ಬೆಂಗಳೂರು, ೧೯೯೮.

೨೨. ಪೋತೆ ಎಚ್.ಟಿ., ದಲಿತಾಂತರಂಗ, ತಿಪ್ಪಣಂಬು ಪ್ರಕಾಶನ, ಗುಲಬರ್ಗಾ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ರಾಯಚೂರು, ೨೦೦೪.

೨೩. ಬೇದ್ರೆ ಮಂಜುನಾಥ, ಕರ್ನಾಟಕ ಜಿಲ್ಲಾದರ್ಶನ ಮತ್ತು ಪ್ರೇಕ್ಷಣೀಯ ಸ್ಥಳಗಳು, ಕರಾವಳಿ ಪ್ರಕಾಶನ, ಮಂಗಳೂರು, ೨೦೦೭.

೨೪. ಬಸವಲಿಂಗಪ್ಪ ಬಿ., ಬುದ್ಧಮಾರ್ಗ : ಡಾ.ಬಿ.ಆರ್.ಹೆಜ್ಜೆ ಗುರುತಿನಲ್ಲಿ, ಕರ್ನಾಟಕ ಬುದ್ಧ ಧರ್ಮ ಸಮಿತಿ, ಬೆಂಗಳೂರು, ೧೯೯೦.

೨೫. ಮಾದೇವ್ ಭರಣಿ, ಶಿಕ್ಷಣ ಭೀಷ್ಮ, ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ, ತುಮಕೂರು, ೧೯೯೪.

೨೬. ಮೊಗಳ್ಳಿ ಗಣೇಶ್, ದಲಿತ ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭. ಮುರುಳೀಧರ ವೈ.ಜಿ., ದುರ್ಬಲ ವರ್ಗದವರಿಗೆ ಇರುವ ಸೌಲಭ್ಯಗಳು, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ೨೦೦೬.

೨೮. ಮೋಹನ್‌ಕೃಷ್ಣ ರೈ ಕೆ.(ಸಂ), ಚರಿತ್ರೆ ಅಧ್ಯಯನ, ಸಂಪುಟ ೩, ಸಂಚಿಕೆ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೨೯. ಮೋಹನ್‌ಕೃಷ್ಣ ರೈ ಕೆ., ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೩೦. ಮುನಿವೆಂಕಟಪ್ಪ(ಸಂ), ದಲಿತ ಚಳವಳಿ : ಒಂದು ಅವಲೋಕನ, ವಿಚಾರವಾದಿ ಪ್ರಕಾಶನ, ಮೈಸೂರು, ೧೯೯೮

೩೧. ರಾಜ್ ಎಂ.ಸಿ., ದಲಿತತತ್ವ ದಲಿತ ಮೂಲಗ್ರಂಥ, ಅಂಬೇಡ್ಕರ್ ಸಂಪನ್ಮೂಲ ಕೇಂದ್ರ, ತುಮಕೂರು, ೨೦೦೨

೩೨. ಲಕ್ಷ್ಮಣ ಸಿ.ಎಂ., ತುಮಕೂರು ಜಿಲ್ಲೆಯ ಭೌಗೋಳಿಕ ಪರಿಸರ ಮತ್ತು ಅಭಿವೃದ್ಧಿ, ದರ್ಶನ್ ಪ್ರಕಾಶನ, ತುಮಕೂರು, ೨೦೦೦.

೩೩. ಲಕ್ಷ್ಮಣ್ ತೆಲಗಾವಿ(ಸಂ), ಚರಿತ್ರೆ ಅಧ್ಯಯನ, ಸಂಪುಟ ೧, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೩೪. ವಿರೂಪಾಕ್ಷಿ ಪೂಜಾರಹಳ್ಳಿ(ಸಂ), **ಚರಿತ್ರೆ ಅಧ್ಯಯನ**, ಸಂಪುಟ ೪, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೩೫. ವಿರೂಪಾಕ್ಷಿ ಪೂಜಾರಹಳ್ಳಿ(ಸಂ), **ದಲಿತರು ಮತ್ತು ಚರಿತ್ರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೩೬. ವಿಠ್ಠಲ ಮೂರ್ತಿ ಆರ್., **ದಲಿತ ಚಳವಳಿಯ ನಾಳೆಗಳು**, ಪ್ರಭೆ ಪ್ರಕಾಶನ, ಬೆಂಗಳೂರು, ೨೦೦೫.

೩೭. ವೆಂಕಟೇಶನ್ ಎಚ್., **ನವ ಭಾರತದಲ್ಲಿ ಹರಿಜನರ ಹತ್ಯೆಗಳು**, ಕರ್ನಾಟಕ ದಲಿತ ಕ್ರಿಯಾ ಸಮಿತಿ, ಬೆಂಗಳೂರು, ೧೯೮೫.

೩೮. ಶಂಕರಪ್ಪ ಕೆ.ಎಂ., **ಬುದ್ಧ ಬರಲಿ ನಮ್ಮ ಊರಿಗೆ**, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಮೈಸೂರು ಶಾಖೆ, ಮೈಸೂರು, ೧೯೯೯.

೩೯. ಸ್ವಾಮಿ ಧರ್ಮತೀರ್ಥ, ಭಗವಾನ್ ಕೆ.ಎಸ್.(ಅನು), **ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ**, ಮಹಿಮ ಪ್ರಕಾಶನ, ಮೈಸೂರು, ೧೯೯೪.

೪೦. ಹನುಮಂತಯ್ಯ, **ದಲಿತ ಲೋಕದ ಒಳಗೆ**, ಮಾಹಿತಿ ಪ್ರಕಾಶನ, ಬೆಂಗಳೂರು, ೧೯೯೦.

ಇಂಗ್ಲಿಷ್ ಗ್ರಂಥ

1. **Visitors book,** Panchama Industrial school, Tumkur, 1927.

ಇಂಗ್ಲಿಷ್ ಸಂಚಿಕೆ

1. **Odyssey college magzine,** Sri Siddhartha Institute of Technology, maralur, Tumkur, 2009.

2. **Silver Jubilee,** Sri Siddharatha Education Society, Tumkur, 1984.

ಲೇಖನಗಳು

೧. ಅನಂತಮೂರ್ತಿ ಯು.ಆರ್., *ದಲಿತ ಚಳವಳಿ ಮತ್ತು ಸಂವೇದನಾಶೀಲತೆ, ಸಾಹಿತ್ಯ ವಿಮರ್ಶೆ,* (ದಲಿತ ಸಾಹಿತ್ಯ ಚರಿತ್ರೆಯ ಕೆಲವು ಟಿಪ್ಪಣಿಗಳು, ರಾಜೇಂದ್ರ ಚೆನ್ನಿ(ಸಂ), **ಶೂದ್ರ** ಸಂಪುಟ ೧೫, ಸಂಚಿಕೆ ೧, ೧೯೮೯.

೨. ಅರವಿಂದ ಮಾಲಗತ್ತಿ, *ಕನ್ನಡ ದಲಿತ ಸಾಹಿತ್ಯದ ಕೆಲವು ಅಪವಾದಗಳು,* **ಮುಂಗಾರು ದೈನಿಕ,** ೨೯.೧.೮೭, ೧೯೮೭.

೩. ಕೃಷ್ಣಪ್ಪ ಬಿ., *ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಿತ್ರ*, ಶ್ರೀ ಕುವೆಂಪು, ಶಿವರುದ್ರಪ್ಪ ಜಿ.ಎಸ್.(ಸಂ), ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೯೧.

೪. ಗಂಗಾರಾಮ್ ಚಂಡಾಳ, *ದಲಿತ ಸಾಹಿತ್ಯ ಆಶಯ*, ಅನ್ವೇಷಣೆ, ಸಂಪುಟ ೫, ಸಂಚಿಕೆ ೩೦, ೧೯೮೯.

೫. ಗಣೇಶನ್ ಎಸ್., *ಮತಾಂತರ ಒಂದು ದೂರಾಲೋಚನೆ*, ಸಮುದಾಯ ವಾರ್ತಾ ಪತ್ರ, ಸಂಚಿಕೆ, ೨೮, ೧೯೮೧.

೬. ಚಿದಂಬರ ಬೈಕಂಪಾಡಿ, *ಜಾತಿ ಮೀರಿದ ಸಾಹಿತ್ಯ ಬಂಡಾಯ*, ಮುಂಗಾರು ದೈನಿಕ, ೧೯೮೬.

೭. ಜನಾರ್ದನ ಎರ್ಪಕಟ್ಟೆ, *ದಲಿತ ಪ್ರಪಂಚ ಮತ್ತು ಸಾಹಿತ್ಯಾನುಭವ*, ಸಾಹಿತ್ಯ ಸಂಗಾತಿ, ಸಂಪುಟ ೩, ಸಂಚಿಕೆ ೨-೩, ೧೯೯೧.

೮. ತಿಮ್ಮೇಗೌಡ ನೊ.ಸಂ., *ದಲಿತ ಬಂಡಾಯ ಸಾಹಿತ್ಯ ಮತ್ತು ಸಾಮಾಜಿಕ ನೆಲೆ*, ರುಜುವಾತು, ೨೦, ೧೯೮೨

೯. ದಯಾನಂದ ಮಾನೆ, ಶಿವರುದ್ರ ಕಲ್ಲೋಳಿಕರ, *ಮಹಾರಾಷ್ಟ್ರ ದಲಿತ ಪ್ಯಾಂಥರ್ಸ್ ಚಳವಳಿ*, ಸಂಕ್ರಮಣ, ೨೩೬, ೧೯೯೨.

೧೦. ದುರ್ಗಾದಾಸ ಕೆ.ಆರ್., *ದಲಿತರ ಪ್ರಾತಿನಿಧಿಕ ಕೃತಿ ಒಡಲಾಳ*, ಕವಿರಾಜ ಮಾರ್ಗ, ಸಂಪುಟ ೫, ಸಂಚಿಕೆ ೧-೨, ೧೯೯೨.

೧೧. ನಾಗರಾಜ ಡಿ.ಆರ್., *ಮಾರ್ಕ್ಸ್ ಮತ್ತು ಧರ್ಮ ಕೆಲವು ಆನ್ವಯಿಕ ಟಿಪ್ಪಣಿಗಳು*, ಸಾಧನೆ, ಸಂಪುಟ ೨, ಸಂಚಿಕೆ ೪, ೧೯೯೩.

೧೨. ಭಂಡಾರಿ ಆರ್.ವಿ., *ಹಿಂದೂ ಸಂಪ್ರದಾಯದಲ್ಲಿ ದಲಿತರು*, ಬೆಳಗಾವಿ ಸಾಹಿತ್ಯ ಸಮ್ಮೇಳನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೦.

೧೩. ರಾಜಶೇಖರ ಜಿ., *ದಲಿತ ಚಳವಳಿ ಮತ್ತು ಸಾಹಿತ್ಯ ಕುರಿತು*, ಶೂದ್ರ, ಸಂಪುಟ ೧೪, ಸಂಚಿಕೆ ೧೧, ೧೯೮೮.

೧೪. ಸತ್ಯನಾರಾಯಣ ಕೆ., *ಹೊಸ ಭೂಮಿಕೆಯ ಅಭಾವ*, ಶೂದ್ರ, ಸಂಪುಟ ೧೪, ಸಂಚಿಕೆ ೧೧, ೧೯೮೮.

ನಿಯತಕಾಲಿಕೆಗಳು

೧. ಇತಿಹಾಸ ದರ್ಶನ

೨. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ

೩. ಪ್ರಬುದ್ಧ ಕರ್ನಾಟಕ

೪. ಮಾನವಿಕ, ಬೆಂಗಳೂರು

೫. ರುಜುವಾತು

೬. ಶೂದ್ರ

೭. ಸಂಕ್ರಮಣ

೮. ಸಾಧನೆ

೯. ಹೊಸತು ಹೊಸತು

ಪತ್ರಿಕೆಗಳು

೧. ದಲಿತ ವಾಯ್ಸ್

೨. ಪಂಚಮರ ಪತ್ರಿಕೆ

೩. ಪ್ರಜಾವಾಣಿ

೪. ಪ್ರಜಾಪ್ರಗತಿ

೫. ಭೀಮವಾಣಿ

೬. ಶೂದ್ರ ಪತ್ರಿಕೆ

೭. ಸಂವಾದ

ಎಂ.ಫಿಲ್.ನಿಬಂಧಗಳು(ಅಪ್ರಕಟಿತ)

೧. ಆಶಾ ಬಾಬು ಯಂಕಪ್ಪಗೋಳ, **ಬಾಗಲಕೋಟೆ ಜಿಲ್ಲೆಯ ದಲಿತ ಚಳವಳಿ : ಒಂದು ಅಧ್ಯಯನ**, ಮಾರ್ಗದರ್ಶಕರು : ಡಾ.ಎನ್.ಚಿನ್ನಸ್ವಾಮಿ ಸೋಸಲೆ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೨. ಸ್ವಾಮಿ ಕೆ.ಎಸ್., **ಪಂಚಮರ ಆರ್.ಗೋಪಾಲಸ್ವಾಮಿ ಅಯ್ಯರ್: ಒಂದು ಅಧ್ಯಯನ**, ಮಾರ್ಗದರ್ಶಕರು: ಡಾ.ಎನ್.ಚಿನ್ನಸ್ವಾಮಿ ಸೋಸಲೆ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೨

ಅವರ ಬದುಕಿನ ಮುಖ್ಯ ಘಟನೆಗಳು

೧೯೧೫ : ಜನನ, ಕುಣಿಗಲ್ ತಾಲ್ಲೂಕಿನ ಅಮೃತೂರಿನಲ್ಲಿ

೧೯೨೬ : ಬೆಂಗಳೂರಿನಲ್ಲಿ ಮೊದಲ ಕಲಾ ಪರೀಕ್ಷೆಯಲ್ಲಿ ತೇರ್ಗಡೆ.

೧೯೨೭ : ಗಾಂಧೀಜಿ ಅವರೊಂದಿಗೆ ಮೊದಲ ಭೇಟಿ.

೧೯೩೨ : ಗಾಂಧೀಜಿ ಅವರ ಭಾವಚಿತ್ರ ರಚಿಸಿ, ಗಾಂಧೀಜಿಗೆ ಅರ್ಪಿಸಿದ್ದು.

೧೯೩೩ : ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ.

೧೯೩೬ : ಮೈಸೂರಿನ ಡ್ರಾಯಿಂಗ್ ಹೈಯರ್ ಪರೀಕ್ಷೆಯಲ್ಲಿ ತೇರ್ಗಡೆ.

೧೯೩೭ : ಮೈಸೂರಿನ ಜಲಪುರಿಯಲ್ಲಿ ಯುವಕ ಸಂಘ ಸ್ಥಾಪನೆ, ಗಂಗಮಾಳಮ್ಮ ಅವರೊಡನೆ ಗಂಗಾಧರಯ್ಯ ಅವರ ವಿವಾಹ. ಕಪಾಲೇಶ್ವರ ತೈಲವರ್ಣ ಕೃತಿ ರಚನೆ. ಮೈಸೂರಿನಲ್ಲಿ ರೈಲ್ವೇ ಇಲಾಖೆಯಲ್ಲಿ ನೌಕರಿ-ತೀರ್ಥಹಳ್ಳಿಯಲ್ಲಿ ಕಲಾಶಿಕ್ಷಕರಾಗಿ ನೇಮಕ.

೧೯೪೦ : ಚಿಕ್ಕಬಳ್ಳಾಪುರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಶ್ರೀ ವೀರರಾಘವಾಚಾರ್ ಅವರಿಂದ ಪ್ರಶಸ್ತಿ.

೧೯೪೧ : ಗೊಲ್ಲಹಳ್ಳಿಯಲ್ಲೇ ವಾಸಮಾಡಲು ಪ್ರಾರಂಭಿಸಿದ್ದು.

೧೯೪೨ : ಕಲಾಶಿಕ್ಷಕ ಹುದ್ದೆಗೆ ರಾಜೀನಾಮೆ.

ಮೊದಲನೆಯ ಉಚಿತ ವಿದ್ಯಾರ್ಥಿನಿಲಯ ಪ್ರಾರಂಭ.

೧೯೪೫ : ಮೈಸೂರು ನ್ಯಾಯ ವಿಧಾಯಕ ಸಭಾ ಸದಸ್ಯರಾಗಿ ಚಿಕ್ಕಮಗಳೂರಿನ ಮೀಸಲು ಕ್ಷೇತ್ರದಿಂದ ಆಯ್ಕೆ.

೧೯೪೬ : ತಂದೆ ಮರಿಯಪ್ಪ ಅವರ ನಿಧನ.

೧೯೪೮ : ಕೆಂಗಲ್ ಹನುಮಂತಯ್ಯ ಅವರ ನೇತೃತ್ವದ ಸರ್ಕಾರದಲ್ಲಿ ವಿಧಾನಪರಿಷತ್ ಸದಸ್ಯರಾಗಿ ನಾಮಕರಣ.

೧೯೫೧ : ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಕೌನ್ಸಿಲ್ ಸದಸ್ಯರಾಗಿ ನಾಮಕರಣ.

೧೯೫೨ : ಕೋಲಾರದ ಚಿನ್ನದ ಗಣಿಗೆ ಸರ್ಕಾರ ನೇಮಿಸಿದ ಸಮಿತಿ ಸದಸ್ಯರಾಗಿ ಪರಿಶೀಲನಾ ಭೇಟಿ.

೧೯೫೪ : ಡಾ.ಬಿ.ಆರ್.ಅಂಬೇಡ್ಕರ್ ಅವರ ಭೇಟಿ ಬೆಂಗಳೂರಿನಲ್ಲಿ.

೧೯೫೭ : ಬುದ್ಧಗಯೆ, ಸಾರನಾಥ ಮತ್ತು ನಾಗಪುರಕ್ಕೆ ಪ್ರಥಮ ಭೇಟಿ.

೧೯೫೮ : ಸಂತ ವಿನೋಬಾ ಭಾವೆ ಅವರೊಂದಿಗೆ ಭೇಟಿ, ಚರ್ಚೆ ಗೊಲ್ಲಹಳ್ಳಿಯಲ್ಲಿ.

೧೯೫೯ : ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಮೊದಲ ಪ್ರೌಢಶಾಲೆ ಗೊಲ್ಲಹಳ್ಳಿ (ಈಗಿನ ಸಿದ್ಧಾರ್ಥ ನಗರ)ಯಲ್ಲಿ ಪ್ರಾರಂಭ

೧೯೬೩ : ಶ್ರೀ ಸಿದ್ಧಾರ್ಥ ಶಿಕ್ಷಕರ ತರಬೇತಿ ಕೇಂದ್ರ ಸ್ಥಾಪನೆ.

೧೯೭೦ : ಶ್ರೀ ಸಿದ್ಧಾರ್ಥ ಬಿ.ಎಡ್.ಕಾಲೇಜು ಸ್ಥಾಪನೆ.

೧೯೭೫ : ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸಮಾಜಸೇವೆಗಾಗಿ.

೧೯೭೭ : ಶ್ರೀ ಸಿದ್ಧಾರ್ಥ ಎಂಜಿನಿಯರಿಂಗ್ ಕಾಲೇಜು ಸ್ಥಾಪನೆ.

೧೯೮೧ : ಶ್ರೀಲಂಕಾಗೆ ಭೇಟಿ.

೧೯೮೨ : ಭಗವಾನ್ ಬುದ್ಧನ ತೈಲವರ್ಣ ಚಿತ್ರರಚನೆ.

೧೯೮೪ : ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಬೆಳ್ಳಿಹಬ್ಬ, ಗ್ಯಾನಿ ಜೇಲ್‌ಸಿಂಗ್ ಅಧ್ಯಕ್ಷತೆಯಲ್ಲಿ.

೧೯೮೫ : ಗೊಲ್ಲಹಳ್ಳಿಯಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರ ಮತ್ತು ಉಚಿತ ಕನ್ನಡಕಗಳ ವಿತರಣೆ.

೧೯೮೮ : ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜು ಸ್ಥಾಪನೆ.

೧೯೮೯ : ಶ್ರೀ ಸಿದ್ಧಾರ್ಥ ಎಂಜಿನಿಯರಿಂಗ್ ಕಾಲೇಜಿನ ಮುಖ್ಯ ಕಟ್ಟಡ ಪ್ರಾರಂಭೋತ್ಸವ ಮತ್ತು ಮೆಡಿಕಲ್ ಕಾಲೇಜಿನ ಕಟ್ಟಡ ಶಿಲಾನ್ಯಾಸ-ದಿವಂಗತ ರಾಜೀವಗಾಂಧಿ ಅವರಿಂದ.

೧೯೯೧ : ಅಂಬೇಡ್ಕರ್ ಶತಮಾನೋತ್ಸವದ ಅಂಗವಾಗಿ 'ಶತಮಾನದ ಅಂಬೇಡ್ಕರ್' ಸಂಕಲಿತ ಕೃತಿ ಬಿಡುಗಡೆ.

೧೯೯೪ : ಬುದ್ಧಗಯಾ ಮತ್ತು ನಾಗಪುರಕ್ಕೆ ಎರಡನೇ ಭೇಟಿ. ಅಂತಾರಾಷ್ಟ್ರೀಯ ಧ್ಯಾನ ಕೇಂದ್ರಕ್ಕೆ ಬುದ್ಧಗಯಾದಲ್ಲಿ ಶಿಲಾನ್ಯಾಸ. ಬುದ್ಧಗಯಾದ ಅನಾಥಾಶ್ರಮದ ಉದ್ಘಾಟನೆ.

ಬಸವೇಶ್ವರರ ಮತ್ತು ಡಾ.ಶ್ರೀ ಶಿವಕುಮಾರ ಸ್ವಾಮಿಗಳ ಭಾವಚಿತ್ರ ಅನಾವರಣ. ಶ್ರೀ ಸಿದ್ಧಾರ್ಥ ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ.

೧೯೯೫ : ಗಂಗಾಧರಯ್ಯ ಅವರ ಮರಣ.

೨೦೦೮ : ತುಮಕೂರು ವಿಶ್ವವಿದ್ಯಾಲಯ ಗಂಗಾಧರಯ್ಯ ಅವರಿಗೆ ಮರಣೋತ್ತರ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿದ್ದು.

೩

ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ವಿವಿಧ ವಿದ್ಯಾಕೇಂದ್ರಗಳು

೧. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಸಿದ್ಧಾರ್ಥನಗರ, ತುಮಕೂರು ತಾಲ್ಲೂಕು.

೨. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ವಿನೋಬನಗರ, ತುಮಕೂರು.

೩. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಕುಣಿಗಲ್, ತುಮಕೂರು ಜಿಲ್ಲೆ.

೪. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಸೋಮೇಶ್ವರ ಪುರಂ, ತುಮಕೂರು(ವಿದ್ಯಾರ್ಥಿನಿಯರಿಗೆ).

೫. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಸಿದ್ಧಾರ್ಥನಗರ(ಗುರುದೇವ ರೂರಲ್ ಹೈಸ್ಕೂಲ್), ದಂಡಿನದಿಬ್ಬ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.

೬. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಪ್ಯಾಲೇಸ್ ಹೊನ್ನಮಾಚನಹಳ್ಳಿ, ಕುಣಿಗಲ್ ತಾಲ್ಲೂಕು.

೭. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಮಾರ್ಕೋನಹಳ್ಳಿ, ಕುಣಿಗಲ್ ತಾಲ್ಲೂಕು

೮. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ತಾಳಗುಂದ, ಶಿರಾ ತಾಲ್ಲೂಕು

೯. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಮಧುಗಿರಿ

೧೦. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ವಿಜಯನಗರ, ಬೆಂಗಳೂರು

೧೧. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, (ಡಾ.ಅಂಬೇಡ್ಕರ್ ರೂರಲ್ ಹೈಸ್ಕೂಲ್), ಅಣ್ಣಮಲ್ಲೇನಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.

೧೨. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಸುರಿಗೇನಹಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.

೧೩. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಬಿಳಿದೇವಾಲಯ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.

೧೪. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಮುಳ್ಳುಕಟ್ಟಮ್ಮನ ಪಾಳ್ಯ, ಮಾಗಡಿ ತಾಲ್ಲೂಕು, ಬೆಂಗಳೂರು ಜಿಲ್ಲೆ.

೧೫. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಚಿಕ್ಕಮಸ್ಕಲ್, ಮಾಗಡಿ ತಾಲ್ಲೂಕು, ಬೆಂಗಳೂರು ಜಿಲ್ಲೆ

೧೬. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಕೊತ್ತನೂರು, ಬೆಂಗಳೂರು.

೧೭. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಬಾಪೂಜಿನಗರ, ಬೆಂಗಳೂರು.

೧೮. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಗಾಂಧಿನಗರ, ಮೈಸೂರು.

೧೯. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಅಶೋಕಪುರಂ, ಮೈಸೂರು.

೨೦. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಗಾಂಧಿನಗರ, ಕೋಲಾರ.

೨೧. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಮಳವಳ್ಳಿ, ಮಂಡ್ಯ ಜಿಲ್ಲೆ.

೨೨. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಭದ್ರಾವತಿ, ಶಿವಮೊಗ್ಗ ಜಿಲ್ಲೆ.

೨೩. ಶ್ರೀ ಸಿದ್ಧಾರ್ಥ ಪ್ರೌಢಶಾಲೆ, ಚಿಕ್ಕಮಂಡಿಗಾನ ಹಳ್ಳಿ, ಹಾಸನ.

ಪದವಿಪೂರ್ವ ಕಾಲೇಜು

೨೪. ಶ್ರೀ ಸಿದ್ಧಾರ್ಥ ಪದವಿಪೂರ್ವ ಕಾಲೇಜು, ಜೆ.ಸಿ.ರಸ್ತೆ, ತುಮಕೂರು.

೨೫. ಶ್ರೀ ಸಿದ್ಧಾರ್ಥ ಪದವಿಪೂರ್ವ ಸಂಘಮಿತ್ರ ಮಹಿಳಾ-ಕಂಪೋಸಿಟ್ ಜೂನಿಯರ್ ಕಾಲೇಜ್, ಬೆಂಗಳೂರು.

೨೬. ಶ್ರೀ ಸಿದ್ಧಾರ್ಥ ಪದವಿಪೂರ್ವ ಕಾಲೇಜು, ಮಧುಗಿರಿ, ತುಮಕೂರು ಜಿಲ್ಲೆ.

೨೭. ಶ್ರೀ ಸಿದ್ಧಾರ್ಥ ಪದವಿಪೂರ್ವ ಕಾಲೇಜು, ಕುಣಿಗಲ್, ತುಮಕೂರು ಜಿಲ್ಲೆ.

೨೮. ಶ್ರೀ ಸಿದ್ಧಾರ್ಥ ಪದವಿಪೂರ್ವ ಕಾಲೇಜು, ಮಳವಳ್ಳಿ, ಮಂಡ್ಯ ಜಿಲ್ಲೆ.

ಸಂಸ್ಕೃತ ಪಾಠಶಾಲೆಗಳು

೨೯. ಸಿದ್ಧಾರ್ಥನಗರ, ತುಮಕೂರು ತಾಲ್ಲೂಕು.

೩೦. ವಿನೋಬನಗರ, ತುಮಕೂರು.

೩೧. ಮಧುಗಿರಿ, ತುಮಕೂರು ಜಿಲ್ಲೆ.

೩೨. ಕುಣಿಗಲ್, ತುಮಕೂರು ಜಿಲ್ಲೆ.

೩೩. ಕೊತ್ತನೂರು, ಬೆಂಗಳೂರು ಜಿಲ್ಲೆ.

೩೪. ಪ್ಯಾಲೇಸ್ ಹೊನ್ನಮಾಚನಹಳ್ಳಿ, ತುಮಕೂರು ಜಿಲ್ಲೆ.

೩೫. ಚಿಕ್ಕಮಂಡಿಗಾನಹಳ್ಳಿ, ಹಾಸನ ಜಿಲ್ಲೆ.

೩೬. ಮಳವಳ್ಳಿ, ಮಂಡ್ಯ ಜಿಲ್ಲೆ.

೩೭. ಗಾಂಧಿನಗರ, ಮೈಸೂರು.

ಪಾಲಿಭಾಷಾ ಶಾಲೆ : ಬಿ.ಎಡ್/ಪ್ರಥಮ ದರ್ಜೆ ಕಾಲೇಜು

೩೮. ಶ್ರೀ ಸಿದ್ಧಾರ್ಥ ಪಾಲಿಭಾಷಾ ಶಾಲೆ, ಸಿದ್ಧಾರ್ಥನಗರ, ತುಮಕೂರು ತಾಲ್ಲೂಕು.

೩೯. ಶ್ರೀ ಸಿದ್ಧಾರ್ಥ ಬಿ.ಎಡ್.ಕಾಲೇಜ್, ಮರಳೂರು, ತುಮಕೂರು.

೪೦. ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜ್, ಮರಳೂರು, ತುಮಕೂರು.

ಐ.ಟಿ.ಐ

೪೧. ಶ್ರೀ ಸಿದ್ಧಾರ್ಥ ಕೈಗಾರಿಕಾ ತರಬೇತಿ ಕೇಂದ್ರ, ಮರಳೂರು, ತುಮಕೂರು.

೪೨. ಶ್ರೀ ಸಿದ್ಧಾರ್ಥ ಕೈಗಾರಿಕಾ ತರಬೇತಿ ಕೇಂದ್ರ, ಕುಣಿಗಲ್, ತುಮಕೂರು ಜಿಲ್ಲೆ.

ಎಂಜಿನಿಯರಿಂಗ್/ಮೆಡಿಕಲ್/ನರ್ಸಿಂಗ್ ಟ್ರೈನಿಂಗ್

೪೩. ಶ್ರೀ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯ.

೪೪. ಶ್ರೀ ಸಿದ್ಧಾರ್ಥ ವೈದ್ಯಕೀಯ ಮತ್ತು ಆಸ್ಪತ್ರೆ ಮಹಾ ವಿದ್ಯಾಲಯ.

೪೫. ಶ್ರೀ ಸಿದ್ಧಾರ್ಥ ನರ್ಸಿಂಗ್ ಟ್ರೈನಿಂಗ್ ಕಾಲೇಜು.

೪೬. ಶ್ರೀ ಸಿದ್ಧಾರ್ಥ ದಂತ ವೈದ್ಯಕೀಯ ಮಹಾವಿದ್ಯಾಲಯ.

ಟಿ.ಟಿ.ಐ

೪೭. ಶ್ರೀ ಸಿದ್ಧಾರ್ಥ ಟಿ.ಟಿ.ಐ, ಸಿದ್ಧಾರ್ಥನಗರ.

೪೮. ಶ್ರೀ ಸಿದ್ಧಾರ್ಥ ಟಿ.ಟಿ.ಐ, ತಿಪಟೂರು, ತೂಮಕೂರು ಜಿಲ್ಲೆ

೪೯. ಶ್ರೀ ಸಿದ್ಧಾರ್ಥ ಎನ್.ಟಿ.ಟಿ.ಐ., ಸೋಮೇಶ್ವರಪುರಂ, ತುಮಕೂರು.

ವಿದ್ಯಾರ್ಥಿ ನಿಲಯಗಳು

೧. ಸಿದ್ಧಾರ್ಥ ನಗರ, ತುಮಕೂರು.

೨. ವಿನೋಬನಗರ, ತುಮಕೂರು.

೩. ಮಧುಗಿರಿ, ತುಮಕೂರು ಜಿಲ್ಲೆ.

೪. ಪ್ಯಾಲೇಸ್ ಹೊನ್ನಮಾಚನಹಳ್ಳಿ, ತುಮಕೂರು ಜಿಲ್ಲೆ.

೫. ಮಾರ್ಕೋನಹಳ್ಳಿ, ಕುಣಿಗಲ್ ತಾಲ್ಲೂಕು.

೬. ವೈದ್ಯಕೀಯ ಕಾಲೇಜು ಪುರುಷರ ವಿದ್ಯಾರ್ಥಿನಿಲಯ, ತುಮಕೂರು.

೭. ವೈದ್ಯಕೀಯ ಕಾಲೇಜು ಮಹಿಳೆಯರ ವಿದ್ಯಾರ್ಥಿನಿಲಯ, ತುಮಕೂರು.

೮. ದಾದಿಯರ ತರಬೇತಿ ಕಾಲೇಜು ವಿದ್ಯಾರ್ಥಿನಿಲಯ, ತುಮಕೂರು.

೯. ಎಂಜಿನಿಯರಿಂಗ್ ಕಾಲೇಜು ಪುರುಷರ ವಿದ್ಯಾರ್ಥಿನಿಲಯ, ತುಮಕೂರು.

೧೦. ಎಂಜಿನಿಯರಿಂಗ್ ಕಾಲೇಜು ಮಹಿಳೆಯರ ವಿದ್ಯಾರ್ಥಿನಿಲಯ, ತುಮಕೂರು.

೧೧. ಬಿ.ಎಡ್.ಕಾಲೇಜು ಪುರುಷರ ವಿದ್ಯಾರ್ಥಿನಿಲಯ, ತುಮಕೂರು.

೧೨. ಬಿ.ಎಡ್.ಕಾಲೇಜು ಮಹಿಳೆಯರ ವಿದ್ಯಾರ್ಥಿನಿಲಯ, ತುಮಕೂರು.

೧೩. ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿನಿಲಯ, ತುಮಕೂರು.

೧೪. ಜೂನಿಯರ್ ಕಾಲೇಜು ವಿದ್ಯಾರ್ಥಿನಿಲಯ, ತುಮಕೂರು.

೧೫. ಸೋಮೇಶ್ವರ ಪುರಂ ವಿದ್ಯಾರ್ಥಿನಿಯರ ಪ್ರೌಢಶಾಲಾ ವಿದ್ಯಾರ್ಥಿನಿಲಯ, ತುಮಕೂರು.

೧೬. ಶ್ರೀ ಸಂಘಮಿತ್ರ ಕಂಪೋಸಿಟ್ ಜೂನಿಯರ್ ಕಾಲೇಜು ವಿದ್ಯಾರ್ಥಿನಿಯರ ನಿಲಯ, ಬೆಂಗಳೂರು.

೧೭. ಗಾಂಧಿನಗರ, ಮೈಸೂರು.

೧೮. ಅಶೋಕಪುರಂ, ಮೈಸೂರು.

೧೯. ಕೊತ್ತನೂರು, ಬೆಂಗಳೂರು.

೨೦. ಬಾಪೂಜಿ ನಗರ, ಬೆಂಗಳೂರು.

೨೧. ಚಿಕ್ಕಮಸ್ಕಲ್ ಮಾಗಡಿ, ತಾಲ್ಲೂಕು, ಬೆಂಗಳೂರು ಜಿಲ್ಲೆ.



ಕಾಲೇಜು ಯುವಕ ಸಂಘದ ಬೀಳ್ಕೊಡುಗೆ ಸಮಾರಂಭ (1937)(ಮಧ್ಯದಲ್ಲಿ ಮೈಸೂರು ಪೇಟ ಧರಿಸಿ ಕೂತಿರುವವರೇ ಗಂಗಾಧರಯ್ಯಅವರು.)




ಮೈಸೂರು ವಿಧಾನ ಪರಿಷತ್ತಿನ ಸದಸ್ಯರೊಂದಿಗೆ (1952–54) ಗಂಗಾಧರಯ್ಯಅವರು (ಮೇಲಿನಿಂದ ಎರಡನೇ ಸಾಲು–ಬಲಗಡೆಯಿಂದ ಐದನೆಯವರು.)



ಮೈಸೂರು ವಿಧಾನ ಪರಿಷತ್ತಿನ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿ (1955)(ಕೂತವರಲ್ಲಿ ಬಲತುದಿಯವರು ಗಂಗಾಧರಯ್ಯಅವರು.ನಾಲ್ಕು ಮತ್ತು ಐದನೆಯವರು ಹುಚ್ಚಮಾಸ್ತಿಗೌಡ ಮತ್ತು ಕೆಂಗಲ್ ಹನುಮಂತಯ್ಯಅವರು.)



ಮೈಸೂರು ವಿಶ್ವವಿದ್ಯಾನಿಲಯದ ಕೌನ್ಸಿಲ್ ಸದಸ್ಯ ಮತ್ತು ಕುವೆಂಪು ಅವರೊಂದಿಗೆ ಗಂಗಾಧರಯ್ಯಅವರು (1952–56) ಕೂತಿರುವವರಲ್ಲಿ ಬಲತುದಿಯವರು.



ಸಂಸ್ಥೆಯ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಅಂದಿನ ರಾಷ್ಟ್ರಪತಿ ಸರ್ದಾರ್ ಗ್ಯಾನಿ ಜೈಲ್ ಸಿಂಗ್ ಅವರಿಗೆ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಅವರಿಂದ ನೆನಪಿನ ಕಾಣಿಕೆ ವಿತರಣೆ.



ಮೈಸೂರು ಕೌನ್ಸಿಲ್ ಸದಸ್ಯರಾಗಿ ಗಂಗಾಧರಯ್ಯಅವರು.



ವಿದ್ಯಾರ್ಥಿನಿಲಯದ ಹುಡುಗರೊಂದಿಗೆ ಬೆಳಗಿನ ಪ್ರಾರ್ಥನೆ ಮತ್ತು ಉಪನ್ಯಾಸ.



ಬುದ್ಧಗಯಾದಲ್ಲಿ ಅಂತಾರಾಷ್ಟ್ರೀಯ ಧ್ಯಾನ ಕೇಂದ್ರಕ್ಕೆ ಶಿಲಾನ್ಯಾಸ ಮಾಡಿದಾಗಿನ ಚಿತ್ರ.



ಸಿದ್ಧಾರ್ಥನಗರದ ಸಂಸ್ಥೆಯ ಮೊದಲನೆಯ ಪ್ರೌಢಶಾಲೆಯ ಆವರಣದಲ್ಲಿ
ಗಂಗಾಧರಯ್ಯಅವರು.



1982ರಲ್ಲಿ ರಚಿಸಿದ ಭಗವಾನ್ ಬುದ್ಧನ ಭಾವಚಿತ್ರ.



1937ರಲ್ಲಿ ಹೆಚ್.ಎಂ.ಗಂಗಾಧರಯ್ಯಅವರು ರಚಿಸಿದ ಕಪಾಲೇಶ್ವರ ಚಿತ್ರ.



1976ರಲ್ಲಿ ರಾಜ್ಯಪ್ರಶಸ್ತಿ ಪಡೆದ ಸಂಸ್ಥಾಪಕ ಕಾರ್ಯದರ್ಶಿಗಳಾದ ಮಾನ್ಯ ಶ್ರೀ ಹೆಚ್.ಎಂ. ಗಂಗಾಧರಯ್ಯಅವರಿಗೆ ಅಂದಿನ ವಿದ್ಯಾಮಂತ್ರಿಗಳಾದ ಎಂ.ಮಲ್ಲಿಕಾರ್ಜುನಸ್ವಾಮಿ ಅವರು ಸಂಸ್ಥೆಯ ನೌಕರ ವರ್ಗದವರ ಪರವಾಗಿ ನೆನಪಿನ ಕಾಣಿಕೆಯನ್ನು ಅರ್ಪಿಸುತ್ತಿರುವುದು.



ಗೊಲ್ಲಹಳ್ಳಿಯಲ್ಲಿ ಪ್ರಾರಂಭವಾದ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಮೊದಲನೆಯ ಪ್ರೌಢಶಾಲೆಯ ಉದ್ಘಾಟನಾ ಸಮಾರಂಭದ ಚಿತ್ರ. ಉದ್ಘಾಟಿಸಿದ ಡಾ॥ ಶ್ರೀ ಶಿವಕುಮಾರ ಸ್ವಾಮಿಗಳನ್ನು ಕಾಣಬಹುದು. (ಕೂತಿರುವವರಲ್ಲಿ ಎಡದಿಂದ ಮೂರನೆಯವರು ಗಂಗಾಧಯ್ಯಅವರು.)



ದಿವಂಗತ ಪ್ರಧಾನ ಮಂತ್ರಿ ಶ್ರೀ ರಾಜೀವ್ ಗಾಂಧಿಯವರನ್ನು ಸಂಸ್ಥೆಗೆ ಸ್ವಾಗತಿಸುತ್ತಿರುವ ಗಂಗಾಧಯ್ಯಅವರು.



ರಾಜೀವ್ ಗಾಂಧಿಅವರಿಂದ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ರೂವಾರಿಗೆ ಸನ್ಮಾನ.



ಶ್ರೀ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದ ಮುಖ್ಯ ಕಟ್ಟಡ.



ಶ್ರೀ ಸಿದ್ಧಾರ್ಥ ತಾಂತ್ರಿಕ ಕಾಲೇಜಿನ ನೂತನ ಹಾಸ್ಟಲ್ ಕಟ್ಟಡದ ಎದುರು.



ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜಿನ ಶಂಕುಸ್ಥಾಪನೆಗೆ ಆಗಮಿಸಿದ್ದ ಆಗಿನ ಪ್ರಧಾನ ಮಂತ್ರಿ
ಶ್ರೀ ರಾಜೀವ್ ಗಾಂಧಿಅವರಿಗೆ ಗಂಗಾಧಯ್ಯಅವರಿಂದ ಸ್ವಾಗತ.



ಸ್ವಾಮಿ ವಿವೇಕಾನಂದರು 1893ರಲ್ಲಿ ಚಿಕಾಗೋದ ಸರ್ವಧರ್ಮ ಸಮ್ಮೇಳನದಲ್ಲಿ ಭಾಷಣ ಮಾಡಿದ ಶತಮಾನೋತ್ಸವ ನೆನಪಿನ ರಥಯಾತ್ರೆ ಸಿದ್ಧಾರ್ಥ ಮೆಡಿಕಲ್ ಕಾಲೇಜಿನ ಮುಂಭಾಗಕ್ಕೆ ಆಗಮಿಸಿದಾಗ.



ಶ್ರೀ ಸಿದ್ಧಾರ್ಥ ವೈದ್ಯಕೀಯ ಮಹಾ ವಿದ್ಯಾಲಯದ ಕಟ್ಟಡದ ಎದುರು ಗಂಗಾಧರಯ್ಯಅವರು.



ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಹೊರ ರೋಗಿಗಳ ವಿಭಾಗದ ಕಟ್ಟಡ.



1985ರ ಮೇ ತಿಂಗಳಲ್ಲಿ ನಡೆದ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ರೋಗಿಯೊಬ್ಬನ ನೇತ್ರ ಶಸ್ತ್ರ ಚಿಕಿತ್ಸೆಯನ್ನು ಹೆಚ್.ಎಂ.ಗಂಗಾಧರಯ್ಯ ಅವರು ವೀಕ್ಷಿಸುತ್ತಿರುವುದು.



ಕುಟುಂಬ ಪರಿವಾರ ಸಮೇತರಾಗಿ ಗಂಗಾಧರಯ್ಯ ಅವರು.